
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 18, 2012 ಪುಟ 20 ರೂ. 14/-



ಧೀರೂಭಾಯಿ ಮರೆಮಾಚಿದ ಮತ್ತೊಂದು ಮುಖ




ಕುದಿಯುವ ಯಡ್ಡಿ ಸ್ಫೋಟಕ್ಕೆ ರೆಡಿ

ಾವಳಿ: ಮನೆಮನೆಯಲ್ಲೂ ಮತಾಂತರ, ಮಸೀದಿಗಳಲ್ಲಿ ಟೆರರಿಸ್ಟರು!



ಮರಿ ಕುಮಾರ ನಿಖಿಲ್ ಎಂಟ್ರಿ



ಸಿಂದಗಿ ಪಾಕಿಸ್ತಾನಿ ಧ್ವಜ ಹಾರಿಸಿದ ಸಂಘಪರಿವಾರ

ಾಗೇರಿ ಕರಾಮತ್ತಿಗೆ ಡಿಸಿ ಎತ್ತಂಗಡಿ



ಕರ್ನಾಟಕದ ಜಾನುವಾರು ಹತ್ಯಾ ನಿಷೇಧ ಮಸೂದೆಗೂ ರಾಷ್ಟ್ರಪತಿ ಅಂಕಿತ ಹಾಕುವರೇ?

ಮಧ್ಯಪ್ರದೇಶದ ಗೋಸಂತತಿ ವಧಾ ನಿಷೇಧ ಕಾಯಿದೆಗೆ ರಾಷ್ಟ್ರಪತಿಯವರ ಅಂಕಿತ ಬಿದ್ದಿದೆ. ಅದು ಇನ್ನು ಕಾಯಿದೆಯಾಗಿ ಬಂದು ಗೋವನ್ನು ರಕ್ಷಿಸುತ್ತದೋ ಇಲ್ಲವೋ ಒಟ್ಟಿನಲ್ಲಿ ಮಧ್ಯಪ್ರದೇಶದ ಮುಸ್ಲಿಮರ ಬೇಟೆಯಾಡಲು ಸಜ್ಜಾಗಿರುವುದಂತೂ ನಿಜ. 1964ರ ಕಾಯಿದೆ ಕೇವಲ 12 ವರ್ಷಗಳಿಗೆ ಮೇಲ್ಪಟ್ಟ ಗೋವುಗಳನ್ನು ವಧೆ ಮಾಡಲು ಅನುಮತಿ ಕೊಟ್ಟರೆ 2004ರಲ್ಲಿ ಅಲ್ಲಿ ಬಿಜೆಪಿ ಪ್ರಭಾವಿತ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಗೋಸಂತತಿ ವಧೆಯ ಮೇಲೆ ಸಂಪೂರ್ಣ ನಿಷೇಧ ಹಾಕುವ ಮಸೂದೆಯೊಂದು ಪ್ರಸ್ತಾಪಕ್ಕೆ ಬಂದಿತ್ತು. 2010ರಲ್ಲಿ ಎಲ್ಲೆಲ್ಲಿ ಬಿಜೆಪಿ ಸರ್ಕಾರಗಳಿವೆಯೋ ಅಲ್ಲೆಲ್ಲಾ ಗೋಹತ್ಯೆಯ ನಿಷೇಧದ ನೆಪದಲ್ಲಿ ಮುಸ್ಲಿಂ ವ್ಯಾಪಾರಿಗಳನ್ನು ಬಲಿಹಾಕಬಲ್ಲಂತ ಕಾಯಿದೆಯೊಂದನ್ನು ತರಲು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ತೀರ್ಮಾನ ಮಾಡಿತ್ತು. ಅದರ ಹಿಂದಿರುವ ಪ್ರಚ್ಛನ್ನ ಕೋಮುವಾದಿ ಅಜೆಂಡಾವನ್ನು ಬಲ್ಲ ತಥಾಕಥಿತ ಸೆಕ್ಯೂಲಾರ್ ಪಕ್ಷಗಳೂ ಸಹ ಹಿಂದೂ ಸಂಸ್ಕೃತಿ ರಕ್ಷಣೆಯ ಹೆಸರಲ್ಲಿ ಮತ್ತು ಹಿಂದೂ ಮತ ಬ್ಯಾಂಕ್ ಹಾಳಾಗಬಹುದೆಂಬ ಭಯದಲ್ಲಿ ಮೌನ ಸಹಕಾರ ನೀಡಿದವು. ಅದರ ಮುಂದುವರಿಕೆಯೋ ಎಂಬಂತೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದರೂ ಈ ಕೋಮುವಾದಿ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ ಸಿಕ್ಕಿದೆ. ನಮ್ಮ ಸಂಸದೀಯ ಪ್ರಜಾತಂತ್ರದ ಆಡಳಿತದಲ್ಲಿ ಕೇಂದ್ರ ಕ್ಯಾಬಿನೆಟ್‌ನ ಅಭಿಪ್ರಾಯಕ್ಕೆ ವಿರುದ್ಧವಾಗಿ ರಾಷ್ಟ್ರಪತಿಗಳು ಯಾವುದೇ ಮಸೂದೆಗೆ ಅಂಕಿತ ಹಾಕುವುದು ಕಷ್ಟ. ಹೀಗಾಗಿ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಪರತೆಯ ಬಣ್ಣವೂ, ರೈತ-ದಲಿತ-ಪರತೆಯ ಬಣ್ಣವೂ ಕಳಚಿಬಿದ್ದಿದೆ.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಮಧ್ಯಪ್ರದೇಶಕ್ಕಿಂತಲೂ ಭೀಕರ ಅಪಾಯವಿರುವ "ಜಾನುವಾರು ಹತ್ಯಾ ನಿಷೇಧ ಮಸೂದೆ"ಯನ್ನು ವಿರೋಧ ಪಕ್ಷಗಳ ವಿರೋಧದ (ಅರೆ ಮನಸ್ಸಿನ) ನಡುವೆಯೂ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಪಾಸುಮಾಡಿಕೊಂಡಿದೆ. ಆದರೆ ರಾಜ್ಯಪಾಲರು ತಮ್ಮದೇ ರಾಜಕಾರಣಕ್ಕೆ ಅದರ ಬಗ್ಗೆ ಸಕಾರಣವಾದ ಆಕ್ಷೇಪ ತೆಗೆದು ರಾಷ್ಟ್ರಪತಿಗಳ ಅಂಕಿತಕ್ಕೆ ಕಳಿಸಿದ್ದಾರೆ. ಅದಿನ್ನೂ ರಾಷ್ಟ್ರಪತಿ ಕಚೇರಿಯಲ್ಲಿ ಕಾಯುತ್ತಿದ್ದು, ಮಧ್ಯಪ್ರದೇಶ ವಿಧೇಯಕಕ್ಕೆ ಅಂಕಿತ ಸಿಕ್ಕ ಮೇಲೆ ಕರ್ನಾಟಕದ ವಿಧೇಯಕಕ್ಕೆ ಅಂಕಿತ ಹಾಕುವುದಿಲ್ಲ ಎಂದು ನಿರೀಕ್ಷಿಸಲು ಸಾಧ್ಯವೇ?

ರಾಷ್ಟ್ರಪತಿ ಅಂಕಿತ ಪಡೆದ ಮಧ್ಯಪ್ರದೇಶದ ವಿಧೇಯಕದ ಪ್ರಕಾರ ಇನ್ನುಮುಂದೆ ಗೋಹತ್ಯಾ ಆರೋಪವನ್ನು ಹೊತ್ತಿರುವವರ ವಿರುದ್ಧದ ದೂರನ್ನು ಪ್ರಾಸಿಕ್ಯೂಷನ್ ಅಂದರೆ ಸರ್ಕಾರ ಸಾಬೀತುಮಾಡಬೇಕಿಲ್ಲ, ಅದನ್ನು ಆರೋಪಿಯೇ ಸಾಬೀತು ಮಾಡಬೇಕೆನ್ನುವ ಕರಾಳ ಅಂಶಗಳು ಈ ಕಾಯಿದೆಯಲ್ಲಿದೆ. ಅದೇರೀತಿ ಶಿಕ್ಷೆಯ ಪ್ರಮಾಣವನ್ನು ಮೂರರಿಂದ ಏಳು ವರ್ಷಕ್ಕೆ ಏರಿಸಲಾಗಿದೆ. ಯಾವುದೇ ಬಗೆಯ ಗೋ ಸಂತತಿಯ ಸಾಗಾಟದ ಉದ್ದೇಶ ವಧೆಗೆ ಎಂದಾದರೆ ಅದನ್ನು ಮಾರಿದವರೂ ಶಿಕ್ಷೆಗೊಳಗಾಗುತ್ತಾರೆ. ಅಂದರೆ ಮುದಿ ದನಗಳನ್ನು ಮಾರಿದ ರೈತರೂ ಸಹ ಶಿಕ್ಷಾರ್ಹ ಅಪರಾಧಿಗಳಾಗುತ್ತಾರೆ. ಹೆಡ್ ಕಾನ್‌ಸ್ಟೇಬಲ್ ಮೇಲ್ಪಟ್ಟ ಯಾವುದೇ ಅಧಿಕಾರಿ ಈ ಕಾನೂನನ್ನು ಜಾರಿ ಮಾಡಲು ಯಾವುದೇ ಜಾಗವನ್ನು ಪ್ರವೇಶಿಸಿ ಜಪ್ತಿಮಾಡಿ ಏನನ್ನು ಬೇಕಾದರೂ ತನ್ನ ಸುಪರ್ದಿಗೆ ತೆಗೆದುಕೊಳ್ಳಬಹುದು.

ಮೇಲ್ನೋಟಕ್ಕೆ ಕರಾಳವಾಗಿರುವ ಈ ಕಾನೂನು ಬಿಜೆಪಿಯಂಥ ಒಂದು ಕೋಮುವಾದಿ ಸರ್ಕಾರದ ಕೈಗೆ ಸಿಕ್ಕರೆ ಅಲ್ಪಸಂಖ್ಯಾತರ ಪಾಡೇನಾಗಬಹುದು? ಆದರೆ ಮಧ್ಯಪ್ರದೇಶದ ಬಗ್ಗೆ ಗಾಬರಿ ಬೀಳುವ ಮುನ್ನ ರಾಷ್ಟ್ರಪತಿ ಕಚೇರಿಯಲ್ಲಿ ಸಹಿಗಾಗಿ ಕಾದಿರುವ ಕರ್ನಾಟಕದ ಮಸೂದೆಯನ್ನು ನೆನೆಸಿಕೊಂಡರೆ ಮಧ್ಯಪ್ರದೇಶದ ಕಾನೂನು ಎಷ್ಟೋ ವಾಸಿ ಅನ್ನಿಸಿಬಿಡುತ್ತದೆ.

ಇದರ ಬಗ್ಗೆ ಈ ಅಂಕಣದಲ್ಲೇ ಈ ಹಿಂದೆ ಸಾಕಷ್ಟು ಬಾರಿ ಬರೆಯಲಾಗಿತ್ತು, ಈಗ ಹೊಸ ಅಪಾಯ ಎದುರಾಗಿರುವ ಹಿನ್ನೆಲೆಯಲ್ಲಿ ಮತ್ತು ಈವರೆಗೆ ಕಾಂಗ್ರೆಸ್ ಕೈಕೊಡುವುದಿಲ್ಲ ಎಂಬ ನಿರಾಳದಲ್ಲಿ ಅಪಾಯವನ್ನು ಕಡೆಗಣಿಸಿದ್ದರಿಂದ ಬರಲಿರುವ ಅಪಾಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಮತ್ತೊಮ್ಮೆ ಆ ಮಸೂದೆಯ ಅಂಶಗಳನ್ನು ನೆನಪಿಸಿಕೊಳ್ಳಬೇಕಿದೆ.

- 2009ರ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ 1964ರ ಮೂಲ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತರಲುಯತ್ನಿಸಿತು. ಅದರಲ್ಲಿ ಮುಖ್ಯವಾದದ್ದು ಖಾಸಗಿ ವ್ಯಕ್ತಿಗಳನ್ನು ಸಹ ಗೋಹತ್ಯಾ ನಿಷೇಧ ಕಾಯಿದೆಯನ್ನು ಜಾರಿಗೆ ತರಲು ಅಧಿಕೃತವಾಗಿ ನೇಮಿಸುವುದು ಮತ್ತು ಈ ಕಾಯಿದೆಯನ್ವಯ, ಜಿಲ್ಲಾ ಕೋರ್ಟೇ ಈ ವಿಷಯದಲ್ಲಿ ಅಂತಿಮ ಅಪೀಲು ಎಂಬುದು ಬಹುಮುಖ್ಯವಾದ ಮತ್ತು ಅತ್ಯಂತ ಅಪಾಯಕಾರಿಯಾದ ತಿದ್ದುಪಡಿಗಳಾಗಿತ್ತು, ಇದರ ವಿರುದ್ಧವೇ ರಾಜ್ಯಾದ್ಯಂತ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಜನತೆ ಹೋರಾಟ ಪ್ರಾರಂಭಿಸಿದ್ದರು. ಇದನ್ನೆಲ್ಲಾ ಗಮನಿಸಿದ ಬಿಜೆಪಿ ಸರ್ಕಾರ ಕಾನೂನು ಪಂಡಿತರ ಸಲಹೆಯನ್ನು ತೆಗೆದುಕೊಂಡು 2010ರ ಮಾರ್ಚ್ 4ರಂದು ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಂಡು ಅದರ ಬದಲಿಗೆ "Karnataka Prevention of Slaughter And Preservation of Cattle Bill-2010" ("ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010") ಎಂಬ ಮಸೂದೆಯನ್ನು ಮಾರ್ಚ್ 10ರಂದು ಸದನದಲ್ಲಿ ಮಂಡಿಸಿತು ಮತ್ತು ವಿರೋಧ ಪಕ್ಷಗಳ ಒಕ್ಕೊರಲ ವಿರೋಧದ ನಡುವೆಯೂ ಮಾರ್ಚ್ 19ರಂದು ಮಂಜೂರಾತಿ ಪಡೆದುಕೊಂಡಿತು. ನಂತರ ಅದನ್ನು ವಿಧಾನಪರಿಷತ್ತಿನಲ್ಲೂ ಮಂಡಿಸಲಾಯಿತಾದರೂ ಆಗ ಬಿಜೆಪಿಗೆ ಪರಿಷತ್ತಿನಲ್ಲಿ ಬಹುಮತವಿರಲಿಲ್ಲವಾದ್ದರಿಂದ ಅದನ್ನು ಚರ್ಚೆಗೆ ಆಗಲೇ ತರಲಿಲ್ಲ. ಜೂನ್ ತಿಂಗಳಲ್ಲಿ ವಿಧಾನಪರಿಷತ್ತಿಗೆ ಚುನಾವಣೆಗಳು ನಡೆದು ಅಲ್ಲಿಯೂ ಬಿಜೆಪಿಗೆ ಬಹುಮತ ಸಿಕ್ಕ ಮೇಲೆ ಸಕಲ ವಿರೋಧದ ನಡುವೆಯೂ ಅಲ್ಲಿಯೂ ಈ ಮಸೂದೆಯನ್ನು ಸರ್ಕಾರ ಪಾಸು ಮಾಡಿಸಿಕೊಂಡಿತು.

ಹೀಗಾಗಿ ಈಗ ಬಿಜೆಪಿ ಸರ್ಕಾರ ತರಬೇಕೆಂದಿರುವುದು ಕೇವಲ "ಗೋಹತ್ಯಾ ನಿಷೇಧ" ಮಸೂದೆಯಲ್ಲ, ಬದಲಿಗೆ ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010! ಇಲ್ಲಿ ಜಾನುವಾರು ಎಂದರೆ ಗೋವು ಮಾತ್ರವಲ್ಲ, ಹಸು, ದನ, ಕರುಗಳು ಮತ್ತು ಇವುಗಳ ಜೊತೆಗೆ ಎಮ್ಮೆ, ಕೋಣಗಳನ್ನು ಸೇರಿಸಿ ಜಾನುವಾರು ಎಂದು ಕರೆಯಲಾಗಿದೆ. ಹೀಗಾಗಿ ಇದು ಕೇವಲ ಗೋಹತ್ಯಾ ನಿಷೇಧ ಮಸೂದೆಯಲ್ಲ, ಬದಲಿಗೆ ಎಲ್ಲಾ ಜಾನುವಾರುಗಳ ಹತ್ಯೆಯನ್ನೂ ನಿಷೇಧಿಸುವ ಕಾಯಿದೆಯಾಗಿದೆ. ಮಾತ್ರವಲ್ಲ, ಈ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೂ ಈ ಮಸೂದ ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಅಂದರೆ ಇದು ಕೇವಲ ಹತ್ಯೆಯನ್ನು ನಿಷೇಧಿಸುವ ಮಸೂದೆಯಲ್ಲ, ಬದಲಿಗೆ ಇಲ್ಲಿ ಜಾನುವಾರು ಎಂದು ಕರೆಯಲ್ಪಡುವ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೇ ನಿಷೇಧಿಸುತ್ತದೆ.

- ಎರಡನೆಯದಾಗಿ ಈ ಮಸೂದೆಯನ್ನು ಬಿಜೆಪಿ ಸರ್ಕಾರ ರೈತರ ಹಿತದೃಷ್ಟಿಯಿಂದಲೇ ತರುತ್ತಿದೆ ಎಂದು ಬಿಜೆಪಿ ಅಪಪ್ರಚಾರ ಮಾಡಿದೆ. ಈ ಜಾನುವಾರು ಸಂರಕ್ಷಣಾ ಮಸೂದೆಯಲ್ಲಿರುವ ಪ್ರತಿ ಕಲಮೂ ರೈತರನ್ನು ಬೀದಿಪಾಲು ಮಾಡುತ್ತದೆ ಮತ್ತು ಜೈಲುಪಾಲು ಮಾಡುತ್ತದೆ.

ಈ ಕಾಯಿದೆಯ ಅತಿಘೋರ ರೈತ ವಿರೋಧೀ ಅಂಶವು ಮಸೂದೆಯ ಸೆಕ್ಷನ್ (8) ರಲ್ಲಿದೆ. ಅದರ ಪ್ರಕಾರ ಈ ಮಸೂದೆಯು ಕಾನೂನಾದರೆ "ಜಾನುವಾರುಗಳನ್ನು ಕೊಲ್ಲುವ ಉದ್ದೇಶದಿಂದ ಮಾರುವುದು, ಕೊಳ್ಳುವುದು, ಅಥವಾ ಪರಭಾರೆ ಮಾಡುವುದನ್ನು ನಿಷೇಧಿಸುತ್ತದೆ". ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಅಂದರೆ ಇನ್ನು ಮುಂದೆ ಮುದಿ ಗೊಡ್ಡಾಗಿರುವ ದನಗಳನ್ನು ಪರಭಾರೆ ಮಾಡುವ ರೈತನೂ ಅಪರಾಧಿಯಾಗಲಿದ್ದಾನೆ. ಏಕೆಂದರೆ ಸೆಕ್ಷನ್ (8)ರ ವಿವರಣೆಯ ಪ್ರಕಾರ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಮಾರಿದರೆ ಮಾತ್ರವಲ್ಲ, ಆ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಕೊಳ್ಳಲಾಗುತ್ತಿದೆ ಎಂದು "ಗೊತ್ತಿದ್ದರೆ, ಅಥವಾ ದನಗಳನ್ನು ಕೊಲ್ಲಲೆಂದೇ ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣ ವಿದ್ದೂ" ಮಾರಿದರೂ ಸಹ ಈ ಕಾಯಿದೆ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಆದರೆ ರೈತನಿಗೆ ಗೊತ್ತಿದ್ದೂ ಮಾರಿದ್ದಾನೆ ಎಂಬುದನ್ನು ಮತ್ತು ಕೊಲ್ಲಲೆಂದು ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿತ್ತು ಎಂಬುದನ್ನು ನಿರ್ಧರಿಸುವವರು ಯಾರು? ಅಪರಾಧವನ್ನು ತಡೆಗಟ್ಟಲು ಬರುವ ಸಬ್ ಇನ್‌ಸ್ಪೆಕ್ಟರ್ ಅಥವಾ ಇತರ ಅಧಿಕಾರಿಗಳು! ಅಂದರೆ ಈಗಾಗಲೇ ಆತ್ಮಹತ್ಯೆಯ ಅಂಚಿನಲ್ಲಿರುವ ರೈತನ ಬದುಕು ಪೊಲೀಸ್ ಅಧಿಕಾರಿಗಳ ಮತ್ತು ಸರ್ಕಾರದ ಮರ್ಜಿಗೆ ಬೀಳುತ್ತದೆ.


ಇದರಿಂದಲೇ ಈ ಪುರೋಹಿತರ ಸರ್ಕಾರಕ್ಕೆ ರೈತರ ಬದುಕಿನ ಕಷ್ಟಗಳ ಬಗ್ಗೆ ಕಿಂಚಿತ್ತೂ ಅರಿವಿಲ್ಲವೆಂಬುದು ಗೊತ್ತಾಗುತ್ತದೆ. ಒಂದು ಹಾಲುಕೊಡುವ ಹಸು ಅಥವಾ ಉಳುಮೆಗೆ ಹೆಗಲಾಗುವ ದನ ಎರಡೂ ರೈತನ ಬದುಕನ್ನು ಪೋಷಿಸುತ್ತವೆ. ಆದರೆ ಹಾಲು ಕೊಡದ ಹಸು ಮತ್ತು ಉಳುಮೆಗೆ ಈಡಾಗದ ದನವನ್ನು ಸಾಕುವುದು ಈಗಾಗಲೇ ಸಾಯುತ್ತಾ ಸಾಯುತ್ತಾ ಬದುಕಿರುವ ರೈತನಿಗೆ ಎಷ್ಟು ಹೊರೆಯಾಗುತ್ತದೆಂಬುದರ ಅರಿವೇ ಈ ಸರ್ಕಾರಕ್ಕಿಲ್ಲ. ಸರ್ಕಾರದ ಅಂಕಿಅಂಶಗಳ ಪ್ರಕಾರ ನಮ್ಮ ಹಳ್ಳಿಗಾಡಿನಲ್ಲಿ ಬದುಕುತ್ತಿರುವ ಮುಕ್ಕಾಲುವಾಸಿ ಜನರ ದಿನದ ಸರಾಸರಿ ಆದಾಯ ಕೇವಲ 20 ರೂಪಾಯಿ. ಇದರಲ್ಲಿ ಮನೆಮಂದಿಯೆಲ್ಲಾ ಮೂರುಹೊತ್ತು ಅರೆಹೊಟ್ಟೆ ಊಟ ಮಾಡಲೂ ಆಗುವುದಿಲ್ಲ. ಇದರ ಜೊತೆಗೆ ಯಾವ ರೀತಿಯಲ್ಲೂ ಉಪಯೋಗವಿಲ್ಲದ ದನ-ಹಸುಗಳನ್ನು ಸಾಕಬೇಕೆಂದರೆ ದಿನಕ್ಕೆ ಏನಿಲ್ಲವೆಂದರೂ 100 ರೂ. ಖರ್ಚಾಗುತ್ತದೆ. ಇದನ್ನು ಭರಿಸುವವರು ಯಾರು?

ಅದಕ್ಕಿಂತ ಮುಖ್ಯವಾದದ್ದು ಮತ್ತೊಂದಿದೆ. ಗೊಡ್ಡಾದ ದನ-ಹಸುಗಳನ್ನು ಮಾರದಿದ್ದರೆ ಬೇಸಾಯಕ್ಕೆ ಬೇಕಾದ ಹೊಸ ಜಾನುವಾರುಗಳನ್ನು ಕೊಂಡುಕೊಳ್ಳಲು ರೈತನಿಗೆ ಎಲ್ಲಿಂದ ದುಡ್ಡು ಬರಬೇಕು? ಒಂದು ಕಡೆ ಗೊಡ್ಡಾದ ದನಗಳನ್ನೂ ಸಾಕಬೇಕು. ಮತ್ತೊಂದು ಕಡೆ ಬೇಸಾಯ ಮುಂದುವರೆಸಲೂ ಬೇಕಾದ ಹೊಸ ರಾಸುಗಳನ್ನು ಕೊಳ್ಳಲೂ ಹಣವಿಲ್ಲ. ಈ ಇಕ್ಕಟ್ಟಿನ ಸಂದರ್ಭದಲ್ಲಿ ರೈತ ಒಂದು ವೇಳೆ ದನವನ್ನು ಮಾರಿದರೆ ಅವನನ್ನು ಮುಲಾಜಿಲ್ಲದೆ ಜೈಲಿಗೆ ಹಾಕಿ ಎನ್ನುತ್ತದೆ ಈ ಕಾಯಿದೆ!

ಇಷ್ಟು ಮಾತ್ರವಲ್ಲ, ಈ ರಾಜ್ಯದ ಬಹುಪಾಲು ರೈತರು ಕೃಷಿಯೊಂದಿಗೆ ಉಪಕಸುಬಾಗಿ ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಹೈನುಗಾರಿಕೆಯಲ್ಲಿ ಹೆಚ್ಚು ಹಾಲು ಕೊಡುವ ನಾಟಿ ಹಸುಗಳಿಗಿಂತ ಜರ್ಸಿ ಅಥವಾ ಸೀಮೆ ಹಸುಗಳನ್ನೇ ಅವಲಂಬಿಸಿದ್ದಾರೆ. ಇವುಗಳು ಹಾಲನ್ನು ಜಾಸ್ತಿ

ಶಿವಸುಂದರ್

ಚಾರ್ವಾಕ



ಕೊಟ್ಟರೂ ಕೊಡದಿದ್ದರೂ ನಾಟಿ ಹಸುಗಳ ಮೂರುಪಟ್ಟು ಮೇವನ್ನು ತಿನ್ನುತ್ತವೆ. ಎಲ್ಲಿಯತನಕ ಅವು ಹಾಲನ್ನು ಕೊಡುತ್ತಿರುತ್ತವೋ ಅಲ್ಲಿಯವರೆಗೆ ಅವುಗಳನ್ನು ಸಾಕುವುದು ಅಷ್ಟು ಕಷ್ಟವಲ್ಲ, ಆದರೆ ಅವು ಗೊಡ್ಡಾದ ನಂತರ ಅವುಗಳು ಮೇವು ತಿನ್ನುವ ಪ್ರಮಾಣವೇನೂ ಕಡಿಮೆಯಾಗುವುದಿಲ್ಲ, ಹೀಗಾಗಿ ಆದಾಯವಿರಲಿ, ಇಲ್ಲದಿರಲಿ ರೈತ ಆ ಸೀಮೆ ಹಸುಗಳನ್ನು ಸಾಕಲೇ ಬೇಕೆಂದರೆ ರೈತಾಪಿಯ ಕುಟುಂಬದ ಆರ್ಥಿಕತೆಯ ಮೇಲೆ ಎಂಥಾ ದುಷ್ಪ್ರಭಾವಬೀರಬಹುದೆಂಬುದನ್ನು ಸರ್ಕಾರ ಯೋಚಿಸಿದೆಯೇ?

ಅಲ್ಲದೆ ಈ ಸೀಮೆ ಹಸುಗಳ ಗಂಡು ಕರುಗಳು ಬೇಸಾಯದ ಬಳಕೆಗೂ ಬರುವುದಿಲ್ಲ, ಹಾಲನ್ನೂ ಕೊಡುವುದಿಲ್ಲ. ಮೇವನ್ನು ಮಾತ್ರ ನಾಟಿ ಹಸುಗಳ ಮೂರುಪಟ್ಟು ತಿನ್ನುತ್ತಲೇ ಇರುತ್ತವೆ. ಇವನ್ನು ರೈತ ಮಾರದಿದ್ದರೆ ಅವನಿಗೆ ಬರುವ ಲಾಭವೆಲ್ಲಾ ಇವುಗಳನ್ನು ಸಾಕಲೆಂದೇ ಖರ್ಚಾಗುತ್ತದೆ ಅಥವಾ ಅದಕ್ಕಿಂತ ಜಾಸ್ತಿಯಾಗುತ್ತದೆ. ಈ ಕಷ್ಟಗಳಿಂದ ತಪ್ಪಿಸಿಕೊಳ್ಳಲು ರೈತನೇನಾದರೂ ಗಂಡು ಕರುವನ್ನು ಮಾರಿದರೆ ಈ ಕಾಯಿದೆಯ ಪ್ರಕಾರ ಜೈಲುಶಿಕ್ಷೆ ಕಟ್ಟಿಟ್ಟಬುತ್ತಿ!

ಈ ಮಸೂದೆಯೇನಾದರೂ ಶಾಸನವಾದರೆ ಮೇಲೆ ಹೇಳಿದ ಯಾವುದೇ ಸಂದರ್ಭದಲ್ಲೂ ರೈತನನ್ನು ಸ್ಥಳೀಯ ಸಬ್ ಇನ್ಸ್‌ಪೆಕ್ಟರ್ ಬಂಧಿಸಬಹುದು. ಈ ಮಸೂದೆಯ ಪ್ರಕಾರ ಇವೆಲ್ಲವೂ ಶಿಕ್ಷಾರ್ಹ ಅಪರಾಧವಾದ್ದರಿಂದ ಅವು ಜಾಮೀನು ರಹಿತ ಅಪರಾಧಗಳಾಗಿವೆ. ಇವುಗಳಿಗೆ ಜಿಲ್ಲಾ ಕೇಂದ್ರಗಳಲ್ಲಿರುವ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲೇ ಜಾಮೀನು ಸಿಗಲು ಸಾಧ್ಯ. ಅಂದರೆ ಒಮ್ಮೆ ರೈತನನ್ನು ಯಾವುದಾದರೂ ಹಳ್ಳಿಯಲ್ಲಿ ಮೇಲಿನ ಆರೋಪದಲ್ಲಿ ಬಂಧಿಸಿದರೆ ಅವನನ್ನು ಜಿಲ್ಲಾ ಕೇಂದ್ರಕ್ಕೆ ಕರೆತರಬೇಕು. ಅಂದರೆ ಸುಮ್ಮನೆ ಅನುಮಾನದ ಮೇಲೆ ಬಂಧನವಾದರೂ ಕನಿಷ್ಠ ಎರಡು ಮೂರು ದಿನಗಳವರೆಗೆ ಜಾಮೀನು ಸಿಗುವುದಿಲ್ಲ. ಈಗಾಗಲೇ ಸಂಕಷ್ಟದಲ್ಲಿರುವ ರೈತ ಜಿಲ್ಲಾ ಕೇಂದ್ರದಲ್ಲಿ ವಕೀಲರಿಗೆ ದುಬಾರಿ ಫೀಸು ತೆತ್ತು ಜಾಮೀನು ಮಾಡಿಸಿಕೊಳ್ಳಬೇಕು. ಇನ್ನಷ್ಟು ಸಾಲದ ಬಲೆಯಲ್ಲಿ ಸಿಲುಕಿಕೊಳ್ಳಬೇಕು. ಇಷ್ಟಾದರೂ ಎಷ್ಟು ರೈತರಿಗೆ ಸಾಧ್ಯ?

ರೈತರ ಕಷ್ಟ ಇಲ್ಲಿಗೇ ಮುಗಿಯಲಿಲ್ಲ, ಈ ಮಸೂದೆಯ ಅಂಶಗಳು ರೈತನು ಆತ್ಮಹತ್ಯೆ ಮಾಡಿಕೊಳ್ಳುವ ತನಕ ಬಿಡುವಂತೆ ಕಾಣುವುದಿಲ್ಲ, ಈಗಾಗಲೇ ವಿವರಿಸಿದಂತೆ ರೈತ ಮುದಿಗೊಡ್ಡು ದನಗಳನ್ನು ಯಾವ ಕಾರಣಕ್ಕೂ ಮಾರುವಂತಿಲ್ಲ, ಹಾಗಿದ್ದರೆ ಅವುಗಳನ್ನು ಏನು ಮಾಡಬೇಕು? ಈ ಮಸೂದೆಯ ಸೆಕ್ಷನ್ (18)ರ ಪ್ರಕಾರ ಇಂಥಾ ದನಗಳನ್ನು ನೋಡಿಕೊಳ್ಳಲು ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳು ಗೋಶಾಲೆಗಳನ್ನು ಸ್ಥಾಪಿಸುತ್ತವೆ. ರೈತರು ತಮ್ಮ ಗೊಡ್ಡು ದನಗಳನ್ನು ಕಡ್ಡಾಯವಾಗಿ ಈ ಆಶ್ರಮದಲ್ಲೇ ಬಿಡಬೇಕು. ಅಷ್ಟು ಮಾತ್ರವಲ್ಲ, ಅವುಗಳನ್ನು ನೋಡಿಕೊಳ್ಳಲು ಸರ್ಕಾರ ಅಥವಾ ಆ ಸಂಸ್ಥೆ ನಿಗದಿಪಡಿಸಿದಷ್ಟು ಶುಲ್ಕವನ್ನು ರೈತ ಪಾವತಿಸಬೇಕು!

ತಮ್ಮ ಮಕ್ಕಳ ಶಾಲಾ ಫೀಸನ್ನೇ ಪಾವತಿಸಲಾಗದಷ್ಟು ಸಂಕಷ್ಟದಲ್ಲಿರುವ ರೈತ ಈ ಶುಲ್ಕವನ್ನು ಹೇಗೆ ಭರಿಸಬಲ್ಲ? ಒಂದು ವೇಳೆ ರೈತ ಅಷ್ಟು ಶುಲ್ಕವನ್ನು ಪಾವತಿಸಲಾಗದಿದ್ದರೆ ಏನು ಮಾಡುವುದು? ಆಗಲೂ ರೈತ ಅಪರಾಧಿಯಾಗಿ ಬಿಡುವನೇ?

ಹಸಿರು ಶಾಲು ಹೊದ್ದ ಬಿಜೆಪಿ ಸರ್ಕಾರ ತನ್ನ ಕುರುಡು ಕೋಮುವಾದದಿಂದ ಈ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿಲ್ಲ!

ಅಕಸ್ಮಾತ್ ರೈತ ಬದುಕಿನ ಬೇಗುದಿ ತಡೆಯದೆ ತನ್ನ ದನಗಳನ್ನು ಮಾರೇ ಬಿಟ್ಟರೆ ಎಷ್ಟು ಶಿಕ್ಷೆ? ಈ ಮಸೂದೆಯ ಸೆಕ್ಷನ್ (12) ಯಾವ ಯಾವ ಅಪರಾಧಕ್ಕೆ ಎಷ್ಟೆಷ್ಟು ಶಿಕ್ಷೆಯೆಂಬುದನ್ನು ನಿಗದಿಪಡಿಸುತ್ತದೆ. ಸೆಕ್ಷನ್ 4 ರಡಿ ಎಸಗಲಾಗುವ ಅಪರಾಧಕ್ಕೆ, ಅಂದರೆ ಜಾನುವಾರು ಹತ್ಯೆ ಮಾಡಿದ ಅಪರಾಧಕ್ಕೆ ಒಂದು ವರ್ಷದಿಂದ ಏಳು ವರ್ಷದವರೆಗೆ ಜೈಲು ಶಿಕ್ಷೆ ಮತ್ತು 25,000 ರೂ.ಗಳಿಂದ 1,00,000 ರೂ.ವರೆಗೆ ಜುಲ್ಮಾನೆಯನ್ನೂ ವಿಧಿಸಬಹುದಾಗಿದೆ. ಭಯೋತ್ಪಾದನೆ, ಉದ್ದೇಶ ಪೂರ್ವಕ ಕೊಲೆ, ಬಲಾತ್ಕಾರ, ಕಳ್ಳಸಾಗಣೆ, ಭ್ರಷ್ಟಾಚಾರಗಳಿಗೂ ಈ ಪ್ರಮಾಣದ ಶಿಕ್ಷೆಯನ್ನು ಇಂಡಿಯನ್ ಪೀನಲ್ ಕೋಡ್ ವಿಧಿಸುವುದಿಲ್ಲ,

ಅದೇ ರೀತಿ ಈ ಮಸೂದೆಯಡಿ ಎಸಗಲಾಗುವ ಇತರ ಅಪರಾಧಗಳಿಗೆ- ಅಂದರೆ ದನದ ಸಾಗಾಟ ಮಾಡುವುದು, ಹಸು-ದನವನ್ನು ಮಾರಾಟ ಮಾಡುವುದು, ದನದ ಮಾಂಸ ತಿನ್ನುವುದು, ತಿನ್ನಲು ಪ್ರೋತ್ಸಾಹಿಸುವುದು ಹಾಗೂ ಇನ್ನಿತರ ಅಪರಾಧಗಳಿಗೆ - ಒಂದು ವರ್ಷದಿಂದ ಮೂರು ವರ್ಷದ ಸಜೆ ಮತ್ತು 10,000 ರೂ - 25,000 ರೂ.ವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಅಂದರೆ ಸಾರಾಂಶದಲ್ಲಿ ಇದರ ಅರ್ಥವೇನೆಂದರೆ ರೈತ ತನ್ನೆಲ್ಲಾ ಕಷ್ಟವನ್ನು ನುಂಗಿಕೊಂಡು ಹೇಗಾದರೂ ಬೇಸಾಯದಲ್ಲಿ ಮುಂದುವರೆಯುವುದೇ ದೊಡ್ಡ ಅಪರಾಧ.

ಹೀಗೆ ರೈತಾಪಿಯನ್ನು, ವ್ಯಾಪಾರಿಯನ್ನು, ಅಲ್ಪಸಂಖ್ಯಾತರನ್ನು ಒಟ್ಟಿಗೆ ಗಲ್ಲಿಗೆ ದೂಡಲಿರುವ ಈ ಮಸೂದೆಗೆ ಯಾವ ಕಾರಣಕ್ಕೂ, ರಾಷ್ಟ್ರಪತಿಯವರು ಅಂಕಿತ ಹಾಕಬಾರದೆಂಬ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ಪ್ರಾರಂಭಿಸಬೇಕಿದೆ. ಇದರಲ್ಲಿ ರೈತಾಪಿಗೆ, ವ್ಯಾಪಾರಿಗೆ, ಧರ್ಮ ಜಾತಿಗಳನ್ನು ಮೀರಿದ ಹೋರಾಟದ ಬಿರಾದರಿಯನ್ನು ಕಟ್ಟಿಕೊಳ್ಳಬೇಕಿದೆ. ಚುನಾವಣೆಗಳು ಹತ್ತಿರ ಬರುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕದ ರಾಜಕಾರಣ ಗೋವಿನ ಹೆಸರಲ್ಲಿ ರೈತಾಪಿ ಮತ್ತು ಅಲ್ಪಸಂಖ್ಯಾತರ ನರಮೇಧಕ್ಕೆ ಬಳಸಿಕೊಳ್ಳದಂತೆ ತಡೆಯುವ ಜವಾಬ್ದಾರಿಯೂ ನಮ್ಮ ಮೇಲಿದೆ... ಇನ್ನು ನಿರಾಳಕ್ಕೆ ಕಾರಣವಿಲ್ಲ.

"ರೈತಾಪಿಯನ್ನು, ವ್ಯಾಪಾರಿಯನ್ನು, ಅಲ್ಪಸಂಖ್ಯಾತರನ್ನು ಒಟ್ಟಿಗೆ ಗಲ್ಲಿಗೆ ದೂಡಲಿರುವ ಈ ಮಸೂದೆಗೆ ಯಾವ ಕಾರಣಕ್ಕೂ ರಾಷ್ಟ್ರಪತಿಯವರು ಅಂಕಿತ ಹಾಕಬಾರದೆಂಬ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ಪ್ರಾರಂಭಿಸಬೇಕಿದೆ. ಇದರಲ್ಲಿ ರೈತಾಪಿಗೆ, ವ್ಯಾಪಾರಿಗೆ, ಧರ್ಮ ಜಾತಿಗಳನ್ನು ಮೀರಿದ ಹೋರಾಟದ ಬಿರಾದರಿಯನ್ನು ಕಟ್ಟಿಕೊಳ್ಳಬೇಕಿದೆ."

ಪಾಕಿಸ್ತಾನಿ ಧ್ವಜ ಹಾರಿಸಿದ ಸಂಘ ಪರಿವಾರ

ಹಿಂದೂತ್ವ ಕೋಮುವಾದಿ ಸಂಘ ಪರಿವಾರದ ಮುಖ ಮತ್ತೊಮ್ಮೆ ಬಟಾಬಯಲಾಗಿದೆ. ದೇಶ ಭಕ್ತಿ, ಪ್ರೇಮ, ಧರ್ಮ ನಿಷ್ಠೆ ಎಂದೆಲ್ಲ ಬೊಂಕಿ ಕಾರುವ ಸಂಘ ಪರಿವಾರದ ಅಸಲಿ ಉದ್ದೇಶ ಇದ್ಯಾವುದೂ ಅಲ್ಲ, ಬದಲಾಗಿ ...ಯೋತ್ಪಾದಕ ಕೃತ್ಯಗಳ ಮೂಲಕ ಭಾರತದ ವಿವಿಧ ...ರ್ಗಗಳ ನಡುವೆ ಕೋಮುದ್ವೇಷವನ್ನು ಬಿತ್ತಿ ತನ್ನ ಬೇಳೆ ...ಯಿಸಿಕೊಳ್ಳುವುದೇ ಆಗಿದೆ. ಅದಕ್ಕೆ, ಬಿಜಾಪುರದ ...ಗಿಯಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿ ಕೋಮು ...ಭೆಗಳಿಗೆ ಚಾಲನೆ ಕೊಡಲು ಯತ್ನಿಸಿ ಸಿಕ್ಕಿಬಿದ್ದಿರುವ ...ರಾಮ ಸೇನೆಯ ಹಿಂದೂ ಪುಂಡರೇ ಸಾಕ್ಷಿ.

...ಈಗ ಬಂಧಿತರಾಗಿರುವ ಆರು ಹಿಂದೂ ಪುಂಡರು ...ಗೆ ಪ್ರಮೋದ್ ಮುತಾಲಿಕ್ ನಾಯಕನಾಗಿರುವ ...ರಾಮ ಸೇನೆಯ ಸದಸ್ಯರಾಗಿದ್ದರೂ ಇವರೆಲ್ಲ ವಾಸ್ತವದಲ್ಲಿ ...ಸ್ ನೇತೃತ್ವದ ಸಂಘ ಪರಿವಾರದ ಭಯಾನಕ ಶಿಶುಗಳೇ. ...ಕೆಂದರೆ ಇವರೆಲ್ಲರ ಉದ್ದೇಶ ಒಂದೆ: ಅದು ...ಳಿದವರನ್ನು ಉಪಯೋಗಿಸಿಕೊಂಡು ದೇಶದಲ್ಲಿರುವ ...ಸಂಖ್ಯಾತರನ್ನು ನಾಮಾವಶೇಷ ಮಾಡುವ ಮೂಲಕ ...ಶವನ್ನು ಹಿಂದೂ ದೇಶವಾಗಿ ಪರಿವರ್ತಿಸುವುದು.

...ಈ ನಿಟ್ಟಿನಲ್ಲಿ ಹಿಂದೂತ್ವವಾದಿ ಸಂಘ ಪರಿವಾರ ...ರಾರು ದಶಕಗಳಿಂದ ಕಾರ್ಯಾಚರಣೆ ನಡೆಸುತ್ತಲೇ ...ದೆ. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಇದೇ ಹಿಂದೂತ್ವ ...ಮುವಾದಿಗಳು ಬ್ರಿಟಿಷರ ವಿರುದ್ಧ ಹೋರಾಡುವ ...ು, ದೇಶದ ಅಲ್ಪಸಂಖ್ಯಾತರನ್ನು ಹಣಿಯುವುದರಲ್ಲೇ ...ತೋರಿದ್ದರ ಅಂತಿಮ ಪರಿಣಾಮ ಭಾರತದ ವಿಭಜನೆ. ಆನಂತರ ದೇಶದ ವಿವಿಧ ಕಡೆಗಳಲ್ಲಿ ಕೋಮುಗಲಭೆಗೂ ಕಾರಣವಾಗಿತ್ತು. ಇತ್ತೀಚೆಗೆ ಈ ಸಂಘ ಪರಿವಾರ ಹತ್ತಾರು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿ ನೂರಾರು ಅಮಾಯಕ ಭಾರತೀಯರನ್ನು ಬಲಿ ತೆಗೆದುಕೊಂಡಿದ್ದು ಸಾಬೀತಾಗಿದೆ.

ಈ ಹಿಂದೆ ಹುಬ್ಬಳ್ಳಿಯ ಕೋರ್ಟಿನಲ್ಲಿ ಸಂಭವಿಸಿದ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲೂ ಶ್ರೀರಾಮ ಸೇನೆಯ ಸದಸ್ಯರ ಕೈವಾಡವಿದ್ದು ಅವರಲ್ಲಿ ಹಲವರು ಜೈಲು ಪಾಲಾಗಿದ್ದರು. ಅಷ್ಟೇ ಅಲ್ಲ, ಹುಬ್ಬಳ್ಳಿ ಬಾಂಬ್ ಬ್ಲಾಸ್ಟ್ ಪ್ರಕರಣದ ಆರೋಪಿಗಳಿಗೆ ಮಹಾರಾಷ್ಟ್ರದ ಮಾಲೇಗಾಂವ್‌ನಲ್ಲಿ ಬಾಂಬ್ ಬ್ಲಾಸ್ಟ್ ಮಾಡಿದ್ದ ಜನರೊಂದಿಗೆ ಸಂಪರ್ಕ ಇದ್ದದ್ದೂ ಸಾಬೀತಾಗಿದೆ.

ಮಾಲೇಗಾಂವ್ ಸ್ಫೋಟವನ್ನು ತನಿಖೆ ಮಾಡಿದ, ಆನಂತರ ಮುಂಬೈ ಮೇಲೆ ಪಾಕಿಸ್ತಾನಿ ಭಯೋತ್ಪಾದಕರು ಮಾಡಿದ ದಾಳಿಯಲ್ಲಿ ಹುತಾತ್ಮರಾಗಿದ್ದ ಪೊಲೀಸ್ ಅಧಿಕಾರಿ ಕರ್ಕರೆ ಅವರು ಮಾಲೇಗಾಂವ್ ಬಾಂಬ್ ಬ್ಲಾಸ್ಟ್‌ನಲ್ಲಿ ಢೋಂಗಿ ಸಾಧ್ವಿ ಪ್ರಗ್ನಾ ಸಿಂಗ್, ಸೈನ್ಯಾಧಿಕಾರಿ ಕರ್ನಲ್ ಪುರೋಹಿತ್ ಮತ್ತು ಇತರರು ಮುಖ್ಯ ಆರೋಪಿಗಳೆಂದು ಹೇಳಿದ್ದರು. ಜೊತೆಗೆ ಇವರೆಲ್ಲ ಅಭಿನವ ಭಾರತ ಎಂದು ಹಿಂದೂ ಸಂಘಟನೆಯ ಸದಸ್ಯರೆಂದೂ ಹೇಳಿದ್ದರು. ವಾಸ್ತವವಾಗಿ ಈ ಅಭಿನವ ಭಾರತ ಕೂಡ ಕೋಮುವಾದಿ ಸಂಘ ಪರಿವಾರವೇ ಹುಟ್ಟು ಹಾಕಿರುವ ಮತ್ತೊಂದು ಭಯೋತ್ಪಾದಕ ಗುಂಪು ಎಂಬುದು ಸ್ಪಷ್ಟ.

ಅದೇ ಎಳೆಯನ್ನು ಹಿಡಿದುಕೊಂಡು ಹೋದರೆ, ಹೈದರಾಬಾದಿನ ಮೆಕ್ಕಾ ಮಸೀದಿ ಸ್ಫೋಟ, ಸಂಜೋಥಾ ಎಕ್ಸ್‌ಪ್ರೆಸ್ ಬಾಂಬ್ ಸ್ಫೋಟ, ನಾಂದೇಡ್ ಬಾಂಬ್ ಬ್ಲಾಸ್ಟ್ .... ಹೀಗೆ 2006ರ ನಂತರ ಭಾರತದ ಹಲವಾರು ಕಡೆ ಸಂಭವಿಸಿರುವ ಭಯೋತ್ಪಾದಕ ಬಾಂಬ್ ಸ್ಫೋಟಗಳ ಹಿಂದೆ ಸಂಘ ಪರಿವಾರದ ಒಂದಲ್ಲಾ ಒಂದು ಗುಂಪು ಇದ್ದದ್ದು ಸಾಬೀತಾಗಿದೆ. ಮೆಕ್ಕಾ ಮಸೀದಿ ಸ್ಫೋಟದ ಹಿಂದೆ ತಾನು ಮತ್ತು ಸಂಘ ಪರಿವಾರದ ಹಿರಿಯ ನಾಯಕರೇ ಇದ್ದರೆಂಬ ಮಾಹಿತಿಯನ್ನು ಅದೇ ಸಂಘಪರಿವಾರದ ಮತ್ತೊಂದು ಅಂಗದ ಮುಖ್ಯಸ್ಥನಾಗಿದ್ದ ಸ್ವಾಮಿ ಅಸೀಮಾನಂದ ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದಾನೆ.

ಇದಷ್ಟೇ ಅಲ್ಲದೆ, ಈ ಹಿಂದೆ ಬೆಂಗಳೂರಿನ ಮಸೀದಿಯೊಂದರಲ್ಲಿ ಹಂದಿಯ ಮಾಂಸವನ್ನು ಬಿಸಾಡಿ ಕೋಮುಗಲಭೆಗೆ ಯತ್ನಿಸಿದ್ದೂ ಇದೇ ಶ್ರೀರಾಮ ಸೇನೆಯ ಸದಸ್ಯರು. ಹಾಗೆಯೇ ಮೈಸೂರಿನಲ್ಲೂ ಮಾಡಿ ಅಲ್ಲಿ ಗಲಭೆಗಳಾಗುವಂತೆ ನೋಡಿಕೊಂಡು ಅದರಲ್ಲಿ ಯಶಸ್ವಿಯೂ ಆಗಿದ್ದು ಮತ್ತದೇ ಶ್ರೀರಾಮ ಸೇನೆ.

ಈಗ ಸಿಂದಗಿಯಲ್ಲಿ ಹೊಸ ವರ್ಷದ ಮೊದಲನೆ ದಿನ ತಹಶೀಲ್ದಾರರ ಕಚೇರಿಯ ಮುಂದೆ ಶ್ರೀರಾಮ ಸೇನೆಯ ಕಿಡಿಗೇಡಿಗಳು ಪಾಕಿಸ್ತಾನದ ಧ್ವಜವನ್ನು ಹಾರಿಸಿ, ಅದರ ಬಗ್ಗೆ ತಾವೇ ಗಲಾಟೆ ಎಬ್ಬಿಸಿ, ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿರುವ ಸಿಂದಗಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಕೋಮು ಗಲಭೆಗಳನ್ನು ಸೃಷ್ಟಿಸಲು ಈ ಪುಂಡರು ಸಂಚು ಹಾಕಿದ್ದನ್ನು ಬಿಜಾಪುರದ ಎಸ್‌ಪಿ ಡಾ.ಡಿ.ಸಿ.ರಾಜಪ್ಪ ಮತ್ತು ಅವರ ದಕ್ಷ ತಂಡ ಬಯಲಿಗೆಳೆದಿದೆ. ಆ ಮೂಲಕ ಸಂಘ ಪರಿವಾರದ ನಿಜಮುಖವನ್ನು ಮತ್ತೊಮ್ಮೆ ದೇಶದ ಮುಂದೆ ತೆರೆದಿಟ್ಟಿದೆ. ರಾಜಪ್ಪ ಅವರ ತಂಡಕ್ಕೆ ರಾಜ್ಯದ ಎಲ್ಲಾ ಪ್ರಜ್ಞಾವಂತರು ಶಹಭಾಷ್ ಹೇಳಲೇ ಬೇಕು... ಹಾಗೆಯೇ ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಸ್ಫೋಟಗೊಂಡ ಸರಣಿ ಬಾಂಬ್ ಪ್ರಕರಣ ಮತ್ತು ಕ್ರಿಕೆಟ್ ಸ್ಟೇಡಿಯಮ್ ಬಳಿ ಪತ್ತೆ ಆಗಿದ್ದ ಬಾಂಬ್‌ಗಳ ಹಿಂದೆಯೂ ಸಂಘ ಪರಿವಾರದ ಕೈವಾಡವಿದೆಯಾ ಎಂದು ಮರು ತನಿಖೆ ಮಾಡುವ ಅಗತ್ಯವಿದೆ...





...ಗಿಯಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದಲ್ಲದೆ ಸ್ವತಃ ಅದರ ವಿರುದ್ಧ ಪ್ರತಿಭಟಿಸುತ್ತಿರುವುದು ಮತ್ತು ಈ ದೇಶದ್ರೋಹಿ ಕೃತ್ಯ ಎಸಗಿ ಬಂಧನಕ್ಕೊಳಪಟ್ಟಿರುವ ಶ್ರೀರಾಮ ಸೇನೆಯ ಕಿಡಿಗೇಡಿಗಳು.

...ರ ಭಾರತವನ್ನು ಜಾತ್ಯಾತೀತ ದೇಶವನ್ನಾಗಿಸಬೇಕೆಂದು ...ದ್ದ ಮಹಾತ್ಮ ಗಾಂಧಿಯ ಜೀವವನ್ನೇ ಬಲಿ ...ಕೊಂಡಿದ್ದು ಇದೇ ಹಿಂದೂತ್ವ ಕೋಮುವಾದಿಗಳ ...ಭರಿತ ಸಿದ್ಧಾಂತವನ್ನು ಮೈಗೂಡಿಸಿಕೊಂಡಿದ್ದ ...ರಾಮ್ ಗೋಡ್ಸೆ ಎಂಬ ಆರೆಸ್ಸೆಸ್ ಸದಸ್ಯ. ಐತಿಹಾಸಿಕ ... ಮಸೀದಿಯನ್ನು ಸಂಘ ಪರಿವಾರ ಕೆಡವಿತ್ತಲ್ಲದೆ

ಸಿಂದಗಿಯಲ್ಲಿ ಮೊನ್ನೆ ನಡೆದಿರುವ ಪ್ರಕರಣಕ್ಕೂ, ಕರ್ನಾಟಕದಲ್ಲಿ ಈಗ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟಿಗೂ ನಿಕಟ ನಂಟಿರುವುದು ಮೇಲುನೋಟಕ್ಕೇ ಸ್ಪಷ್ಟವಾಗುತ್ತದೆ. ಈಗ ಎಲ್ಲರಿಗೂ ಗೊತ್ತಿರುವಂತೆ ಒಂದೆಡೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಯಾವ ಕ್ಷಣದಲ್ಲಾದರೂ ಬಿಜೆಪಿಯ ವಿರುದ್ಧ ಬಂಡಾಯವೇಳುವ ಸೂಚನೆಗಳಿವೆ. ಮತ್ತೊಂದೆಡೆ ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರವನ್ನು ಅಕ್ರಮವಾಗಿ ಪಡೆಯಲು ತನ್ನ ಕಳ್ಳ ಹಣವನ್ನು ಧಾರಾಳವಾಗಿ ಸುರಿದಿದ್ದ ಗಣಿ ಕಳ್ಳರಾದ ಜನಾರ್ದನ ರೆಡ್ಡಿ ಜೈಲಿನಲ್ಲಿದ್ದರೆ ಆತನ ಗೆಣೆಕಾರ ಶ್ರೀರಾಮುಲು ಹೊಸ ಪಕ್ಷ ಸ್ಥಾಪಿಸಲು ಸಜ್ಜಾಗಿದ್ದಾನೆ. ಈ ಎರಡು ಬೆಳವಣಿಗೆಗಳಿಂದಾಗಿ ಬಿಜೆಪಿಗೆ ಎರಡು ಬಗೆಯ ಲುಕ್ಸಾನು ಆಗಲಿದೆ. ಅಕಸ್ಮಾತ್ ಯಡ್ಡಿ ಬೇರೆ ದಾರಿ ಹಿಡಿದರೆ ಲಿಂಗಾಯತರು ಬಿಜೆಪಿಯನ್ನು ಬೆಂಬಲಿಸುವ ಬಗ್ಗೆ ಬಿಜೆಪಿಗೇ ನಂಬಿಕೆಯಿಲ್ಲ. ಹಾಗೆಯೇ ಶ್ರೀರಾಮುಲು ಕೈಕೊಟ್ಟಿರುವುದರಿಂದ ಹಿಂದುಳಿದ ವರ್ಗಗಳೂ ಬಿಜೆಪಿಗೆ ಕೈಕೊಡಲಿವೆ... ಈಗ ಯಡ್ಡಿಯ ಕೃಪೆಯಿಂದಾಗಿ ಯಾವ ಕ್ಷಣದಲ್ಲಾದರೂ ಸದಾನಂದ ಗೌಡನ ಸರ್ಕಾರ ಉರುಳಿ ಬೀಳುವ ಸಾಧ್ಯತೆಗಳಿವೆ. ಅದು ನಿಜವಾದರೆ ಬರುವ ಚುನಾವಣೆಯಲ್ಲಿ ಬಿಜೆಪಿಗೆ ಸೋಲು ಕಟ್ಟಿಟ್ಟ ಬುತ್ತಿ...

ಅದಕ್ಕೆ ಏನು ಮಾಡಬೇಕು? ಸಂಘ ಪರಿವಾರದ ಎಂದಿನ ಮಸಲತ್ತನ್ನು ಮಾಡಬೇಕು, ಅಷ್ಟೇ. ಆ ಮಸಲತ್ತು ಎಂತಹದ್ದು? ರಾಜ್ಯದ ಅಭಿವೃದ್ಧಿಯೇ? ಸ್ಥಿರ ಸರ್ಕಾರವೇ? ಶೋಷಿತ, ದಮನಿತ ಸಮುದಾಯಗಳ ಏಳಿಗೆಯೇ? ಇದ್ಯಾವುದೂ ಅಲ್ಲ.. ಬದಲಾಗಿ ರಾಜ್ಯದ ಎಲ್ಲೆಡೆ ಕೋಮುಗಲಭೆಗಳನ್ನು ಸೃಷ್ಟಿಸಿ ಹಿಂದೂ ಮತ ಬ್ಯಾಂಕನ್ನು ಗಟ್ಟಿಗೊಳಿಸಿಕೊಳ್ಳುವುದು ಮತ್ತು ಆ ಮೂಲಕ ಮತ್ತೆ ಅಧಿಕಾರ ಪಡೆಯಲು ಯತ್ನಿಸುವುದು.

ಈಗಾಗಲೇ ಇಂತಹ ಮಸಲತ್ತಿಗೆ ರಾಜ್ಯದಲ್ಲಿ ಚಾಲನೆ ನೀಡಲಾಗಿದೆ. ಕರಾವಳಿಯ ಜಿಲ್ಲೆಗಳಲ್ಲಂತೂ ಇದು ದಿನನಿತ್ಯ ನಡೆಯುತ್ತಿದೆ. ಒಂದೆಡೆ ಹಿಂದೂತ್ವ ಪುಢಾರಿಗಳು ಕ್ರಿಶ್ಚಿಯನ್ನರ ಮತ್ತು ಮುಸಲ್ಮಾನರ ಮನೆ, ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ಇಡುತ್ತಿದ್ದರೆ, ಅವರ ರಕ್ಷಣೆಗೆ ಸಂಘಪರಿವಾರದ ನಾಯಕರೇ ನಿಂತು ಅವರನ್ನು ಹುರಿದುಂಬಿಸುತ್ತಿದ್ದಾರೆ. ಇದೆಲ್ಲದರ ಬಗ್ಗೆ ಈ ಸಂಚಿಕೆಯಲ್ಲಿ ಜಿ.ರಾಜಶೇಖರ ಮತ್ತು ಕೆ. ಫಣಿರಾಜ್ ವಿವರವಾದ ವರದಿಯನ್ನು ಬರೆದಿದ್ದಾರೆ.

ಅಷ್ಟೇ ಅಲ್ಲದೆ, ಕಳೆದ ವಾರ ಸುಳ್ಯದಲ್ಲಿ ಪೊಲೀಸ್ ಠಾಣೆಯ ಮೇಲೆ ಕಲ್ಲು ತೂರಿದ್ದ ರಾಧಾಕೃಷ್ಣ ಎಂಬ ಚೆಡ್ಡಿ ಶಿಕ್ಷಕನನ್ನು ಸಂಘ ಪರಿವಾರದ ಹಿರಿಯ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟ ರಕ್ಷಿಸಿದ್ದಾನಲ್ಲದೆ, ಆ ಶಿಕ್ಷಕನ ವಿರುದ್ಧ ಕ್ರಮ ತೆಗೆದುಕೊಂಡಿದ್ದ ಪೊಲೀಸ್ ಅಧಿಕಾರಿಗಳನ್ನೇ ರಾಜ್ಯ ಸರ್ಕಾರ ಸುಳ್ಯದಿಂದ ವರ್ಗಾ ಮಾಡುವಂತೆ ನೋಡಿಕೊಂಡಿದ್ದಾನೆ. ಅದೂ ಸಾಲದೆಂಬಂತೆ ಅದೇ ರಾಧಾಕೃಷ್ಣನನ್ನು ತನ್ನೊಂದಿಗೆ ಸಾರ್ವಜನಿಕ ವೇದಿಕೆಯಲ್ಲಿ ಕೂರಿಸಿಕೊಂಡು "ತಾಕತ್ತಿದ್ದರೆ ಬಂದು ಈತನನ್ನು ಬಂಧಿಸಿ" ಎಂದು ಪೊಲೀಸರಿಗೆ ಸವಾಲು ಹಾಕಿದ್ದಾನೆ. ಅದೇ ವೇದಿಕೆಯಲ್ಲಿ ಈ ಭಟ್ಟ ಅಲ್ಪಸಂಖ್ಯಾತರ ವಿರುದ್ಧ ಕಟ್ಟಾಕೊಳಕು ಮಾತುಗಳನ್ನಾಡಿದ್ದಾನೆ. ಇದೆಲ್ಲದರ ಉದ್ದೇಶ ಅಲ್ಪಸಂಖ್ಯಾತರು ತಮ್ಮ ತಾಳ್ಮೆಯನ್ನು ಕಳೆದುಕೊಂಡು ಜಗಳಕ್ಕೆ ಬೀಳಲಿ ಎಂಬುದೇ ಆಗಿದೆ.

ಅಂತಹ ಮಸಲತ್ತಿನ ಭಾಗವಾಗಿಯೇ ಸಿಂದಗಿಯಲ್ಲಿ 'ರಾಷ್ಟ್ರಪ್ರೇಮಿ' ಶ್ರೀರಾಮ ಸೇನೆಯ ಕಿಡಿಗೇಡಿಗಳು ಭಾರತದ ಧ್ವಜವನ್ನು ಹಾರಿಸುವ ಬದಲಾಗಿ ಪಾಕಿಸ್ತಾನದ ಧ್ವಜವನ್ನು ಹಾರಿಸಿರುವುದು. ಇದರಿಂದಲೇ ಇವರ ದೇಶ ಪ್ರೇಮ, ದೇಶ ಭಕ್ತಿ ಮತ್ತು ಧರ್ಮ ನಿಷ್ಠೆ ಎಂತಹದ್ದು ಎಂದು ಅರ್ಥವಾಗುತ್ತದೆ.

ಮುಖ್ಯಮಂತ್ರಿ ಕುರ್ಚಿಯ ಆಶೆಗೆ ಬಿದ್ದಿರುವ ಭ್ರಷ್ಟಾತಿಭ್ರಷ್ಟ, ಜಾತಿವಾದಿ, ಕೋಮುವಾದಿ ಯಡ್ಡಿಯಿಂದಾಗಿ ರಾಜ್ಯದಲ್ಲಿ ಸದ್ಯದಲ್ಲಿಯೇ ಚುನಾವಣೆಗಳು ಎದುರಾದರೆ, ನಮ್ಮ ರಾಜ್ಯದ ಜನ ಸಂಘಪರಿವಾರದ ಇಂತಹ ಹುನ್ನಾರಗಳು ಗೆಲ್ಲದಂತೆ ನೋಡಿಕೊಳ್ಳಬೇಕಿದೆ ಮತ್ತು ಆ ಅವಕಾಶವನ್ನು ಉಪಯೋಗಿಸಿಕೊಂಡು ಚೆಡ್ಡಿಗಳನ್ನು ಮತ ಪೆಟ್ಟಿಗೆಯಲ್ಲಿ ನಾಮಾವಶೇಷ ಮಾಡಬೇಕಿದೆ. ❖

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಕರಾವಳಿಯ ತಾಜಾ ಸುದ್ದಿ

ಮನೆಮನೆಯಲ್ಲಿ ಮತಾಂತರ ಕೇಂದ್ರಗಳು! ಮಸೀದಿಯಲ್ಲಿ ಟೆರ್ರರಿಸ್ಟರು!

"ಕರಾವಳಿಯಲ್ಲಿ ಕೋಮುದ್ವೇಷದ ಕರಾಳಪರ್ವ ಪುನಃ ಶುರುವಾದಂತೆ ಭಾಸವಾಗುತ್ತದೆ. ಆದರೆ ವಾಸ್ತವವಾಗಿ ಉಭಯ ಜಿಲ್ಲೆಗಳಲ್ಲಿ ಕಳೆದ ಶತಮಾನದ 90ರ ದಶಕದಿಂದ ಈಚೆಗೆ ಸಂಘಪರಿವಾರವು ಅಲ್ಪಸಂಖ್ಯಾತರ ವಿರುದ್ಧ ಬೆಳೆಸಿದ ಅಪನಂಬಿಕೆ, ತಿರಸ್ಕಾರ, ದ್ವೇಷ ಮತ್ತು ಭಯಗಳ ಪ್ರಕ್ಷುಬ್ಧ ವಾತಾವರಣ ಮಾಮೂಲು ಸ್ಥಿತಿಗೆ ಮರಳಿದ್ದೇ ಇಲ್ಲ. ಸಂಖ್ಯಾಬಲ ಹಾಗೂ ತೋಳ್ಬಲಗಳ ದಬ್ಬಾಳಿಕೆ ಈಗ ಕರಾವಳಿಯ ಜನಜೀವನದ ಸ್ಥಾಯೀಗುಣವಾಗಿ ಬಿಟ್ಟಿದೆ. ಈ ದಬ್ಬಾಳಿಕೆಗೆ ಇಲ್ಲಿನ ಮಠ ಮಾನ್ಯಗಳ ಆಶೀರ್ವಾದ ವಿದೆ; ನಾಗರಿಕ ಸಮಾಜದ ಸಮ್ಮತಿ ಇದೆ; ಮಾಧ್ಯಮಗಳ ತುಂಬು ಸಹಕಾರವಿದೆ."

• ಜಿ. ರಾಜಶೇಖರ, ಕೆ. ಫಣಿರಾಜ್

ಕಳೆದ ವರ್ಷದ ಕೊನೆಯವಾರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆದ ಧಾರ್ಮಿಕ ಪೊಲೀಸುಗಿರಿಯ ಮೂರು ಘಟನೆಗಳಿಂದ, ಕರಾವಳಿಯಲ್ಲಿ ಕೋಮುದ್ವೇಷದ ಕರಾಳಪರ್ವ ಪುನಃ ಶುರುವಾದಂತೆ ಭಾಸವಾಗುತ್ತದೆ. ಆದರೆ ವಾಸ್ತವವಾಗಿ ಉಭಯ ಜಿಲ್ಲೆಗಳಲ್ಲಿ ಕಳೆದ ಶತಮಾನದ 90ರ ದಶಕದಿಂದ ಈಚೆಗೆ ಸಂಘಪರಿವಾರವು ಅಲ್ಪಸಂಖ್ಯಾತರ ವಿರುದ್ಧ ಬೆಳೆಸಿದ ಅಪನಂಬಿಕೆ, ತಿರಸ್ಕಾರ, ದ್ವೇಷ ಮತ್ತು ಭಯಗಳ ಪ್ರಕ್ಷುಬ್ಧ ವಾತಾವರಣ ಮಾಮೂಲು ಸ್ಥಿತಿಗೆ ಮರಳಿದ್ದೇ ಇಲ್ಲ. ಸಂಖ್ಯಾಬಲ ಹಾಗೂ ತೋಳ್ಬಲಗಳ ದಬ್ಬಾಳಿಕೆ ಈಗ ಕರಾವಳಿಯ ಜನಜೀವನದ ಸ್ಥಾಯೀಗುಣವಾಗಿ ಬಿಟ್ಟಿದೆ. ಈ ದಬ್ಬಾಳಿಕೆಗೆ ಇಲ್ಲಿನ ಮಠ ಮಾನ್ಯಗಳ ಆಶೀರ್ವಾದವಿದೆ; ನಾಗರಿಕ ಸಮಾಜದ ಸಮ್ಮತಿ ಇದೆ; ಮಾಧ್ಯಮಗಳ ತುಂಬು ಸಹಕಾರವಿದೆ. ಇದನ್ನೆಲ್ಲ ಪ್ರತಿಭಟಿಸಬೇಕಾದ ಸೆಕ್ಯುಲರ್ ಪಕ್ಷಗಳ ಮಾತಿಗೆ ಬಂದರೆ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಅವುಗಳ ವಿಳಾಸ ಹುಡುಕಿಕೊಂಡು ಅಲೆಯಬೇಕಾದ ಪರಿಸ್ಥಿತಿ ಇದೆ. ಈ ದಾರುಣ ಸತ್ಯ ಕಳೆದವಾರ ಮತ್ತೊಮ್ಮೆ ಸಾಬೀತಾಯಿತು.

ಮತಾಂತರವೆಂಬ ಗುಮ್ಮ

ಮಂಗಳೂರು ಸಮೀಪದ ಸುರತ್ಕಲ್, ದ.ಕ. ಜಿಲ್ಲೆಯ ಕೋಮುದ್ವೇಷದ ಹಾಟ್‌ಸ್ಪಾಟ್‌ಗಳಲ್ಲಿ ಒಂದು. 1998ರ ಡಿಸೆಂಬರ್ ತಿಂಗಳಲ್ಲಿ ಮುಸ್ಲಿಮರ ವಿರುದ್ಧ ನಡೆದ ಹಿಂಸಾಚಾರದಲ್ಲಿ ಒಂಬತ್ತು ಮಂದಿ ಮೃತರಾಗಿದ್ದು ನೂರಾರು ಜನ ಗಾಯಗೊಂಡಿದ್ದರು. ಆ 'ಗಲಭೆಗೆ' ಪೂರ್ವಭಾವಿಯಾಗಿ ಸುರತ್ಕಲ್ ಕುಳಾಯಿಯ ನ್ಯೂ ಲೈಫ್ ಪಂಥದ ಕ್ರೈಸ್ತ ಪ್ರಾರ್ಥನಾ ಮಂದಿರದ ಮೇಲೆ ಮತಾಂತರದ ಆರೋಪ ಹೊರಿಸಿ ದಾಳಿ ನಡೆಸಲಾಗಿತ್ತು. ಹಿಂದೂತ್ವದ ತೋಳ್ಬಲ ಪ್ರದರ್ಶನದ ಪರಂಪರೆ ಸುರತ್ಕಲ್‌ನಲ್ಲಿ ಈಗಲೂ ಮುಂದುವರಿದಿದೆ. ಮೊನ್ನೆ, 2011ರ ಡಿಸೆಂಬರ್ 25ರ ಭಾನುವಾರ ರಾತ್ರಿ ಪಟ್ಟಣದ ಹೊರವಲಯದ ಕಾನ ಎಂಬಲ್ಲಿ ನ್ಯೂ ಲೈಫ್‌ನ ಅನುಯಾಯಿಯೊಬ್ಬರು– ಅಡಿವೆಪ್ಪ ಎಂದು ಅವರ ಹೆಸರು– ಕ್ರಿಸ್‌ಮಸ್ ಪ್ರಯುಕ್ತ ಭೋಜನಕೂಟ ಏರ್ಪಡಿಸಿದ್ದರು. ಅದೇನೂ ಸಾರ್ವಜನಿಕ ಸಮಾರಂಭವಾಗಿರಲಿಲ್ಲ, ಅಡಿವೆಪ್ಪ ತಮ್ಮ ಕೆಲವು ಆಪ್ತ ಮಿತ್ರರನ್ನು ತಮ್ಮ ಮನೆಗೆ ಆಮಂತ್ರಿಸಿದ್ದರು. ಆ ದಿನ ರಾತ್ರಿ ಸುಮಾರು ಎಂಟು ಗಂಟೆಯ ಹೊತ್ತಿಗೆ ಗಂಡಸರು, ಹೆಂಗಸರು ಮತ್ತು ಮಕ್ಕಳು ಸೇರಿ – ಸುಮಾರು 15ರಷ್ಟು ಅತಿಥಿಗಳು – ಪ್ರಾರ್ಥನೆ ಮುಗಿಸಿ, ಊಟ ಪ್ರಾರಂಭಿಸಿದ ಕೆಲವೇ ಕ್ಷಣಗಳಲ್ಲಿ, ಅಡಿವೆಪ್ಪ ಅವರ ಮನೆಯ ಬಾಗಿಲು ದೂಡಿ, 15 ಜನ ಯುವಕರ ಗುಂಪೊಂದು ಒಳ ನುಗ್ಗಿತು. ಗುಂಪಿನಲ್ಲಿದ್ದವರು ಮರದ ದೊಣ್ಣೆಗಳನ್ನು ಹಿಡಿದಿದ್ದರು. "ಮತಾಂತರ ಮಾಡುವುದಕ್ಕೆ ಇಲ್ಲಿ ಸೇರಿದ್ದೀರಾ? ನಿಮಗೆಲ್ಲ ಬುದ್ಧಿ ಕಲಿಸುತ್ತೇವೆ" ಎಂದು ಮುಂತಾಗಿ ಆರ್ಭಟಿಸುತ್ತ ಅವರು ಮನೆಯಲ್ಲಿದ್ದವರಿಗೆ ಯದ್ವಾತದ್ವಾ ಬಾರಿಸಿದರು. ಬಡಿಸಲು ಸಿದ್ಧವಾಗಿದ್ದ ಅಡುಗೆಯನ್ನು ಚೆಲ್ಲಾಡಿದರು. ಹೀಗೆ ಕೆಲವೇ ನಿಮಿಷಗಳ ಒಳಗೆ ಹಿಂದೂ ಧರ್ಮದ ರಕ್ಷಣೆಯ ತಮ್ಮ ಕೆಲಸ ಮುಗಿಸಿದ ಆ ವೀರರು ಅಲ್ಲಿಂದ ಪಲಾಯನ ಮಾಡಿದರು. ಆ ದಾಳಿಯಲ್ಲಿ ಗಾಯಗೊಂಡ 12 ಜನರಲ್ಲಿ ಜೇಸನ್ ಎಂಬ 28ರ ಹರೆಯದ ಯುವಕರ ಕಾಲಿನ ಎಲುಬು ಮುರಿದಿದೆ; ನಾಲ್ವರು ಮಹಿಳೆಯರಿಗೆ ಏಟು ಬಿದ್ದಿದೆ.

ಇವರನ್ನೆಲ್ಲ ಊಟಕ್ಕೆ ಕರೆದ ಅಡಿವೆಪ್ಪ ಮೂಲತಃ ದಾವಣಗೆರೆಯವರು. ಬಹಳ ವರ್ಷಗಳಿಂದ ಅವರು ಸುರತ್ಕಲ್‌ನಲ್ಲಿ ನೆಲೆಸಿದ್ದು ಇಲ್ಲಿನ ಎಂ.ಆರ್.ಪಿ.ಎಲ್. ಕಂಪನಿಯ ಹೊರಗುತ್ತಿಗೆದಾರರೊಬ್ಬರ ಅಡಿಯಲ್ಲಿ ನೌಕರಿ ಮಾಡುತ್ತಿದ್ದಾರೆ. ಅಡಿವೆಪ್ಪ, ನಮಗೆ ತಿಳಿಸಿದಂತೆ, ಎಸ್.ಸಿ. ಸಮುದಾಯದವರು. ಅವರ ಕುಟುಂಬದಲ್ಲಿ ಕೆಲವರು ಪ್ರಾಟೆಸ್ಟಂಟ್ ಕ್ರೈಸ್ತ ಪಂಥದ ನ್ಯೂ ಲೈಫ್ ಚರ್ಚ್‌ನ ಅನುಯಾಯಿಗಳಾದರೆ, ಇನ್ನು ಹಲವರು ತಮ್ಮ ಮೂಲ ಧರ್ಮಕ್ಕೆ ನಡೆದುಕೊಳ್ಳುವವರು. ಅಡಿವೆಪ್ಪನವರು ಕೆಳಜಾತಿ ವರ್ಗಗಳಿಂದ ಬಂದವರಾಗಿರಬಹುದು. ಆದರೆ ಅವರು ನಮ್ಮ ಹಿಂದೂತ್ವವಾದಿ ಚಿಂತಕರಾದ ಭೈರಪ್ಪ, ಚಿದಾನಂದ ಮೂರ್ತಿ, ರಾಮಾ ಜೋಯಿಸ್ ವಗೈರೆಗಳು ಹೇಳುವ "ಮತಾಂತರದ ಆಮಿಷಕ್ಕೆ ಒಳಗಾಗಿರುವ ಮುಗ್ಧ ಬಡಪಾಯಿ ಹಿಂದೂ" ಖಂಡಿತ ಅಲ್ಲ. ಪಿ.ಯು.ಸಿ.ವರೆಗೆ ಓದಿರುವ ಅಡಿವೆಪ್ಪ ಅವರಿಗೆ ಕಾಲೇಜಿನಲ್ಲಿ ಓದುತ್ತಿರುವ ಮಗನಿದ್ದಾನೆ. ಅದು ಹೇಗೂ ಇರಲಿ ಮುಗ್ಧರೂ, ಬಡಪಾಯಿಗಳೂ ಆಗಿರುವ ಜನಗಳಿಗೆ ತಮ್ಮ ನಂಬಿಕೆ ಕುರಿತು ತೀರ್ಮಾನ ತೆಗೆದುಕೊಳ್ಳುವ ಹಕ್ಕಿಲ್ಲವೆ? ಅವರ ಧಾರ್ಮಿಕ ನಂಬಿಕೆಗಳ ಉಸ್ತುವಾರಿಯನ್ನು ಚಿದಾನಂದ ಮೂರ್ತಿ ಇತ್ಯಾದಿಗಳಿಗೆ ವಹಿಸಿಕೊಟ್ಟವರು ಯಾರು? ಎಂಬುದು ಪ್ರಜಾಪ್ರಭುತ್ವದಲ್ಲಿ ಅಗತ್ಯವಾಗಿ ಕೇಳಲೇಬೇಕಾದ ಪ್ರಶ್ನೆಗಳು. ಆದರೆ ಮತಾಂತರದ ಆರೋಪಕ್ಕೆ ಒಳಗಾಗಿರುವ ಅಡಿವೆಪ್ಪ ಮುಗ್ಧನೂ ಅಲ್ಲ; ಅಸಹಾಯಕನೂ ಅಲ್ಲ. "ನಾನು ಯಾರ ಒತ್ತಾಯಕ್ಕೂ ಒಳಗಾಗಿಲ್ಲ; ಯಾರನ್ನೂ ನಾನು ಒತ್ತಾಯಿಸುವುದೂ ಇಲ್ಲ. ಮತಾಂತರ ಎಂದರೆ ಏನು ಎಂದು ಸಹ ನನಗೆ ಗೊತ್ತಿಲ್ಲ" ಎಂದು ಅವರು ನಮ್ಮೊಡನೆ ಹೇಳಿದರು.

ಕ್ರಿಸ್‌ಮಸ್ ರಾತ್ರಿ ಅಡಿವೆಪ್ಪ ಅವರ ಮನೆಗೆ ಅತಿಥಿಯಾಗಿ ಸುರತ್ಕಲ್ ನ್ಯೂ ಲೈಫ್ ಚರ್ಚಿನ ಪಾಸ್ಟರ್ ಸುರೇಶ್ ಕುಮಾರ್ ಕೂಡ ಬಂದಿದ್ದರು. ಕಳೆದ ಹಲವು ವರ್ಷಗಳಿಂದ ಊರಿನಲ್ಲಿ ಸಂಘ ಪರಿವಾರ ಮತ್ತು ಪೊಲೀಸು ಇಲಾಖೆ ಒಟ್ಟಾಗಿ ತಮಗೆ ಕೊಡುತ್ತಿರುವ ಕಿರುಕುಳದ ಬಗ್ಗೆ ಅವರು ಹೇಳಿದರು. ಕೆಲವು ವರ್ಷಗಳ ಹಿಂದಿನವರೆಗೆ ನ್ಯೂ ಲೈಫ್ ಚರ್ಚ್ ಸುರತ್ಕಲ್‌ನ ಹೋಟೆಲ್ ಲಲಿತ್‌ನ ಸಭಾಂಗಣದಲ್ಲಿ ಪ್ರತಿ ಭಾನುವಾರ ಬೆಳಗ್ಗೆ ತನ್ನ ಪ್ರಾರ್ಥನಾ ಕೂಟಗಳನ್ನು ನಡೆಸುತ್ತಿತ್ತು. ಸುರತ್ಕಲ್ ಪೊಲೀಸರ ಒತ್ತಡದಿಂದಾಗಿ, ಹೋಟೆಲ್‌ನವರು ಸಭಾಂಗಣವನ್ನು ಬಾಡಿಗೆಗೆ ಕೊಡಲು ನಿರಾಕರಿಸಿದರು. ಆನಂತರ ಊರಿನ ಸಹಕಾರಿ ಬ್ಯಾಂಕೊಂದರ ಹಾಲ್‌ನಲ್ಲಿ ಚರ್ಚ್‌ನವರು ತಮ್ಮ ಭಾನುವಾರದ ಪ್ರಾರ್ಥನೆ ನಡೆಸಲು ಪ್ರಾರಂಭಿಸಿದರು. ಅಲ್ಲಿಂದಲೂ ಅವರನ್ನು ಎತ್ತಂಗಡಿ ಮಾಡಿದ ಮೇಲೆ ಸುರತ್ಕಲ್‌ನ ಮನೆಯೊಂದನ್ನು ಅವರು ಆಶ್ರಯಿಸಿದ್ದರು. ಈಗ ಇಂತಹ ಖಾಸಗೀ ಸ್ಥಳಗಳನ್ನು ಸಹ ಪೊಲೀಸರು "ವಿಚಾರಿಸಿಕೊಳ್ಳತೊಡಗಿದ್ದಾರೆ".

2011ರ ಏಪ್ರಿಲ್‌ನಲ್ಲಿ ದ.ಕ. ಜಿಲ್ಲೆಯ ಪೊಲೀಸು ಇಲಾಖೆಯ ಕ್ರೈಮ್ ಬ್ರಾಂಚ್ ಎ.ಸಿ.ಪಿ. ಜಿಲ್ಲೆಯ ಸುಮಾರು 60 ಪಾಸ್ಟರುಗಳಿಗೆ ಪತ್ರ ಬರೆದು, ಪ್ರಾರ್ಥನಾ ಸಭೆಗಳನ್ನು ನಡೆಸುವ ಮೊದಲು ಸರಕಾರದ ಪರವಾನಗಿ ಪಡೆಯಬೇಕು ಎಂದು ತಿಳಿಸಿದರು. ಆ ಕೋರಿಕೆಯೇ ಕಾನೂನುಬಾಹಿರವಾಗಿತ್ತು, ಅದಕ್ಕೆ ಸಂಬಂಧಿಸಿದಂತೆ ಸರಕಾರದ ಯಾವುದೇ ಆರ್ಡರ್ ಆಗಲೀ, ಸುತ್ತೋಲೆಯಾಗಲೀ ಇರಲೇ ಇಲ್ಲ. ಅದು ಜಿಲ್ಲೆಯ ಪೊಲೀಸು ಅಧಿಕಾರಿಗಳು ಒಂದೋ ಸಂಘಪರಿವಾರವನ್ನು ಖುಷಿ ಪಡಿಸಲು ಅಥವಾ ಸ್ವಯಂಸ್ಫೂರ್ತಿಯಿಂದ ಕೈಗೊಂಡ ನಿರ್ಣಯವಾಗಿತ್ತು. ಅಡಿವೆಪ್ಪ ಅವರ ಮನೆಯಲ್ಲಿ ನಡೆದ ಘಟನೆ ಈ ಕಿರುಕುಳದ ಮುಂದುವರಿಕೆ ಎಂದು ಸುರೇಶಕುಮಾರ್ ಭಾವಿಸುತ್ತಾರೆ. ಘಟನೆಯ ಬಗ್ಗೆ ಅವರು ಸುರತ್ಕಲ್ ಪೊಲೀಸು ಠಾಣೆಗೆ ದೂರುಕೊಟ್ಟಿದ್ದಾರೆ. ಠಾಣೆಯಲ್ಲಿ ಪೊಲೀಸರು ದೂರು ದಾಖಲಿಸಿಕೊಂಡು ಎಫ್.ಐ.ಆರ್.ನ ಶಾಸ್ತ್ರವನ್ನು ಮುಗಿಸಿದ್ದಾರೆ. ಆದರೆ ಆನಂತರ ದಾಳಿಕೋರರ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಿ ಸುರೇಶ್ ಕುಮಾರ್ ಸುರತ್ಕಲ್ ಪೊಲೀಸು ಠಾಣೆಗೆ ಹೋದಾಗ "ಒಂದುಸಲ ಎಫ್.ಐ.ಆರ್. ಮಾಡಿದ ಮೇಲೆ ಅದನ್ನು ಬದಲಾಯಿಸಲು ಬರುವುದಿಲ್ಲ" ಎಂದು ಕೇಸನ್ನು ತಿಪ್ಪೆಸಾರಿಸಿದ್ದೇ ಅಲ್ಲದೆ "ಏನ್ರೀ ಲಕ್ಷ ಲಕ್ಷ ರೂಪಾಯಿ ತೆಗೆದುಕೊಂಡು ಮತಾಂತರ ಮಾಡುತ್ತೀರಾ?" ಎಂದು ಅವರನ್ನೇ ಠಾಣೆಯ ಪೊಲೀಸರು ಗದರಿಸಿದ್ದಾರೆ.

ಇದಾದ ಮೂರು ದಿನಗಳ ನಂತರ 2011ರ ಡಿಸೆಂಬರ್ 28ರ ಬುಧವಾರ ರಾತ್ರಿ, ಸುರತ್ಕಲ್ ಸಮೀಪದ ಹಳೆ ಅಂಗಡಿ ಎಂಬಲ್ಲಿ ಪ್ರಾಟೆಸ್ಟಂಟ್ ಪಂಥದ ಪೆಂಟೆಕೋಸ್ಟಲ್ ಚರ್ಚ್‌ನ ಹೆಬ್ರೋನ್ ಅಸೆಂಬ್ಲಿಯ ಮಂದಿರದ ಮೇಲೆ ಸಹ ಗುಂಪು ದಾಳಿ ನಡೆದಿದೆ. ರಾತ್ರಿ ಎಂಟು ಗಂಟೆಯ ಸುಮಾರಿಗೆ 15 ಯುವಕರು ಮುಖಕ್ಕೆ ಮುಸುಕು ಹಾಕಿಕೊಂಡು ಬಂದು ದೊಣ್ಣೆಗಳಿಂದ ಮಂದಿರದ ಫ್ಯಾನುಗಳನ್ನು ಜಖಂಗೊಳಿಸಿ, ಟ್ಯೂಬ್‌ಲೈಟು ಹಾಗೂ ಮೂರು ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಒಂದನ್ನು ನಾಶಮಾಡಿದ್ದಾರೆ. ದಾಳಿಕೋರರು ಮಂದಿರದ ಹಿಂಭಾಗದಲ್ಲಿದ್ದ ಪಾಸ್ಟರ್ ಇಮ್ಯಾನುವೆಲ್ ಪ್ರಸನ್ನ ಅವರ ನಿವಾಸದ ಅಡುಗೆ ಮನೆಗೂ ನುಗ್ಗಿ ಅಲ್ಲಿದ್ದ ಫ್ರಿಜ್ ಮತ್ತು ಓವೆನ್‌ಗಳನ್ನು ಧ್ವಂಸಗೊಳಿಸಿದ್ದಾರೆ. ದಾಳಿಕಾರರ ಉದ್ದೇಶ ಮಾರಣಾಂತಿಕ ಹಲ್ಲೆಯಾಗಿದ್ದರೂ ಅವರು ಮಂದಿರದೊಳಗೆ ನುಗ್ಗಿದ ಹೊತ್ತಿಗೆ ಆ ಆವರಣದಲ್ಲಿ ಯಾರೂ ಇರಲಿಲ್ಲವಾದ್ದರಿಂದ ಪ್ರಾಣಹಾನಿ ತಪ್ಪಿತು. ಪ್ರಸನ್ನ ಹೇಳುವ ಪ್ರಕಾರ ಹಳೆ ಅಂಗಡಿಯ ಹೆಬ್ರಾನ್ ಪ್ರಾರ್ಥನಾಮಂದಿರಕ್ಕೆ ನಡೆದುಕೊಳ್ಳುವವರ ಸಂಖ್ಯೆ 40 ವರ್ಷಗಳಲ್ಲಿ ಯಾವತ್ತೂ ನೂರು, ನೂರೈವತ್ತಕ್ಕಿಂತ ಜಾಸ್ತಿ ಆಗಿಲ್ಲ. ಆದಾಗ್ಯೂ ಅದೊಂದು ಮತಾಂತರ ಕೇಂದ್ರ ಎಂಬ ಸುಳ್ಳು ಆರೋಪವನ್ನು ಅದಕ್ಕೆ ಲಗತ್ತಿಸಲಾಗಿದೆ.

ಹಳೆ ಅಂಗಡಿಗೆ ಕೋಮುದ್ವೇಷ ಹೊಸತಲ್ಲ. ಪ್ರಾಟೆಸ್ಟಂಟ್ ಕ್ರೈಸ್ತ ಪಂಥದ ಪ್ರಧಾನ ಧಾರೆಯ ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್‌ಗೆ ಜಿಲ್ಲೆಯಲ್ಲಿ 200 ವರ್ಷಗಳ ಇತಿಹಾಸವಿದ್ದು, ಹಳೆಅಂಗಡಿಯಲ್ಲಿ ಅದು ಕಳೆದ ನೂರು ವರ್ಷಗಳಿಂದ ಅತ್ಯುತ್ತಮ ಗುಣಮಟ್ಟದ ಉಚಿತ ಹಿರಿಯ ಪ್ರಾಥಮಿಕ ಶಾಲೆಯೊಂದನ್ನು ನಡೆಸುತ್ತಿದೆ. 2009ರಲ್ಲಿ ಆ ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇತರ ಕಾರ್ಯಕ್ರಮಗಳ ಜೊತೆ 'ಏಸುಕ್ರಿಸ್ತ ಮಹಾತ್ಮೆ' ಎಂಬ ಯಕ್ಷಗಾನ ಪ್ರದರ್ಶನ ನಡೆಸಲು ಶಾಲೆಯ ವಿದ್ಯಾರ್ಥಿಗಳು ತಾಲೀಮು ನಡೆಸಿದ್ದರು. ಆ ಪ್ರದರ್ಶನದಲ್ಲಿ ಶಾಲೆಯ ಹಿಂದೂ ವಿದ್ಯಾರ್ಥಿಗಳು ಭಾಗವಹಿಸಕೂಡದು ಎಂದು ಸ್ಥಳೀಯ ಬಜರಂಗಿಗಳು ತಾಕೀತು ಮಾಡಿದ್ದರಿಂದ ಶಾಲೆಯ ಆಡಳಿತ ಮಂಡಳಿ ಆ ಸಾಲಿನ ವಾರ್ಷಿಕೋತ್ಸವವನ್ನೇ ರದ್ದುಪಡಿಸಿತ್ತು.


ಹೆಬ್ರಾನ್ ಮಂದಿರ ಮೇಲೆ ದಾಳಿ ನಡೆಯುವುದಕ್ಕೆ ಕೆಲವು ತಿಂಗಳ ಮೊದಲು ಅಲ್ಲಿಗೆ ಸಮೀಪದ ಪಕ್ಷಿಕೆರೆ ಎಂಬಲ್ಲಿನ ಪ್ರಾರ್ಥನಾಮಂದಿರದ ಮೇಲೆ ದಾಳಿ ನಡೆದಿತ್ತು. ಹಳೆ ಅಂಗಡಿ ಮೂಲ್ಕಿ ಪೊಲೀಸು ಠಾಣೆಯ ವ್ಯಾಪ್ತಿಯಲ್ಲಿದ್ದು, ಅಲ್ಲಿಯ ಸಿಬ್ಬಂದಿಯ ವರ್ತನೆ ನೊಂದವರನ್ನೇ ಅಪರಾಧಿಗಳು ಎಂದು ಪರಿಗಣಿಸುವಂತದ್ದಾಗಿದೆ. ಈ ದಾಳಿ ನಡೆಯುವುದಕ್ಕೆ ಮೊದಲೇ ಮೂಲ್ಕಿ ಠಾಣೆಯವರು ಹೆಬ್ರಾನ್ ಅಸೆಂಬ್ಲಿಯ ಪಾಸ್ಟರ್ ಅವರಿಗೆ ಪತ್ರ ಬರೆದು "ನಿಮ್ಮ ಪ್ರಾರ್ಥನಾಮಂದಿರಕ್ಕೆ ಸರಕಾರ ಅನುಮತಿ ನೀಡಿರುವ ಬಗ್ಗೆ ದಾಖಲೆ ಒದಗಿಸಿ" ಎಂದು ಕೇಳಿದ್ದರು. "ಪ್ರಾರ್ಥನೆ ಮಾಡಲು ನಮಗೆ ಸರಕಾರದ ಅನುಮತಿಯ ಅವಶ್ಯವಿಲ್ಲ. ಅಂತಹ ಯಾವುದೇ ಸರಕಾರೀ ಆಜ್ಞೆಯೂ ಇಲ್ಲ" ಎಂದು ಪಾಸ್ಟರ್ ಪ್ರಸನ್ನ ಆ ಪತ್ರಕ್ಕೆ ಉತ್ತರಿಸಿದ್ದರು. ಹಳೆ ಅಂಗಡಿಯ ಗ್ರಾಮ ಪಂಚಾಯತ್ ಅಧ್ಯಕ್ಷ ಬಿ.ಜೆ.ಪಿ. ಪಕ್ಷದ ಸ್ಥಳೀಯ ಮುಖಂಡರಾಗಿದ್ದು, ಅವರಿಗೂ ಹೆಬ್ರಾನ್ ಮಂದಿರದ ದಾಖಲೆಗಳು ಬೇಕಂತೆ. ಪಂಚಾಯತ್ ಸದಸ್ಯರ ಅನುಮೋದನೆ ಇಲ್ಲದೆ, ಅವರೇ ಪಾಸ್ಟರ್ ಅವರಿಗೆ ಪಂಚಾಯತ್ ಲೆಟರ್‌ಹೆಡ್‌ನಲ್ಲಿ ಪತ್ರ ಬರೆದು "ನಿಮ್ಮ ಪ್ರಾರ್ಥನಾ ಮಂದಿರದ ಪರವಾನಗಿಯನ್ನು ಹಾಜರುಪಡಿಸಿ" ಎಂದು ಕೆಲವು ತಿಂಗಳ ಕೆಳಗೆ ಆರ್ಡರ್ ಮಾಡಿದ್ದರು. ಕರಾವಳಿಯಲ್ಲಿ ಈಗ ಪ್ರಾರ್ಥನೆಗೂ ಈ ದೊಣ್ಣೆನಾಯಕರ ಅನುಮತಿ ಬೇಕು.




ಅಡಿವೆಪ್ಪ ಅವರ ಮನೆ ಮೇಲೆ ನಡೆದ ದಾಳಿಯಲ್ಲಿ ಗಾಯಗೊಂಡ ಅಣ್ಣಮ್ಮ ಮತ್ತು ಜೇಸನ್



ಹೆಬ್ರಾನ್ ಮಂದಿರದ ಮೇಲೆ ಸಂಘಪರಿವಾರಿಗಳು ನಡೆಸಿದ ದಾಳಿ




(ಫೋಟೋ ಕೃಪೆ: ದೈಜಿ ವರ್ಲ್ಡ್)



ದಾಳಿ ವಿರುದ್ಧ ಪ್ರತಿಭಟನೆ


...ಡವೂರಿನಲ್ಲಿ ಗ್ಯಾಸ್ ಸಿಲಿಂಡರ್ ಸಹಿತ ಬಂದ 'ಟೆರ್ರರಿಸ್ಟರು'!!

...ಕರಾವಳಿಯ ಊರುಗಳಲ್ಲಿ ಅಲ್ಪಸಂಖ್ಯಾತರು ತಮ್ಮ ...ಬನ್ನೂ ನಂಬಿ ಬದುಕುವಂತಿಲ್ಲ. ಅಲ್ಪಸಂಖ್ಯಾತರ ...ಗಳು ಹತ್ತಿರವಾಗುತ್ತಿದ್ದ ಹಾಗೆ ಆ ಸಮುದಾಯದಲ್ಲಿ ...ತಂಕಗಳು ಮನೆಮಾಡುವುದಕ್ಕೆ ಆವಶ್ಯಕವಾದ ...ವರಣವನ್ನು ಉಂಟುಮಾಡುವುದನ್ನು 'ಹಿಂದೂತ್ವ...' ವ್ರತ ಆಚರಿಸುತ್ತದೆ. ಕ್ರಿಸ್ಮಸ್ ದಿನ ಸುರತ್ಕಲಿನಲ್ಲಿ, ಹೊಸ ...ಚರಣೆಯ ಮುನ್ನ ಹಳೆಯಂಗಡಿಯಲ್ಲಿ, ಕ್ರಿಶ್ಚಿಯನ್ನರ ...ಲೆ ನಡೆದ ದಾಳಿಗಳ ಗಾಯಕ್ಕೆ ಉಪ್ಪು ಸವರುವ ಕೆಲಸ ...ಪಿಯಲ್ಲಿ ನಡೆದಿತ್ತು. ಹೊಸವರ್ಷಾಚರಣೆಯ ಎರಡು ...ಮುಂಚೆಯೆ 'ಹಿಂದು ಜನಜಾಗೃತಿ ಸಮಿತಿ'ಯವರು ...ಪಿಯ ಮುಖ್ಯ ಬೀದಿಯಲ್ಲಿ "ಹೊಸವರ್ಷಾಚರಣೆಗೆ ...ಯುವುದು, ಕುಣಿಯುವುದು ಇತ್ಯಾದಿಗಳು ಕ್ರೈಸ್ತರ


...ಡವೂರಿನ ಕಲ್ಮತ್ ಜಾಮಿಯಾ ಮಸೀದಿ

...ತಿಯಾಗಿದ್ದು ಹಿಂದೂಗಳು ಅಂತಹದ್ದರಲ್ಲಿ ತೊಡಗ ...ದು" ಎಂಬ ಫರ್ಮಾನ್‌ನ್ನುಳ್ಳ ದೊಡ್ಡ ಬ್ಯಾನರುಗಳನ್ನು ...ದ್ದರು. ಈ ಹವಾಮಾನ ಮುನ್ಸೂಚನೆಯನ್ನು ...ಪಿಯ ಕ್ರಿಶ್ಚಿಯನ್ನರು ಕಡೆಗಣಿಸುವಂತಿರಲಿಲ್ಲ.

ಉಡುಪಿಯ 'ಭಾರತೀಯ ಕ್ರೈಸ್ತ ಒಕ್ಕೂಟ'ದ ಪದಾಧಿ...ಗಳು ಕ್ರಿಶ್ಚಿಯನ್ ಸಮುದಾಯ ನಿರಾತಂಕವಾಗಿ ಹೊಸ ...ವನ್ನು ಆಚರಿಸುವಂತೆ ಸೂಕ್ತ ಕಾನೂನು ಪಾಲನೆಯ ... ಮಾಡಬೇಕೆಂದು ಕೋರಲು 2011ರ ಡಿಸೆಂಬರ್ ...ಬೆಳಗ್ಗೆ ಜಿಲ್ಲೆಯ ಎಸ್.ಪಿ.ಯವರ ಬಳಿ ಹೋಗಿದ್ದರು. ...ಯೋಗದೊಡನೆ ಚರ್ಚೆ ನಡೆಸುತ್ತಿದ್ದಾಗಲೇ ...ಪಿ.ಯವರಿಗೆ ತಮ್ಮ ಸುಪರ್ದಿನ ಮಲ್ಪೆ ಪೊಲೀಸ್ ...ಯಿಂದ ಫೋನ್ ಕರೆಬಂತು. "ಕೊಡವೂರಿಗೆ ...ರಿಸ್ಟರು ಬಂದಿದ್ದಾರಂತೆ! ನಾನು ಕೂಡಲೇ ...ಗಬೇಕು" ಎಂದು ಎಸ್.ಪಿ.ಯವರು ಒಕ್ಕೂಟದ ...ಧಿಕಾರಿಗಳಿಗೆ ಹೇಳಿ ಅರ್ಜೆಂಟಲ್ಲಿ ಜೀಪು ಹತ್ತಿ ...ಟರಂತೆ. ಏನಾಗುತ್ತಿದೆ ಎಂದು ತಿಳಿಯದೆ ...ಟದವರು ಎಸ್.ಪಿ.ಯ ಕೋಣೆಯಿಂದ ಹೊರಗೆ ...ರೆ, ಎಸ್.ಪಿ. ಕಚೇರಿಯ ಸಿಬ್ಬಂದಿ 'ಟೆರ್ರರಿಸ್ಟರ ಬಳಿ



...ಮಸೀದಿ ಸುತ್ತ ಸೇರಿರುವ ಮತ್ತು ಪೊಲೀಸರಿಗೇ ಧಮಕಿ ಹಾಕುತ್ತಿರುವ ಹಿಂದೂತ್ವ ಪುಂಡರು

...ತ ಶಸ್ತ್ರಾಸ್ತ್ರಗಳ' ಬಗ್ಗೆ ಪ್ರತ್ಯಕ್ಷ ಕಂಡವರ ಹಾಗೆ ...ದಿಕೊಳ್ಳುತ್ತಿದ್ದರಂತೆ. ವದಂತಿಯ ಈ ಶಸ್ತ್ರಾಸ್ತ್ರಗಳ ಆ ...ಲ್ಲಿ ಮಾಮೂಲಿ ಎ.ಕೆ.47ರ ಜೊತೆ ಇದ್ದ ಹೊಸ ...ಸ್ತ್ರ 'ಗ್ಯಾಸ್ ಸಿಲಿಂಡರ್'! ಮಲ್ಪೆ ಪೊಲೀಸರು ಕಟ್ಟಿದ ...ರರಿಸ್ಟ್ ಥ್ರಿಲ್ಲರ್' ಚಿತ್ರಕತೆ ಒಂದು ಠುಸ್ಸ್ ಪಟಾಕಿ ...ದು ಎಸ್.ಪಿ.ಯವರಿಗೆ ಸ್ಥಳಕ್ಕೆ ಹೋದಾಕ್ಷಣ ...ತು. ಆದರೆ ಕೊಡವೂರಿನ ಕಲ್ಮತ್ ಜಾಮಿಯ ...ದಿಯ ಸುತ್ತ 'ಹಿಂದೂ ವೀರರು' 14 ವರ್ಷಗಳಿಂದ ...ತ್ತಿರುವ ರೀಲಿನ್ನೂ ಮುಗಿದಿಲ್ಲ.

...ಡವೂರು ಉಡುಪಿಯ ಸಮೀಪವಿರುವ ಕಡಲ ... ಗ್ರಾಮ. ಆದರೆ ಸಿಟಿಬಸ್ ಸಂಪರ್ಕ ವ್ಯವಸ್ಥೆಯಿಂದ ...ಈಗ ಉಡುಪಿ ನಗರದ ವಿಸ್ತರಣೆಯೇ ಆಗಿದೆ. ಈ ...ದಲ್ಲಿ ಟಿಪ್ಪು ಸುಲ್ತಾನನ ಕಾಲದಲ್ಲಿ ಕಟ್ಟಿದ್ದು ಎಂದು ...ಗುವ, ನೂರಾರು ವರ್ಷ ಪುರಾತನವಾದ ಕಲ್ಮತ್ ...ಯಾ ಮಸೀದಿ ಇದೆ. ಒಂದಿಷ್ಟು ಎತ್ತರದ ಪ್ರದೇಶ ...ದ ಹಂಚಿನ ಮಾಡಿನ, ಒಂದು ಪ್ರಾರ್ಥನಾ ಪಡಸಾಲೆ, ಸುತ್ತ ಮೂರು ಅಡಿಗಳ ಅಗಲದ ಜಗುಲಿ ಇರುವ ಹಳೆಯ ಕಟ್ಟಡವಿದು. ಮಸೀದಿಯ ಮುಂಬಾಗಿಲಿಗೆ ಎದುರಾಗಿರುವ 'ತಲಾಬ್'ಗೆ ಇಳಿಯಲು ಇರುವ ಮೆಟ್ಟಿಲುಗಳ ಪ್ರವೇಶದಲ್ಲಿ ಕೆಂಪುಕಲ್ಲು ಮತ್ತು ಸುಣ್ಣದ ಗಾರೆಯಿಂದ ಕಟ್ಟಿದ ಪುಟ್ಟದಾದ ಒಂದು ಹಳೆಯ ಕಮಾನಿದೆ. ಮಸೀದಿಯ ಕಟ್ಟಡ ಹಾಗೂ ಅದರ ಸುತ್ತದ ಸಮತಟ್ಟು ಭೂಮಿಯ 10-15 ಸೆಂಟ್ಸ್ ಜಾಗದ ಸುತ್ತಲೂ ಇಂದಿಗೂ ಕಾಡು ಇದೆ. ಈ ಇಡೀ 67 ಸೆಂಟ್ಸ್ ಪ್ರದೇಶ ವಕ್ಫ್ ಬೋರ್ಡಿಗೆ ಸೇರಿದ್ದು, ಕಲ್ಮತ್ ಜಾಮಿಯಾ ಮಸೀದಿಗೆ ಪ್ರತಿ ವರ್ಷವೂ ಕರ್ನಾಟಕ ಸರಕಾರ 'ತಸ್‌ದೀಕ್' (ಅನುದಾನ) ನೀಡುತ್ತಿದೆ. ಉಡುಪಿಯ ಆಸುಪಾಸಿನಲ್ಲಿ ತಸ್‌ದೀಕ್ ಪಡೆಯುತ್ತಿರುವ ಏಕೈಕ ಮಸೀದಿ ಇದು. ಕೊಡವೂರಿನ ಜನ ಈ ಪ್ರದೇಶವನ್ನು 'ಪಳ್ಳಿಜೆಡ್ಡು'- ಮಸೀದಿ ಇರುವ ದಿಣ್ಣೆ - ಎಂದೇ ಗುರುತಿಸುವುದು. ಮಸೀದಿಯು ಊರಿನಲ್ಲಿ ಲಾಗಾಯ್ತಿನಿಂದ ಹಾಸು ಹೊಕ್ಕಾಗಿರುವುದನ್ನೇ ಸೂಚಿಸುತ್ತದೆ. ಆ ಇಡೀ ಮಸೀದಿಯ ವಾತಾವರಣದಲ್ಲಿ 'ಆಧುನಿಕ' ಎನ್ನಬಹುದಾದದ್ದು ಏನಾದರು ಇದ್ದರೆ ಅವು - ಇತ್ತೀಚೆಗೆ ತಲಾಬಿನಿಂದ ನೀರೆತ್ತಲು ಹಾಕಿರುವ ಪಂಪ್‌ಸೆಟ್ ಮತ್ತು ಕಳೆದ ಎರಡು ದಶಕಗಳಿಂದ ಮಸೀದಿಯ ಅಸ್ತಿತ್ವಕ್ಕೆ ಕಂಟಕವಾಗಿರುವ 'ಹಿಂದೂತ್ವ ರಾಜಕೀಯ'ಗಳು ಮಾತ್ರ.

ಈ ಮಸೀದಿಗೆ 2011ರ ಡಿಸೆಂಬರ್ 30ರ ಬೆಳಗ್ಗೆ ಗುಜರಾತಿನ 'ತಬ್ಲಿಗ್ ಜಾಮಾತ್'ನ ಒಂಬತ್ತು ಜನ ಬಂದಿಳಿದರು. ಮುಸಲ್ಮಾನರಿಗೆ ಪ್ರಾರ್ಥನೆ ಹಾಗು ಧಾರ್ಮಿಕ ಆಚರಣೆಗಳ ವಿಧಿವಿಧಾನಗಳನ್ನು ಬೋಧಿಸುತ್ತ ದೇಶ ಸುತ್ತುವುದು ಈ ಜಾಮಾತಿನವರ ಕಾಯಕ. ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳುವ ಈ ಜನ ಯಾವಾಗಲು ತಮ್ಮ ಜೊತೆ ಗ್ಯಾಸ್ ಸಿಲಿಂಡರ್ ಮತ್ತು ಒಲೆಯನ್ನು ಹೊತ್ತೇ ಸುತ್ತುತ್ತಾರೆ. ಅದೇ ಪರಿಕರಗಳೊಡನೆ ಅವರು ಕೊಡವೂರಿನ ಮಸೀದಿಯ ಜಗಲಿಯಲ್ಲಿ ತಂಗಿದ್ದರು. ಮಸೀದಿಗೆ ಯಾರೋ ಗಡ್ಡಧಾರಿ ಮುಸಲ್ಮಾನರು ಬಂದಿದ್ದಾರೆ ಎಂಬ ಸುದ್ದಿ ತಿಳಿದಾಕ್ಷಣ 'ಹಿಂದೂತ್ವ ಪಡೆ' ಅವರೂ 'ಟೆರ್ರರಿಸ್ಟರೇ ಸರಿ' ಎಂದು ನಿರ್ಧರಿಸಿ, ಒಂದು ಕೈನೋಡಿಕೊಳ್ಳುವ ಎಂದು ಸುಮಾರು 150 ಜನರ ಗುಂಪು ಮಸೀದಿಗೆ ನುಗ್ಗಿತ್ತು. ಆ ಗುಂಪಿನಲ್ಲಿ ಊರಿನ ಚೆಡ್ಡಿ ಪದಾತಿದಳದವರಲ್ಲದೇ ಉಡುಪಿಯ ದಂಡನಾಯಕರೂ ಇದ್ದರು ಎಂದು ಮಸೀದಿಯ ಇಮಾಮರು ನಮಗೆ ತಿಳಿಸಿದರು. ಗುಂಪಿನ ದೊಣ್ಣೆನಾಯಕರು ಗುಜರಾತಿನಿಂದ ಬಂದ ಆ ಒಂಬತ್ತು ಜನಕ್ಕೆ "ನಿಮ್ಮ ಐಡೆಂಟಿಕಾರ್ಡ್ ತೋರಿಸಿ" ಎಂದು ಪೀಡಿಸಿತು; "ಭಯೋತ್ಪಾದಕ ಕೃತ್ಯ ನಡೆಸಲು ಬಂದಿದ್ದೀರಾ" ಎಂದು ಅಟ್ಟಹಾಸಗೈದು ಅವರ ಸಾಮಾನು ಸರಂಜಾಮುಗಳನ್ನು ಕಿತ್ತು ತಡಕಾಡಿತು. ಇವರು ಅಂಥವರಲ್ಲ ಎಂದು ತಿಳಿಸಲು ಬಂದ ಮಸೀದಿಯ ಇಮಾಮರಿಗೆ "ನೀವು ಒಳಗೆ ಸೇರಿಕೊಂಡು ಏನೆಲ್ಲ ಸ್ಕೆಚ್ ಹಾಕುತ್ತೀರಿ ಎಂಬುದು ನಮಗೆ ಗೊತ್ತಿದೆ" ಎಂದು ಗದರಿತು; ಮಲ್ಪೆಯ ಪೊಲೀಸರನ್ನು ಕರೆಸಿ ಆ ಒಂಬತ್ತು ಜನ 'ಟೆರ್ರರಿಸ್ಟರನ್ನು' ಕೂಡಲೇ ಬಂಧಿಸಿ ಕೇಸು ಹಾಕಬೇಕೆಂದು ಆಜ್ಞೆ ನೀಡತೊಡಗಿತು.

ಅಂದು ಶುಕ್ರವಾರವಾದ್ದರಿಂದ ವಿಶೇಷ ನಮಾಜಿಗೆ ಜನ ಬರತೊಡಗಿದ್ದರು. ಗುಂಪು ಯಾರನ್ನೂ ಮಸೀದಿಯ ಒಳಗೆ ಬಿಡದೆ, ಪ್ರಾರ್ಥನೆ ನಡೆಸದಂತೆ ತಡೆಯಿತು. ಮಲ್ಪೆಯ ಪೊಲೀಸರು ಈ ಆಕ್ರಮಣಕಾರರ ಮೇಲೆ ಕ್ರಮ ಕೈಗೊಳ್ಳುವುದು ಬಿಟ್ಟು, ಇಮಾಮರಿಗೆ ತಕ್ಷಣವೇ ಮಸೀದಿ ಬಂದ್ ಮಾಡಿ ಜಾಗ ಖಾಲಿ ಮಾಡಿ ಇಲ್ಲದಿದ್ದರೆ ಅನಾಹುತವಾದೀತು ಎಂದು ಬೆದರಿಸಿ ಓಡಿಸುವುದರಲ್ಲಿ ನಿರತರಾಗಿದ್ದರು. ಹಾಗೆಯೇ ಉಡುಪಿಯ ಎಸ್.ಪಿ.ಗೆ 'ಟೆರ್ರರಿಸ್ಟರು ಬಂದಿದ್ದಾರೆ' ಎಂಬ ಸಂದೇಶ ರವಾನಿಸಿ ಕರ್ತವ್ಯ ಪಾಲನೆಗೈದರು! ಸರಿ ಹೊತ್ತಿಗೆ ಎಸ್.ಪಿ. ಮತ್ತು ಸುಪರ್ದಿನ ಸರ್ಕಲ್ ಇನ್ಸ್‌ಪೆಕ್ಟರ್ ಬರದೆ ಹೋಗಿದ್ದರೆ ಆ ಒಂಬತ್ತು ಜನರ ಪಾಡು ಏನಾಗುತ್ತಿತ್ತೋ ಊಹಿಸುವುದು ಕಷ್ಟ. ಈ ಇಬ್ಬರು ಹಿರಿಯ ಅಧಿಕಾರಿಗಳು ಗುಂಪಿನ ಒತ್ತಾಯಕ್ಕೆ ಮಣಿಯದೆ "ಈ ಜನ ಯಾವ ತಪ್ಪನ್ನೆಸಗಿಲ್ಲ, ಹಾಗಾಗಿ ಕಾನೂನುಕ್ರಮ ಜರುಗಿಸುವ ಅಗತ್ಯವಿಲ್ಲ" ಎಂದು ಹೇಳಿ ಆ ಒಂಬತ್ತು ಜನರನ್ನೂ ಸುರಕ್ಷಿತವಾಗಿ ಊರು ದಾಟಿಸಿದರು.

ಹಣ, ಅಧಿಕಾರ ಮತ್ತು ತೋಳ್ಬಲಗಳ ಮದದಲ್ಲಿ ಎಲ್ಲೆ ಇರದ ಹಿಂಸ್ರಾತಿರೇಕದಲ್ಲಿ ತೊಡಗಿರುವ ಹಿಂದೂತ್ವದ ದುಂಡಾವರ್ತಿ ಪಡೆ, ನ್ಯಾಯ ಪಾಲಿಸಿದ ಇಬ್ಬರು ಹಿರಿಯ ಅಧಿಕಾರಿಗಳಿಗೆ ಮಣಿಯಿತು ಎಂದು ಭಾವಿಸಬೇಡಿ. ಎಸ್.ಪಿ.ಯ ಮುಖಕ್ಕೆ "ಈ ಮಸೀದಿಯನ್ನು ಮುಚ್ಚಿಸಿ, ಇಲ್ಲದಿದ್ದರೇ ನಾವೇ ಮುಚ್ಚಿಸುತ್ತೇವೆ" ಎಂದು ಗುಂಪಿನಲ್ಲಿದ್ದ - ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಪಡೆದು ಕೊಬ್ಬಿರುವ - ಪುಢಾರಿಗಳು ಧಮಕಿ ಹಾಕಿದ್ದಾರೆ. ದಿನದ ಐದು ನಮಾಜಿನಲ್ಲಿ ಎರಡು ದಾಂಧಲೆಯಿಂದ ಕೈದಾಯಿತು; ಸಂಜೆಯಿಂದ ಪ್ರಾರ್ಥನೆ ಮಾಡಲು ವ್ಯವಸ್ಥೆ ಮಾಡಿ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಮಲ್ಪೆ ಪೊಲೀಸರಿಗೆ ತಿಳಿಸಿಹೋಗಿದ್ದರೂ, ಮಲ್ಪೆಯ ಎಸ್.ಐ. ಮಸೀದಿಯ ಜಮಾತ್ ಆಡಳಿತ ಮಂಡಳಿಯವರಿಗೆ ಫೋನು ಮಾಡಿ, ಪ್ರಾರ್ಥನೆ ಶುರುವಿಟ್ಟುಕೊಂಡರೆ ಗಲಾಟೆಯಾಗಬಹುದು, ಒಂದಷ್ಟು ದಿನ ಮಸೀದಿ ಬಂದ್ ಮಾಡಿ ಎಂದು ಹಿತವಂತ ಸಲಹೆ ಕೊಟ್ಟರಂತೆ! ಮಲ್ಪೆ ಪೊಲೀಸರು ಇದುವರೆವಿಗೂ ಹಾಡುಹಗಲೇ ದುಂಡಾವರ್ತಿ ನಡೆಸಿದವರ ಮೈಮೇಲಿನ ಒಂದು ಹೇನನ್ನೂ ಬಂಧಿಸಿ ಕಾನೂನುಕ್ರಮ ಜರುಗಿಸಿಲ್ಲ - ಹಾಗಿದೆ ಇಲ್ಲಿ ಕಾನೂನಿನ ಕಣ್ಣಿಗೆ ಬಡಿದಿರುವ ಕೇಸರಿ ಕಾಮಾಲೆ.

1990ರ ದಶಕದಲ್ಲಿ ಕರಾವಳಿಯಲ್ಲಿ ಹಿಂದೂತ್ವ ರಾಜಕೀಯ ಬೇರುಬಿಟ್ಟಂದಿನಿಂದಲೇ ಕಲ್ಮತ್ತ್ ಜಮಾತ್ ಮಸೀದಿಯು ಹಿಂದೂತ್ವವಾದಿಗಳ ಮತೀಯ ರಾಜಕೀಯಕ್ಕೆ ಗುರಿಯಾಯಿತು. ಕೊಡವೂರಿನ ಕೋಮುಸಾಮರಸ್ಯವನ್ನು ಮುರಿಯಲು ಉತ್ಸುಕವಾದ ಹಿಂದೂತ್ವದ ಮಂದಿ ಪುರಾತನ ಮಸೀದಿಯ ಅಸ್ತಿತ್ವ ಅಕ್ರಮವಾದುದ್ದೆಂಬ ನೆಪವೊಡ್ಡಿ 1997ರಲ್ಲಿ ಉಡುಪಿ ಜಿಲ್ಲಾ ಸೆಷನ್ಸ್ ಕೋರ್ಟ್-1ರಲ್ಲಿ ವ್ಯಾಜ್ಯ ಹೂಡಿದರು. ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದ್ದಾಗಲೇ ಚೆಡ್ಡಿ ಪಡೆ ಮಸೀದಿಯಲ್ಲಿ ಧಾರ್ಮಿಕವಿಧಿಗಳ ಆಚರಣೆಗಳು ನೆರವೇರದಂತೆ ತಡೆಯೊಡ್ಡಲು ಮಸೀದಿಯ ಇಮಾಮರಿಗೂ ಹಾಗು ಪ್ರಾರ್ಥನೆಗೆ ಬರುವ ಮುಸ್ಲಿಮ್ ಸಮುದಾಯದವರಿಗೂ ಅನೇಕ ಬಗೆಯ ಕಿರುಕುಳಗಳನ್ನು ಕೊಡಲು ಶುರುಮಾಡಿತು. ಆದರೆ ಮುಸ್ಲಿಮ್ ಸಮುದಾಯದವರು ಅತ್ಯಂತ ಸಂಯಮದಿಂದ, ಅಗತ್ಯವಿದ್ದಾಗ ಕಾನೂನುಪಾಲಕರಿಗೆ ಮನವಿ ಮಾಡಿಕೊಳ್ಳುವ ಮೂಲಕ ನ್ಯಾಯಬದ್ಧವಾಗಿ ನಡೆದುಕೊಂಡು ಬಂದಿದ್ದಾರೆ. ಜಿಲ್ಲಾ ಸೆಷನ್ಸ್ ನ್ಯಾಯಾಲಯವು 2009ರಲ್ಲಿ ಮಸೀದಿ ಹಾಗು ಅದರ ಸುತ್ತಲಿನ 15 ಸೆಂಟ್ಸ್ ಜಾಗ ಮಸೀದಿಗೆ ಸೇರಿದ್ದೆಂಬ ಸೀಮಿತ ಡಿಕ್ರಿಯನ್ನು ನೀಡಿತು. ಈ ಡಿಕ್ರಿಯನ್ನೇ ನಂಬಿಕೊಂಡರೆ, ಮಸೀದಿಗೆ ಬರಲು ಜನ ಉಪಯೋಗಿಸುವ ಕಾಲುದಾರಿಯ ಹಕ್ಕು ಕೈದಾಗುತ್ತದೆ. ಹೀಗಾಗಿ, ಲಾಗಾಯ್ತಿನಿಂದಲೂ ಮಸೀದಿಗೆ ಬಂದು ಹೋಗುವವರು ಬಳಸುತ್ತಿದ್ದ ಜಾಗದ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲದ ಕಾರಣವಾಗಿ ಸಂತ್ರಸ್ತರು ಜಿಲ್ಲಾ ಸೆಷನ್ಸ್ ಕೋರ್ಟ್-2ರಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಸದರಿ ಮೇಲ್ಮನವಿಯನ್ನು ಪುರಸ್ಕರಿಸಿರುವ ನ್ಯಾಯಾಲಯವು, ವಿಚಾರಣೆ ಪ್ರಕ್ರಿಯೆ ಮುಗಿದು ಅಂತಿಮ ತೀರ್ಪು ನೀಡುವವರೆಗೂ 1997ರ ಪೂರ್ವದ ಲಾಗಾಯ್ತಿನ ಯಥಾಸ್ಥಿತಿಯನ್ನು ಕಾಪಾಡಬೇಕು ಎಂಬ ಆದೇಶವನ್ನಿತ್ತಿದೆ.

ಆ ಆದೇಶದನ್ವಯವೇ ಮುಸ್ಲಿಮ್ ಸಮುದಾಯವು ಜಾಗದ ಹಕ್ಕಿನ ಅನುಭವವನ್ನು ಮುಂದುವರೆಸಿಕೊಂಡು ಬಂದಿದೆ. ದೇಶದ ಕಾನೂನು-ನ್ಯಾಯ ವ್ಯವಸ್ಥೆ ತನ್ನ ಅನುಕೂಲಕ್ಕಿದ್ದರೆ ಕತ್ತಿಯ ಹಾಗೆ ಝಳಪಿಸುವ, ತನಗೆ ವ್ಯತಿರಿಕ್ತವಾಗಿದ್ದರೆ ಅದರ ವಿರುದ್ಧ ಜನರ ಕೋಮುಭಾವನೆಗಳನ್ನು ಉದ್ರೇಕಿಸುವ ಕಾರ್ಯಾಚರಣೆ ನಡೆಸುವುದು- ಹಿಂದೂತ್ವವಾದಿಗಳು ಪೇಟೆಂಟ್ ಮಾಡಿಕೊಂಡಿರುವ ರಾಜಕೀಯ ವರಸೆ. ಕೊಡವೂರು ಪ್ರಸಂಗದಲ್ಲೂ ಅದು ಪುನರಾವರ್ತನೆಯಾಗಿದೆ. ಕೋರ್ಟಿನ ಆದೇಶ ತಮ್ಮ ಉದ್ದೇಶಕ್ಕೆ ವಿರುದ್ಧವಾಗಿ ಬಂದದ್ದೇ 'ಯಥಾಸ್ಥಿತಿ'ಯನ್ನು ಮುರಿಯುವ ಸಕಲ ಕಾರ್ಯಗಳಲ್ಲೂ ಹಿಂದೂತ್ವವಾದಿಗಳು ತೊಡಗಿದರು. ಮಸೀದಿಗೆ ಯಾವ ಕಡೆಯಿಂದಲೂ ಪ್ರವೇಶ ದಾರಿ ಇರದ ಹಾಗೆ ಸುತ್ತ ತಂತಿ ಬೇಲಿ ಹಾಕಿಸಿದರು. ಲಾಗಾಯ್ತಿನಿಂದ ಉಪಯೋಗಿಸುತ್ತಿದ್ದ ಕಾಲುದಾರಿ ಮುಖ್ಯ ರಸ್ತೆಯಿಂದ ಕವಲೊಡೆಯುವಲ್ಲಿ ಕಾಂಪೌಂಡು ಕಟ್ಟಿ, ಒಂದು ಗೇಟು ಹಾಕಿ, ಗೇಟಿನ ನೇರದ ಆಯಾತಾಕಾರದ ಜಾಗವನ್ನು ಕಬ್ಜ ಮಾಡಿಕೊಂಡರು. ಅಲ್ಲಿ 'ಪಂಚಧೂಮಾವತಿ ದೇವಸ್ಥಾನ'ವೆಂಬ ಕಲ್ಲು-ಉಕ್ಕಿನ ಕಟ್ಟಡ ನೆಟ್ಟರು.


'ಜುಮಾದಿ' ಎಂಬುದು ಕರಾವಳಿಯ ದಲಿತರು ಸೇರಿದ ಹಾಗೆ ಹಿಂದುಳಿದ ಜಾತಿಗಳವರು ನಂಬುವ ಭೂತ ದೈವ. ಕರಾವಳಿಯಲ್ಲಿ ನೂರಾರು ಜುಮಾದಿ ಭೂತಸ್ಥಾನಗಳಿವೆ. ಹಿಂದೂತ್ವ ರಾಜಕೀಯದ ಫಲವಾಗಿ ಜನಪದೀಯ ಭೂತಸ್ಥಾನಗಳು, ದೈವಾಚರಣೆಗಳು ವೈದಿಕ ರೂಪ ಧರಿಸಿಬಿಟ್ಟಿವೆ; 'ಜುಮಾದಿ' 'ಧೂಮವತಿ'ಯಾಗಿ ರೂಪಾಂತರ ಪಡೆದಿದೆ. ಮುಸ್ಲಿಮರ ವಿರುದ್ಧ ಹಿಂದುಳಿದ ಜಾತಿಯ ಜನರನ್ನು ಎತ್ತಿಕಟ್ಟುವ ಮನೆಮುರುಕ ರಾಜಕೀಯ ಕಾರ್ಯಾಚರಣೆ ಕರಾವಳಿಯಲ್ಲಂತೂ ಹಿಂದೂತ್ವಕ್ಕೆ 'ಬಂಪರ್ ಕ್ರಾಪ್' ಬೆಳೆದುಕೊಟ್ಟಿದೆ. ಕೊಡವೂರಿನ ಚೆಡ್ಡಿಗಳು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಮಸೀದಿಯ ಆವರಣದಲ್ಲಿ ಭೂತಸ್ಥಾನವನ್ನು ನೆಟ್ಟು, ಇಡೀ ಆವರಣಕ್ಕೆ 'ಜುಮಾದಿನಗರ' ಎಂದು ನಾಮಕರಣ ಮಾಡಿದ್ದಾರೆ. ಮುಖ್ಯರಸ್ತೆಯ ಬದಿಯ ಗೇಟಿನ ಮೇಲೆ 'ಪಂಚಧೂಮವತಿ ದೇವಸ್ಥಾನ, ಜುಮಾದಿ ನಗರ'ವೆಂಬ ಬೋರ್ಡ್, ಕೋರ್ಟಿನ 'ಯಥಾಸ್ಥಿ'ತಿಯ ಆಜ್ಞೆಗೆ ಸೆಡ್ಡುಹೊಡ್ಡೆಯುವಂತೆ ರಾರಾಜಿಸುತ್ತಿದೆ. ಈ ದೇವಸ್ಥಾನಕ್ಕೆ ಒಂದು ಅಧಿಕೃತ ಆಡಳಿತಮಂಡಳಿಯನ್ನೂ ಸಂಘಟಿಸಿಕೊಂಡಿದ್ದು ಅದರಲ್ಲಿ ಬಿ.ಜೆ.ಪಿ.ಯ ಲೋಕಲ್ ಪುಢಾರಿಗಳು, ಚೆಡ್ಡಿ ಪದಾತಿ ಗೂಂಡಾಪಡೆಯ ಲೆಫ್ಟಿನೆಂಟುಗಳೂ ವಿರಾಜಮಾನರಾಗಿದ್ದರೆ. ವರ್ಷಕ್ಕೊಮ್ಮೆ ಈ ಆಡಳಿತ ಮಂಡಳಿಯ ಕಲಾಪಗಳ ವರದಿಯನ್ನು ಪದಾಧಿಕಾರಿಗಳ ಫೋಟೊ ಸಮೇತವಾಗಿ ಖ್ಯಾತ ದಿನಪತ್ರಿಕೆಗಳ ಸ್ಥಳೀಯ ಆವೃತ್ತಿಗಳು ಪ್ರಕಟಿಸುತ್ತವೆ. ಆದರೆ 'ಯಥಾಸ್ಥಿತಿ' ಆಜ್ಞೆಯ ಉಲ್ಲಂಘನೆಗಾಗಿ ಯಾರೂ ಕಾನೂನುಕ್ರಮಕ್ಕೆ ಒಳಗಾಗಿಲ್ಲವೇ ಎಂದು ಕೇಳುತ್ತೀರ? ಭಲೇ ತಮಾಷೆ ಜನವಪ್ಪ ನೀವು!




ಇಷ್ಟಿದ್ದೂ ಮುಸ್ಲಿಮ್ ಸಮುದಾಯವು ಸಂಯಮವನ್ನು ಕಾಪಾಡಿಕೊಂಡು ಬಂದಿದೆ. ಈ ಬಗೆಯ ಕಾನೂನು ಉಲ್ಲಂಘನೆಯ ಬಗ್ಗೆ ಮುಸ್ಲಿಮ್ ಜಮಾತ್ ಮುಖಂಡರು ಉಡುಪಿಯ ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಮುಂದೆ ಹತ್ತಾರು ಬಾರಿ ಅಲವತ್ತುಕೊಂಡಿದ್ದಾರೆ. ಈ ಇಬ್ಬರೂ ಅತ್ತ ಚೂಟಿ ಇತ್ತ ಸಮಾಧಾನಪಡಿಸುವ ಕಲೆಯಲ್ಲಿ ಪ್ರವೀಣರು. ಈ ನೈಪುಣ್ಯತೆಯಿಂದಲೇ ಒಂದೂವರೆ ದಶಕದಿಂದ ಈ ಮುತ್ಸದ್ದಿದ್ವಯರು ಮುಸ್ಲಿಮ್ ಮುಖಂಡರ ಮೂಗಿಗೆ ತುಪ್ಪ ಸವರುತ್ತ ಬಂದಿದ್ದಾರೆ. ಮುಖಂಡರಿಗೆ ಇದು ಅರ್ಥವಾಗುತ್ತಿಲ್ಲವೇ? ಈ ವರಸೆಯ ವಾಚ್ಯ-ಧ್ವನಿ ಎರಡನ್ನು ಸಮುದಾಯ ಬಲ್ಲದು; ಆದರೆ ಏನು ಮಾಡಬಹುದು? ಕೈ ಎತ್ತುವುದಿರಲಿ ಗಂಟಲೆತ್ತಿದರೂ, ಹಿಂದೂತ್ವಪಡೆ ಯಾವುದಕ್ಕೂ ಹೇಸದ ಹಿಂಸೆಗೆ ಬದ್ಧ, ಮಲ್ಪೆಯ ಪೊಲೀಸರು ಕಾನೂನುಪಾಲನೆಗೆ ಸಿದ್ಧ! ನೋಡಿದಿರಲ್ಲ ಬರಿ ಗ್ಯಾಸ್ ಸಿಲಿಂಡರಿನ ವಾಸನೆ ಹಿಡಿದು ಇವರು 'ಟೆರ್ರರಿಸ್ಟರ'ನ್ನು ಪತ್ತೆ ಮಾಡಿದ ಸಾಹಸ! ಮುಸಲ್ಮಾನರು ತಾಳ್ಮೆಗೆಡುವುದನ್ನೇ ಇವರು ಕಾಯುತ್ತಿರುವಂತಿದೆ.

2011ರ ಡಿಸೆಂಬರ್ 31ರಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಎಸ್.ಪಿ.ಯವರಿಗೆ ಪ್ರತಿಭಟನಾ ಮನವಿ ಸಲ್ಲಿಸುವಾಗ ನೆರೆದಿದ್ದ ಕೊಡವೂರಿನ ನೂರಾರು ಮುಸಲ್ಮಾನರು ಎಸ್.ಪಿ.ಯವರನ್ನು ಕೇಳಿದ್ದು ಒಂದೇ ಸರಳ ಪ್ರಶ್ನೆ: "ಈಗ ನಾವೇನು ಮಾಡಬೇಕು ಹೇಳಿ?" ಹಿಂದಿನ ದಿನ ತಾವೇ ಮಲ್ಪೆ ಠಾಣೆಯ ಕ್ರಿಯಾಶೀಲತೆ ಮತ್ತು ಹಿಂದೂತ್ವದ ಆಟಾಟೋಪ ಕಂಡಿದ್ದ ಎಸ್.ಪಿ.ಯವರ ಬಾಯಿ ಕಟ್ಟಿತ್ತು. ದನ ಸಾಗಾಟ ಮಾಡುವವರ ಮೇಲೆ ಹಿಂದೂತ್ವಪಡೆ ದಾಳಿ ಮಾಡುವುದು ಕಾನೂನುಬಾಹಿರ, ಹಾಗೆ ಆಕ್ರಮಣ ಮಾಡಿದವರನ್ನು ಬಂಧಿಸಿ ಕಾನೂನುಕ್ರಮ ಜರುಗಿಸುವಂತೆ ಆದೇಶ ನೀಡಿದ್ದೇನೆ ಎಂದು ಎಸ್.ಪಿ. ಅವರು ವೇದಿಕೆಯ ಹತ್ತಾರು ಮನವಿ ಸಲ್ಲಿಕೆಯ ವೇಳೆ ಹೇಳಿದ್ದಾರೆ. ಆರೋಪಿಗಳನ್ನು ಸಂಬಂಧಿತ ಠಾಣೆಯವರು ಹುಡುಕುತ್ತಿದ್ದಾರೆ ಎಂದೂ ಅಪಡೇಟ್ ಕೊಡುತ್ತಾರೆ. ಆದರೆ ಸಂಬಂಧಿತ ಠಾಣೆಯವರ ಪ್ರಕಾರ ಆರೋಪಿಗಳು ಠಾಣೆಯಾಗಿರುತ್ತಾರೆ! ಆ ಆರೋಪಿ ಗಳನ್ನು 'ಹಿಂದೂ ಸಮಾಜೋತ್ಸವ'ದ ಸಮಾರಂಭದಲ್ಲಿ 'ಗೋರಕ್ಷಕರು' ಎಂದು ಬಹಿರಂಗವಾಗಿ ಸನ್ಮಾನಿಸಲಾಗುತ್ತದೆ! ಇಂಥ ಓರಿಜಿನಲ್ ಕಾಮಿಡಿ ಟ್ರ್ಯಾಕ್ ತಮಿಳು ಸಿನಿಮಾಗಳಲ್ಲೂ ನಿಮಗೆ ಸಿಗದು.

ರಿಲಯನ್ಸ್ ಎಂಬ ಲೂಟಿಕೋರರ ಸಾಮ್ರಾಜ್ಯ



ಭಾಗ 1



ಅಂಬಾನಿ ಅಂಡ್ ಸನ್ಸ್ ಮಾಡಿರುವ ಎಲ್ಲಾ ಸಾಧನೆಗಳನ್ನು ಹೇಳುತ್ತಾ ಹೋದರೆ ಅದು ದೊಡ್ಡ ಗ್ರಂಥವೇ ಆಗುತ್ತದೆ. ಪತ್ರಿಕೆಯ ಮಿತಿಯಲ್ಲಿ ಕೆಲವೇ ಅಂಶಗಳನ್ನು ಮಾತ್ರ ಹೇಳಲು ಸಾಧ್ಯ. ಪುಡಿಗಾಸಿನಿಂದ ಪ್ರಾರಂಭವಾದ ಕಂಪನಿಯೊಂದು 4-5 ದಶಕಗಳಲ್ಲಿ ಲಕ್ಷಾಂತರ ಕೋಟಿಗಳನ್ನು ಬಾಚಿಕೊಂಡು ದೇಶದ ನಂ.1 ಕಂಪನಿಯಾಗಿ ಬೆಳೆದದ್ದು ಭಾರೀ ಪವಾಡವೇ ಸರಿ. ಈ ಪವಾಡದ ಇತಿಹಾಸವನ್ನು ಕೆದಕುತ್ತಾ ಹೋದರೆ ಇಂಥ ಭಾರೀ ಪವಾಡ ಒಮ್ಮೆಲೆ ದಿಢೀರ್ ಸಂಭವಿಸಿದ್ದಲ್ಲ. ಬದಲಿಗೆ ಕಂಪನಿಯ 'ಸಾಧನೆಯ ಹಾದಿ'ಯಲ್ಲಿ ಹಲವು ಪವಾಡಗಳ ಸರಮಾಲೆಯೇ ಇರುವುದು ಬೆಳಕಿಗೆ ಬರುತ್ತದೆ. ಅಂಥಾ ಕೆಲವು ಪವಾಡಗಳನ್ನು ನಾಡಿನ ಜನತೆಗೆ ಪರಿಚಯಿಸುವುದೇ ಈ ಲೇಖನದ ಉದ್ದೇಶ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಭಾರತದಲ್ಲಿ 'ರಿಲಯನ್ಸ್' ಎಂಬ ಶಬ್ದ 'ಮಹತ್ತರ ಸಾಧನೆ'ಯ ಸಂಕೇತವಾಗಿದೆ. ಉದ್ಯಮಶೀಲ ವ್ಯಕ್ತಿಗಳು ರಿಲಯನ್ಸ್ ಕಂಪನಿಯನ್ನು ಆದರ್ಶಪ್ರಾಯವೆಂದು ಭಾವಿಸುವುದುಂಟು. ಪ್ರಜಾಪ್ರಭುತ್ವದಲ್ಲಿ ನಾವು ಏನು ಬೇಕಾದರೂ ಸಾಧಿಸಬಹುದೆಂಬುದನ್ನು ರುಜುವಾತು ಮಾಡಲು ಹಲವು ಬುದ್ಧಿವಂತರು ರಿಲಯನ್ಸ್‌ನ ಮೇಲೆ ಸಾಕಷ್ಟು ಪ್ರಬಂಧಗಳನ್ನು ರಚಿಸಿದ್ದಾರೆ. ಊಟದ ಡಬ್ಬಿ ಕೈಯಲ್ಲಿಡಿದು ಬಿಎಂಟಿಸಿ ಬಸ್ಸುಗಳಲ್ಲಿ ಪ್ರಯಾಣಿಸುತ್ತಿರುವ ಬಡಪಾಯಿ ಕಾರ್ಮಿಕರು ಸಹ ರಿಲಯನ್ಸ್ ಮಹಿಮೆಯನ್ನು ಹಾದಿ ಹೊಗಳುವುದನ್ನು ನೀವು ಕೇಳಿರುತ್ತೀರಿ. ಇದು ನಮ್ಮ ಮಾಧ್ಯಮಗಳು ಮಾಡಿರುವ ಮೋಡಿಯ ಪರಿಣಾಮ.


ಪುಡಿಗಾಸಿನಿಂದ ಪ್ರಾರಂಭವಾದ ಕಂಪನಿಯೊಂದು 4-5 ದಶಕಗಳಲ್ಲಿ ಲಕ್ಷಾಂತರ ಕೋಟಿಗಳನ್ನು ಬಾಚಿಕೊಂಡು ದೇಶದ ನಂ.1 ಕಂಪನಿಯಾಗಿ ಬೆಳೆದದ್ದು ಭಾರೀ ಪವಾಡವೇ ಸರಿ. ಈ ಪವಾಡದ ಇತಿಹಾಸವನ್ನು ಕೆದಕುತ್ತಾ ಹೋದರೆ ಇಂಥ ಭಾರೀ ಪವಾಡ ಒಮ್ಮೆಲೆ ದಿಢೀರ್ ಸಂಭವಿಸಿದ್ದಲ್ಲ. ಬದಲಿಗೆ ಕಂಪನಿಯ 'ಸಾಧನೆಯ ಹಾದಿ'ಯಲ್ಲಿ ಹಲವು ಪವಾಡಗಳ ಸರಮಾಲೆಯೇ ಇರುವುದು ಬೆಳಕಿಗೆ ಬರುತ್ತದೆ. ಅಂಥಾ ಕೆಲವು ಪವಾಡಗಳನ್ನು ನಾಡಿನ ಜನತೆಗೆ ಪರಿಚಯಿಸುವುದೇ ಈ ಲೇಖನದ ಉದ್ದೇಶ.

ಅಂಬಾನಿ ಅಂಡ್ ಸನ್ಸ್ ಮಾಡಿರುವ ಎಲ್ಲಾ ಸಾಧನೆಗಳನ್ನು ಹೇಳುತ್ತಾ ಹೋದರೆ ಅದು ದೊಡ್ಡ ಗ್ರಂಥವೇ ಆಗುತ್ತದೆ. ಪತ್ರಿಕೆಯ ಮಿತಿಯಲ್ಲಿ ಕೆಲವೇ ಅಂಶಗಳನ್ನು ಮಾತ್ರ ಹೇಳಲು ಸಾಧ್ಯ.

2ಜಿ ಹಗರಣದಲ್ಲಿ ಸಾವಿರಾರು ಕೋಟಿ ಲೂಟಿ

ಇಡೀ ದೇಶದ ರಾಜಕೀಯದಲ್ಲಿ ಭಾರೀ ಬಿರುಗಾಳಿಯನ್ನೇ ಎಬ್ಬಿಸಿದ 2ಜಿ ಹಗರಣ ಎಲ್ಲರಿಗೂ ಗೊತ್ತು. ಅದರ ಪರಿಣಾಮವಾಗಿ ಕೇಂದ್ರದ ದೂರಸಂಪರ್ಕ ಖಾತೆ ಸಚಿವ ಎ.ರಾಜಾ ಜೈಲು ಸೇರಿ ಇನ್ನೇನು ವರ್ಷ ತುಂಬಲಿದೆ. ಕನಿಮೋಳಿ ಈಗತಾನೇ ಬಿಡುಗಡೆಗೊಂಡು ನಿಟ್ಟುಸಿರು ಬಿಡುತ್ತಿದ್ದಾಳೆ. ಆದರೆ ರಿಲಯನ್ಸ್ ಕಂಪನಿಯ ಮೂರು ಜನ ಅಧಿಕಾರಿಗಳು ಇದೇ ವಿಷಯದಲ್ಲಿ ಸುಮಾರು 6 ತಿಂಗಳು ಜೈಲುವಾಸ ಅನುಭವಿಸಿದ್ದು ಸಾರ್ವಜನಿಕರ ಗಮನಕ್ಕೆ ಬರದಂತೆ ನೋಡಿಕೊಳ್ಳಲಾಗಿದೆ. ಆ ವಿಷಯದಲ್ಲಿ ನಮ್ಮ ಮಾಧ್ಯಮಗಳ ನಿಷ್ಠೆಯನ್ನು ಯಾರೂ ಪ್ರಶ್ನಿಸುವಂತಿಲ್ಲ.

2ಜಿ ಹಗರಣದಲ್ಲಿ ಸರ್ಕಾರದ ಬೊಕ್ಕಸಕ್ಕೆ 30,985 ಕೋಟಿಗಳ ನಷ್ಟ ಉಂಟುಮಾಡಿದ ಆರೋಪ ಹೊರಿಸಿ ರಿಲಯನ್ಸ್ ಟೆಲಿಕಾಮ್, ಸ್ವಾನ್ ಟೆಲಿಕಾಮ್ ಮತ್ತು ಯೂನಿಟೆಕ್ ಎಂಬ ಮೂರು ಕಂಪನಿಗಳ ಮೇಲೆ ಅನಿವಾರ್ಯವಾಗಿ ಸಿಬಿಐ ಕೋರ್ಟಿಗೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಅದರಲ್ಲಿ ಸಿಬಿಐ ಒಂಬತ್ತು ಮಂದಿ ಆರೋಪಿತರನ್ನು ಹೆಸರಿಸಲಾಗಿದೆ. ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ (RADAG)ನ ಎಂಡಿ ಗೌತಮ್ ದೋಷಿ, ಸೀನಿಯರ್ ವೈಸ್ ಪ್ರೆಸಿಡೆಂಟ್‌ಗಳಾದ ಹರಿ ನಾಯರ್ ಮತ್ತು ಸುರೇಂದ್ರ ಪಿಪಾರ ಎಂಬ ಮೂರು ಮಂದಿಯ ಹೆಸರೂ ಇದೆ. ಅಷ್ಟು ಮಾತ್ರವಲ್ಲದೆ ಸ್ವಾನ್ ಕಂಪನಿ ಕೂಡ ಅನಿಲ್ ಅಂಬಾನಿಯೇ ಹುಟ್ಟುಹಾಕಿದ ಮತ್ತೊಂದು ಪ್ರಾಕ್ಸಿ ಕಂಪನಿಯೇ ಆಗಿದ್ದು ಅದರ ಇಬ್ಬರು ಪದಾಧಿಕಾರಿಗಳೂ ಸೇರಿದ್ದಾರೆ.




ಬಂಗಲೆಯ ಒಳನೋಟ



ಈಗ ಲಭ್ಯವಿರುವ ಮಾಹಿತಿ ಪ್ರಕಾರ 2ಜಿ ಹಗರಣದ ಪ್ರಮುಖ ರೂವಾರಿಗಳು ವಾಸ್ತವದಲ್ಲಿ ಎ.ರಾಜಾ ಮತ್ತು ಅನಿಲ್ ಅಂಬಾನಿ ಮಾತ್ರ. (ಟಾಟಾ ಕಂಪನಿಯ ಮೇಲೆ ಕೂಡ ಆರೋಪ ಬಂದಿತ್ತಾದರೂ ಸರಿಯಾದ ಸಾಕ್ಷ್ಯಾಧಾರಗಳಿಲ್ಲದ್ದರಿಂದ ಅವರನ್ನು ಕೈಬಿಡಲಾಗಿದೆ). ತನ್ನ ರಿಲಯನ್ಸ್ ಕಂಪನಿ ಜೊತೆಗೆ ಸ್ವಾನ್ ಎಂಬ ಮತ್ತೊಂದು ಖೊಟ್ಟಿ ಕಂಪನಿಯನ್ನು ಅನಿಲ್‌ಅಂಬಾನಿ ಹುಟ್ಟುಹಾಕಿದ. ಕೇವಲ ಕಮಿಷನ್ ಹಣದಿಂದ ಹೆಚ್ಚೇನೂ ಫಾಯಿದಾ ಇಲ್ಲವೆಂಬುದನ್ನು ಮನಗಂಡ ಎ. ರಾಜಾ ಸಹ ತನ್ನ ಬಂಧುಬಾಂಧವರ ಮೂಲಕ ಯೂನಿಟೆಕ್ ಎಂಬ ಖೊಟ್ಟಿ ಸಂಸ್ಥೆಯನ್ನು ಹುಟ್ಟುಹಾಕಿದ. ಹೀಗೆ ಈ ಮೂರೂ ಕಂಪನಿಗಳ ಹೆಸರಿನಲ್ಲಿ 2ಜಿ ತಂತ್ರಜ್ಞಾನದ ಲೈಸೆನ್ಸ್ ಮುಂಜೂರು ಮಾಡಲಾಗಿತ್ತು. ರಿಲಯನ್ಸ್ ಬಿಟ್ಟರೆ ಉಳಿದ ಎರಡು ಖೊಟ್ಟಿ ಕಂಪನಿಗಳಿಗೆ ಅಂಥಾ ಲೈಸೆನ್ಸ್ ಪಡೆಯುವ ಯಾವುದೇ ಅರ್ಹತೆಗಳಿರಲಿಲ್ಲ. ಸಿಬಿಐ ಚಾರ್ಜ್‌ಶೀಟಿನಲ್ಲಿರುವ ಆರೋಪಗಳಾದರೂ ಎಂತಹವು? ಕ್ರಿಮಿನಲ್ ಸಂಚು, ಫೋರ್ಜರಿ, ವಂಚನೆ ಇತ್ಯಾದಿ ಇತ್ಯಾದಿ.

ಹೀಗೆ ವಾಮಮಾರ್ಗಗಳಿಂದ ಪಡೆದುಕೊಂಡ 2 ಜಿ ಲೈಸೆನ್ಸ್‌ನಿಂದ ಸಾವಿರಾರು ಕೋಟಿಗಳನ್ನು ಲೂಟಿ ಮಾಡಿದ್ದಾನೆ. ಯಾವುದೇ ಪರಿಶ್ರಮವಿಲ್ಲದೆ ಸಾವಿರಾರು ಕೋಟಿಗಳನ್ನು ಹೀಗೆ ದೋಚುತ್ತಾ ಹೋದರೆ ದೇಶದ ನಂ.1 ಕಂಪನಿಯಾಗುವುದು ದೊಡ್ಡ ವಿಷಯವೇನಲ್ಲ ಬಿಡಿ.. ವಾಸ್ತವದಲ್ಲಿ ಸಿಬಿಐ ಆರೋಪಪಟ್ಟಿಯಲ್ಲಿ ಅಂದಾಜು ಮಾಡಿರುವಂತೆ ಸರ್ಕಾರದ ಬೊಕ್ಕಸಕ್ಕೆ ಪಂಗನಾಮ ಎಳೆದ 30,985 ಕೋಟಿಗಳಲ್ಲಿನ ಸಿಂಹಪಾಲು ಅನಿಲ್ ಅಂಬಾನಿಗೆ ಸೇರಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಹಾಗಾಗಿ ಈತನೇ ಈ ಹಗರಣದ ಟಾಪ್ ಒನ್ ಫಲಾನುಭವಿ.

ಅಪ್ಪಿತಪ್ಪಿಯಾದರೂ ಅನಿಲ್ ಅಂಬಾನಿಯ ಹೆಸರು



ಧೀರೂಬಾಯಿ ಮರೆಮಾಚಲ್ಪಟ್ಟ ಮತ್ತೊಂದು ಮುಖ

ರಿಲಯನ್ಸ್ ಸಂಸ್ಥಾಪಕರಾದ ಗೌರವಾನ್ವಿತ ಧೀರೂಬಾಯಿ ಅಂಬಾನಿಯವರು ತಮ್ಮ ಕಠಿಣ ಶ್ರಮ, ಶಿಸ್ತು, ಕರಾರುವಾಕ್ಕಾದ ಅದ್ಭುತ ಯೋಜನೆ ಹಾಗೂ ಅನುಷ್ಠಾನಗಳಿಗೆ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನಾದ್ಯಂತ ಭಾರೀ ಪ್ರಖ್ಯಾತಿ ಗಳಿಸಿದ್ದಾರೆ. ಅವರಿಗೆ ಸಿಕ್ಕ ಪ್ರಶಸ್ತಿ-ಪುರಸ್ಕಾರ-ಗೌರವಗಳಿಗೆ ಲೆಕ್ಕವೇ ಇಲ್ಲ. ಆದರೆ ಅವರಿಗೆ ಇನ್ನೊಂದು ಮುಖವೂ ಇದೆ. ಆ ಕಠೋರ ಸತ್ಯವನ್ನು ಇದುವರೆಗೂ ಬಹಳ ವ್ಯವಸ್ಥಿತವಾಗಿ ಮರೆಮಾಚಲಾಗಿದೆ.

ಅವರ ಪೂರ್ಣ ಹೆಸರು ಧೀರಜ್‌ಲಾಲ್ ಹೀರಾಚಂದ್ ಅಂಬಾನಿ. ಬನಿಯಾ ಜಾತಿಗೆ ಸೇರಿದವರು. ತಂದೆ ಒಬ್ಬ ಸಾಮಾನ್ಯ ಶಾಲಾಮಾಸ್ತರು. ಹುಟ್ಟಿದ್ದು 1932 ರಲ್ಲಿ, ಗುಜರಾತಿನ ಚೋರ್‌ವಾಡ ಎಂಬ ಊರಿನಲ್ಲಿ. 'ಚೋರ್‌ವಾಡ' ಎಂದರೆ ಕನ್ನಡದಲ್ಲಿ 'ಕಳ್ಳರ ಕೇರಿ' ಎಂಬ ಅರ್ಥವಿದೆಯೆಂದು ಕೆಲವು ಕಿಡಿಗೇಡಿಗಳು ವಿವರಿಸುತ್ತಾರೆ. ಅವರ ಮಾತು ಬಿಡಿ.

ಶಾಲಾದಿನಗಳಲ್ಲಿ ತನ್ನ ಊರಿನ ಬಸ್‌ಸ್ಟಾಂಡಿನಲ್ಲಿ ಬಜ್ಜಿ ಬೋಂಡ ಮಾರುತ್ತಿದ್ದ. ಆತನ ಶೈಕ್ಷಣಿಕ ಜೀವನ ಅಷ್ಟೇನೂ ಏಳ್ಗೆಯಾಗಲಿಲ್ಲ. ಆತನ ತಂದೆ ಹೀರಾಚಂದ್‌ಗೆ ಕುಟುಂಬದ ಪೋಷಣೆ ಕಷ್ಟವಾದ್ದರಿಂದ ತನ್ನ ಹಿತೈಷಿಯೊಬ್ಬರ ಸಹಾಯ ಪಡೆದು ಮಗ ಧೀರಜ್‌ಲಾಲ್‌ನನ್ನು ಯೆಮನ್ ದೇಶದ ಏಡನ್ ಎಂಬ ಬಂದರು ನಗರದ ಕಂಪನಿಯೊಂದರಲ್ಲಿ 1949ರಲ್ಲಿ ಕೆಲಸಕ್ಕೆ ಸೇರಿಸಿದರು. ಹಲವಾರು ದೇಶಗಳೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಆ ಕಂಪನಿಯಲ್ಲಿ ಗುಮಾಸ್ತನಾಗಿ ಸೇರಿಕೊಂಡ 17 ರ ಹರೆಯದ ಧೀರಜ್‌ಲಾಲ ನಂ.2 ವ್ಯಾಪಾರದ ಒಳಗುಟ್ಟುಗಳನ್ನು ಅಭ್ಯಾಸ ಮಾಡಿಕೊಂಡ. ತನ್ನ ಕರಾಮತ್ತು ತೋರಿಸಲು ಆತ ಬಹಳ ದಿನ ಕಾಯಲಿಲ್ಲ.

ಹೀಗಿದ್ದಾಗ ಯೆಮನ್‌ನ ಹಣಕಾಸು ಸಚಿವಾಲಯದವರಿಗೆ ಒಂದು ಸಮಸ್ಯೆ ಎದುರಾಯಿತು. ಅದೇನೆಂದರೆ ತಮ್ಮ ಕರೆನ್ಸಿ ರಿಯಾಲ್‌ನ ಕೊರತೆ ಮತ್ತೆ ಮತ್ತೆ ಉಂಟಾಗುತ್ತಿತ್ತು. ಕೊನೆಗೂ ಅಧಿಕಾರಿಗಳು ಇದಕ್ಕೆ ಕಾರಣವನ್ನು ಪತ್ತೆ ಹಚ್ಚಿದರು. ಏಡನ್‌ನಲ್ಲಿದ್ದ ಇಪ್ಪತ್ತರ ಹರೆಯದ ಯುವಕನೊಬ್ಬ ಭಾರೀ ಪ್ರಮಾಣದಲ್ಲಿ ರಿಯಾಲ್‌ಗಳನ್ನು ಪಡೆದುಕೊಳ್ಳುತ್ತಿದ್ದ. ಆತ ಬೇರೆ ಯಾರೂ ಅಲ್ಲ, ಇದೇ ಧೀರಜ್‌ಲಾಲ್. 'ವಾಹ್! ಆ ಎಳೆವಯಸ್ಸಿನಲ್ಲೇ ಕರೆನ್ಸಿ ವ್ಯವಹಾರ!' ಎಂದು ನೀವು ಚಕಿತಗೊಳ್ಳಬಹುದು. ಆದರೆ ಅಂಥಾ ಘನತೆಯ ವ್ಯವಹಾರ ಏನೂ ಇರಲಿಲ್ಲ. ವಿಷಯ ಬಹಳ ಸರಳವಾಗಿತ್ತು. ಆಗಿನ ಕಾಲದಲ್ಲಿ ರಿಯಾಲ್ ನಾಣ್ಯಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸುತ್ತಿದ್ದರು. ಕೆಲವು ನಾಣ್ಯಗಳ ವಿನಿಮಯ ಮೌಲ್ಯಕ್ಕಿಂತಲೂ ಅದರಲ್ಲಿದ್ದ ಬೆಳ್ಳಿಯ ಮೌಲ್ಯವೇ ಹೆಚ್ಚಾಗಿತ್ತು ಹಾಗೂ ಶುದ್ಧ ಬೆಳ್ಳಿಗೆ ಲಂಡನ್ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿತ್ತು. ಮಾನ್ಯ ಧೀರಜ್‌ಲಾಲ್ ನಾಣ್ಯಗಳನ್ನು ಕರಗಿಸಿ ಬೆಳ್ಳಿಯನ್ನು ಲಂಡನ್‌ನ ವ್ಯಾಪಾರಿಗಳಿಗೆ ಮಾರಿಕೊಳ್ಳುತ್ತಿದ್ದ. ಅಧಿಕಾರಿಗಳು ಕಟ್ಟುನಿಟ್ಟಾದ ಕಾರಣ ಈ 'ವ್ಯವಹಾರ' ಮುಂದುವರೆಯಲಿಲ್ಲ. ಈ ಬಗ್ಗೆ ಬಹಳ ವರ್ಷಗಳ ನಂತರ ಧೀರಜ್ ಹೇಳಿದ ಮಾತುಗಳನ್ನು ಕೇಳಿ. 'ಅದರಿಂದ ನಾನು ಕೆಲವು ಲಕ್ಷಗಳನ್ನು ಗಳಿಸಿದೆ. ಸಾರಾಂಶದಲ್ಲಿ ನಾನು ಮಾಡಿದ್ದು ಗೋಲ್‌ಮಾಲ್ ಆಗಿತ್ತು; ಫಸ್ಟ್‌ಕ್ಲಾಸ್ ಗೋಲ್‌ಮಾಲ್ (ಮ್ಯಾನಿಪುಲೇಟರ್). ಆದರೆ ಅವಕಾಶಗಳು ಸಿಕ್ಕಾಗ ಕೈಕಟ್ಟಿ ಕುಳಿತುಕೊಳ್ಳುವ ತತ್ವವನ್ನು ನಾನು ಸುತರಾಂ ಒಪ್ಪುವುದಿಲ್ಲ'.

ಬಹುಶಃ ಇದೇ ಆತನ ಜೀವಮಾನದ ಪ್ರಪ್ರಥಮ ದೊಡ್ಡ ಗಳಿಕೆಯಾಗಿತ್ತು. ಈ ಕೃತ್ಯ ಮತ್ತು ಅದರ ಬಗ್ಗೆ ಆತನ ಹೇಳಿಕೆ ಅಂಬಾನಿಯ ಮತ್ತೊಂದು ಮುಖಕ್ಕೆ ಹಿಡಿದ ಕನ್ನಡಿಯಂತಿದೆ. ಇದನ್ನು ಸಾಧನೆ ಎನ್ನುತ್ತೀರೋ ಅಥವಾ ಅಕ್ರಮ ದಂಧೆ ಎನ್ನುತ್ತೀರೋ ಎಂಬುದನ್ನು ನೀವೇ ನಿರ್ಧರಿಸಿ.

ಏಡನ್‌ನಲ್ಲಿ ಮಾತ್ರವಲ್ಲದೆ ಕೆಲಕಾಲ ದುಬೈನ ಒಂದು ಪೆಟ್ರೋಲ್ ಬಂಕ್‌ನಲ್ಲೂ ಕೆಲಸಗಾರನಾಗಿ ದುಡಿದ ಧೀರಜ್‌ಲಾಲ್. ಆ ಬಗ್ಗೆಯೂ ಕೆಲವು ಅಪಸ್ವರಗಳು ಕೇಳಿಬಂದಿದ್ದವು. ಪೆಟ್ರೋಲ್‌ಬಂಕ್‌ನಲ್ಲಿ ಕೈಚಳಕ ಎಂದರೆ ನಮ್ಮೆಲ್ಲರಿಗೂ ಅರ್ಥವಾಗುವಂಥದ್ದೆ. ಇತ್ತಕಡೆ ಸ್ವತಂತ್ರಗೊಂಡಿದ್ದ ಭಾರತದಲ್ಲಿ ವ್ಯಾಪಾರ-ವಹಿವಾಟು ನಡೆಸಲು ವಿಪುಲ ಅವಕಾಶಗಳು ತೆರೆದುಕೊಂಡಿದ್ದವು. ಅಧಿಕಾರದಲ್ಲಿದ್ದವರನ್ನು ಸಂಪರ್ಕಿಸುವುದು ಅಷ್ಟೇನೂ ಕಷ್ಟದ ಕೆಲಸವಾಗಿರಲಿಲ್ಲ. ಇಂಥ ಹಿನ್ನೆಲೆಯಲ್ಲಿ 1958ರಲ್ಲಿ ಭಾರತಕ್ಕೆ ಮರಳಲು ನಿರ್ಧರಿಸಿದ. ಹೀಗೆ ಸುಮಾರು 50 ಸಾವಿರ ಬಂಡವಾಳದೊಂದಿಗೆ ತಾಯ್ನಾಡಿಗೆ ಮರಳಿದಾಗ ಆತನ ವಯಸ್ಸು ಕೇವಲ 26 ವರ್ಷ.


ಮೊದಲಿಗೆ ತನ್ನ ಗೆಳೆಯರೊಂದಿಗೆ ಸೇರಿ 'ಮಜಿನ್ ಕಾರ್ಪೊರೇಷನ್' ಎಂಬ ಲೇವಾದೇವಿ ಸಂಸ್ಥೆಯೊಂದನ್ನು ಶುರುಮಾಡಿದರು. ಕೆಲಕಾಲ ಜವಳಿ ವ್ಯಾಪಾರದ ಮಳಿಗೆಯೊಂದನ್ನು ನಡೆಸಿದ ಧೀರೂ ನಂತರ ರಿಲಯನ್ಸ್ ಕಾರ್ಪೊರೇಷನ್ ಕಂಪನಿ ಸ್ಥಾಪಿಸಿದರು. ಆಮೇಲೆ ಹೇಳುವುದೇನಿದೆ? ಲಾಭಕ್ಕಾಗಿ ತನ್ನ ಪ್ರತಿಸ್ಪರ್ಧಿಗಳನ್ನು ಹಿಂದಕ್ಕೆ ದಬ್ಬಿ ನಾಗಾಲೋಟ ಶುರು ಮಾಡಿದ ಕಂಪನಿಯ ಆಸ್ತಿ 1976-77ರಲ್ಲಿ

ಂತೆ ಸಿಬಿಐ ಬಹಳ ಎಚ್ಚರಿಕೆ ವಹಿಸಿದೆ. ಆದರೆ ವಾಸ ಅನುಭವಿಸಿ ಬಂದ ರಿಲಯನ್ಸ್ ಕಂಪನಿಯ ವರು ಅಧಿಕಾರಿಗಳು ತಮ್ಮ ವಕೀಲರ ಮೂಲಕ ರ್ಟಿಗೆ ಅಫಿಡೆವಿಟ್ ಸಲ್ಲಿಸಿದ್ದು ತಾವು ಈ ಪ್ರಕರಣ ಸಾಕ್ಷಿಗಳಾಗಲು ಸಿದ್ಧವೆಂದು ಹೇಳಿಕೆ ನೀಡಿದ್ದಾರೆ. ವಾದದ ಪ್ರಕಾರ ಅವರು ಕಂಪನಿಯ ನೌಕರರು ತ್ರಿ. ಈ ಹಗರಣದ ಲಾಭವಾಗಿದ್ದು ತಮಗಲ್ಲ, ಗೆ ಅದರ ಮಾಲಿಕ ಅನಿಲ್ ಅಂಬಾನಿಗೆ. ಇದರ ಸತ್ಯತೆ ಸಣ್ಣ ಮಕ್ಕಳಿಗೂ ಅರ್ಥವಾಗುವಂತಿದೆ. ಟರ್ಜ್, ಸಿಬಿಐ ಹಾಗೂ ಅಂತಿಮವಾಗಿ ಇದೇ ಾರಿಗಳು ಮುಂದಿನ ದಿನಗಳಲ್ಲಿ ಯಾವ ಹಾದಿ ಮುತ್ತಾರೆಂಬುದನ್ನು ಕಾಲವೇ ನಿರ್ಧರಿಸಬೇಕು.

ಲಯನ್ಸ್ ಜೀವ ವಿಮೆ ಹೆಸರಿನಲ್ಲಿ ಪಂಗನಾಮ

ಾರತದ ಇನ್ಶೂರೆನ್ಸ್ ಕ್ಷೇತ್ರದಲ್ಲಿರುವ ಅಪಾರ ವನ್ನು ಕಂಡು ಹತ್ತಾರು ವಿದೇಶಿ ಕಂಪನಿಗಳು ನಮಗೆ ಸೇವೆ ಒದಗಿಸಲು ಪೈಪೋಟಿ ನಡೆಸುತ್ತಿವೆ. ಳಗಾದರೆ ಕಂಡಕಂಡವರಿಗೆ ಎಡತಾಕುವ ಈ ಕಂಪನಿ ಧಿಗಳು ತಮ್ಮ ಸೇವಾಕೈಂಕರ್ಯದ ಬಗ್ಗೆ ನಮ್ಮ ತಲೆ ತಿನ್ನುತ್ತಿದ್ದಾರೆ. ಹೀಗಿರುವಾಗ ರಿಲಯನ್ಸ್‌ನಂಥ ಭಿಮಾನಿಗಳು ಸುಮ್ಮನೆ ಕುಳಿತಿರಲು ಹೇಗೆ ಸಾಧ್ಯ? ಯನ್ಸ್ ಜನರಲ್ ಇನ್ಶೂರೆನ್ಸ್ ಎಂಬ ಹೆಸರಿನಲ್ಲಿ ಸೇವೆಗೆ ಮುಂದಾಗಿದ್ದಾರೆ.

ದರೆ ಲಾಗಾಯ್ತಿನಿಂದಲೂ ಈ ಕಂಪನಿಗೆ ಕಾನೂನು ದೆಯೆಂದರೆ ಅಲರ್ಜಿ. ಕಾನೂನಿನ ಕಣ್ಣಿಗೆ ಮಣ್ಣೆರ , ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಇತ್ಯಾದಿಗಳನ್ನು ಸುವುದು ತಮ್ಮ ಆಜನ್ಮಸಿದ್ಧಹಕ್ಕು ಎಂಬುದು ಅಚಲ ನಂಬಿಕೆ. ಹಾಗಾಗಿ ಇಲ್ಲಿಯೂ ತಣ್ಣಗೆ ತಮ್ಮ ಮತ್ತು ತೋರಿಸಿದ್ದಾರೆ. ಹೆಲ್ತ್ ಇನ್ಶೂರೆನ್ಸ್‌ನ ನಲ್ಲಿ ಖೊಟ್ಟಿ ಪಾಲಿಸಿಯೊಂದನ್ನು ಸೃಷ್ಟಿಸಿ ಇದು ಸುಮಾರು 3.5 ಲಕ್ಷ ಪಾಲಿಸಿಗಳನ್ನು ಮಾರಾಟ ದ್ದಾರೆ. ಈ ಅಕ್ರಮ ವ್ಯವಹಾರದಲ್ಲಿ ಎಷ್ಟು ಹಣ



27 ಅಂತಸ್ತಿನ ಮುಖೇಶ್ ಬಂಗಲೆ...

ಅಪರಾಧಗಳ ಬಗ್ಗೆ ಹೀಗೊಂದು ಅಫಿಡೆವಿಟ್!

ರಿಲಯನ್ಸ್ ಸಮೂಹದ ರಿಲಯನ್ಸ್ ಪವರ್, ರಿಲಯನ್ಸ್ ಇನ್‌ಫ್ರಾಟೆಲ್ ಮುಂತಾದ ಕಂಪನಿಗಳು ಷೇರು ಮಾರುಕಟ್ಟೆಯಿಂದ ಸಾವಿರಾರು ಕೋಟಿಗಳ ಮೊತ್ತವನ್ನು ಬಾಚಿಕೊಂಡಿವೆ. ಷೇರು ಕೊಳ್ಳುವವರು ಆಯಾ ಕಂಪನಿಯ ಮಾಹಿತಿಗಳನ್ನು ತಿಳಿದುಕೊಳ್ಳಲು ಅನುಕೂಲವಾಗಲೆಂದು ಒಂದು ನಿಯಮವನ್ನು ರೂಪಿಸಲಾಗಿದೆ. ಷೇರು ಮಾರಾಟಕ್ಕೆ ಅರ್ಜಿ ಸಲ್ಲಿಸುವ ಕಂಪನಿಯು ಷೇರು ಮಂಡಳಿಗೆ ತನ್ನ ಕಂಪನಿಯ ನೆಗೆಟಿವ್ ಅಂಶಗಳನ್ನು ಕಡ್ಡಾಯವಾಗಿ ತಿಳಿಸಬೇಕು. ಇವುಗಳನ್ನು 'ರಿಸ್ಕ್ ಫ್ಯಾಕ್ಟರ್' ಎಂಬ ತಲೆಬರಹದಡಿ ನಮೂದಿಸಲಾಗುತ್ತದೆ. ರಿಲಯನ್ಸ್ ಕಂಪನಿಗಳು ಸಲ್ಲಿಸಿರುವ ರಿಸ್ಕ್ ಫ್ಯಾಕ್ಟರ್ ಪಟ್ಟಿಯ ಕೆಲ ಅಂಶಗಳು ಹೀಗಿವೆ.

* ಕಂಪನಿಯ ಚೇರ್ಮನ್ ಆಗಿರುವ ಮಿಸ್ಟರ್ ಅನಿಲ್ ಅಂಬಾನಿಯವರ ಮೇಲೆ ಕೆಲವು ಕ್ರಿಮಿನಲ್ ಮೊಕದ್ದಮೆಗಳು ವಿಚಾರಣೆಯ ಹಂತದಲ್ಲಿದ್ದು ಅವುಗಳ ವಿವರ ಈ ಕೆಳಗಿನಂತಿದೆ.
* ತಮ್ಮ ಜಮೀನಿಗೆ ಸೂಕ್ತ ಬೆಲೆ ನೀಡದಿದ್ದರೆ ಜಮೀನನ್ನು ಬಿಟ್ಟುಕೊಡುವುದಿಲ್ಲವೆಂದ ವ್ಯಕ್ತಿಯ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಕಾನೂನುಬಾಹಿರವಾಗಿ ಅಲ್ಲಿದ್ದ ಯಂತ್ರಗಳನ್ನು ಕಿತ್ತುಹಾಕಿದ್ದಾರೆಂಬುದರ ಬಗ್ಗೆ ಮೂರು ಕ್ರಿಮಿನಲ್ ಕೇಸುಗಳು ದಾಖಲಾಗಿವೆ.
* ಈ ಹಿಂದೆ ಇವರದೇ ಮಾಲಿಕತ್ವದಲ್ಲಿದ್ದ ರಿಲಯನ್ಸ್ ಪಾಲಿಪ್ರೊಪಿಲೀನ್ ಲಿಮಿಟೆಡ್ ಎಂಬ ಕಂಪನಿಯ ಕನ್ವರ್ಟಿಬಲ್ ಡಿಬೆಂಚರ್‌ಗಳನ್ನು ಕೊಂಡುಕೊಂಡಿದ್ದ ಇಬ್ಬರು ವ್ಯಕ್ತಿಗಳು ಕಂಪನಿ ತಮಗೆ ಸುಳ್ಳು ಹೇಳಿ ಮೋಸ ಮಾಡಿದುವುದಾಗಿ ಎರಡು ಕ್ರಿಮಿನಲ್ ಕೇಸುಗಳನ್ನು ದಾಖಲಿಸಿದ್ದಾರೆ.
* ಈ ಹಿಂದಿನ ರಿಲಯನ್ಸ್ ಪೆಟ್ರೋಲಿಯಂ ಲಿಮಿಟೆಡ್ ಕಂಪನಿಯ ಷೇರುಗಳನ್ನು ಅಕ್ರಮವಾಗಿ ವರ್ಗಾಯಿಸಿದರೆಂಬ ವಿವಾದಕ್ಕೆ ಸಂಬಂಧಿಸಿ ಎರಡು ಕ್ರಿಮಿನಲ್ ಕೇಸುಗಳಿವೆ.
* ಇದೇ ಕಂಪನಿಯ ಷೇರುದಾರನೊಬ್ಬ ಕಂಪನಿಯ ಮಾಲಿಕರು ನನಗೆ ನಂಬಿಕೆ ದ್ರೋಹ ಮತ್ತು ಮೋಸ ಎಸಗಿರುವುದಾಗಿ ಆರೋಪಿಸಿ ಮತ್ತೊಂದು ಕ್ರಿಮಿನಲ್ ಕೇಸು ಹಾಕಿದ್ದಾನೆ.
* ವಿ.ಎಮ್.ರಾಸ್ತೆ ಎಂಬ ವ್ಯಕ್ತಿಯೊಬ್ಬರು ರಿಲಯನ್ಸ್ ಎನರ್ಜಿ ಲಿಮಿಟೆಡ್‌ನ ಷೇರು ವ್ಯವಹಾರಕ್ಕೆ ಸಂಬಂಧಿಸಿ ಖಾಸಗಿ ಕ್ರಿಮಿನಲ್ ದೂರೊಂದನ್ನು ಸಲ್ಲಿಸಿದ್ದಾರೆಂದು ತಿಳಿದು ಬಂದಿದೆ.

ಪಟ್ಟಿ ಹೀಗೇ ಮುಂದುವರೆಯುತ್ತದೆ.

ಕಂಪನಿಯೇ ಸಲ್ಲಿಸಿರುವ ಈ ಪಟ್ಟಿಯಲ್ಲಿ ಫೋರ್ಜರಿಯ, ವಂಚನೆಯ ದೌರ್ಜನ್ಯದ ಹಲವು ಕೇಸುಗಳ ಉಲ್ಲೇಖವಿದೆ. ಕೇಸು ದಾಖಲಾದರೂ ಕೇಳುವವರೇ ಇಲ್ಲದ ದೇಶದಲ್ಲಿ ಕೇಸೇ ದಾಖಲಾಗದ ಅಪರಾಧಗಳನ್ನು ಕೇಳುವವರಾರು?


ಕಂಪನಿಯ ಘನತೆ ಹಾಗೂ ಖ್ಯಾತಿ ಮುಗಿಲೆತ್ತರಕ್ಕೆ ಏರುತ್ತಲೇ ಇದೆ. ಅದಕ್ಕೆ ಮರುಳಾದ ಮಂದಿ ಸಾವಿರಾರು ಕೋಟಿಗಳನ್ನು ರಿಲಯನ್ಸ್ ಬಕಾಸುರನ ಬಾಯಿಗೆ ಹಾಕುತ್ತಿದ್ದಾರೆ. ಮೋಸ ಹೋದವರು ಹಿಡಿಶಾಪ ಹಾಕುತ್ತಿದ್ದಾರೆ.

ಲಪಟಾಯಿಸಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿಗಳು ಹೊರಬಂದಿಲ್ಲ.

ಇಷ್ಟೆಲ್ಲಾ ನಡೆಯುತ್ತಿದ್ದರೂ ವಿಮಾ ನಿಯಂತ್ರಣಾ ಪ್ರಾಧಿಕಾರ(ಐಆರ್‌ಡಿಎ)ಕ್ಕೆ ಯಾವುದೇ ಮಾಹಿತಿ ಇರಲಿಲ್ಲವಂತೆ. ಕೊನೆಗೆ ಹೇಗೋ ಎಚ್ಚೆತ್ತುಕೊಂಡಂತೆ ನಟಿಸಿದ ಪ್ರಾಧಿಕಾರ ನೋಟಿಸ್ ಜಾರಿ ಮಾಡಿ ವಿಚಾರಣೆ ಪ್ರಾರಂಭಿಸಿತು. ನಂತರ ನಡೆದದ್ದು ಮಾತ್ರ ದೇಶದ ಬಗ್ಗೆ ಕಿಂಚಿತ್ತಾದರೂ ಅಭಿಮಾನವಿರುವ ಯಾರೇ ಆದರೂ ತಲೆತಗ್ಗಿಸುವಂತಹ ಕಾನೂನು ಕ್ರಮ!

ವಿಮಾ ಪ್ರಾಧಿಕಾರದ ಅನುಮತಿ ಪಡೆಯದೆ ಯಾವ ಕಂಪನಿಯೇ ಆಗಲಿ ಯಾವುದೇ ಪಾಲಿಸಿಯನ್ನು ಮಾರಾಟ ಮಾಡುವುದು ಕಾನೂನುಬಾಹಿರ. ಅಂತಹ ಕಾನೂನು ಬಾಹಿರ ಕೃತ್ಯಕ್ಕೆ ಕಠಿಣ ಶಿಕ್ಷೆಯೆಂದು ಕಾನೂನು ಹೇಳುತ್ತದೆ. ಅಂಥಾ ಪ್ರತಿಯೊಂದು ಪಾಲಿಸಿಗೆ ತಲಾ 20 ಲಕ್ಷ ದಂಡ ಹಾಗೂ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ. ಅಂದರೆ 3.5 ಲಕ್ಷ ಪಾಲಿಸಿಗಳಿಗೆ ಒಟ್ಟು ದಂಡದ ಪ್ರಮಾಣ 17,500 ಕೋಟಿ ರೂಪಾಯಿಗಳಾಗುತ್ತವೆ. ಆದರೆ ಪ್ರಾಧಿಕಾರ ವಿಧಿಸಿದ ದಂಡದ ಮೊತ್ತ ಕೇವಲ 5 ಲಕ್ಷ ಮಾತ್ರ! ಅಂದರೆ ಒಬ್ಬ ಪಾಲಿಸಿದಾರನಿಗೆ ಯಾಮಾರಿಸಿ ಹಣ ಪಡೆದದ್ದಕ್ಕೆ ಕೇವಲ 5 ರೂಪಾಯಿ 71 ಪೈಸೆ ದಂಡ! ಪ್ರಾಧಿಕಾರದ ಅಧ್ಯಕ್ಷನಾಗಿರುವ ಹರಿನಾರಾಯಣ್ ಎಂಬ ಆಸಾಮಿ ಅಂಬಾನಿಗಳೊಂದಿಗೆ ಶಾಮೀಲಾಗಿರುವುದು ಹಗಲಿನಷ್ಟೆ ಸತ್ಯ.. ಆದರೆ ನಮ್ಮ ಸರ್ಕಾರಗಳು ಇದೇ ಸಂದರ್ಭದಲ್ಲಿ ಅಕ್ರಮ ರೇಷನ್ ಕಾರ್ಡುದಾರರನ್ನು ಜೈಲಿಗೆ ಕಳಿಸುವಂಥ ಕಠಿಣ ಕಾನೂನುಗಳನ್ನು ರೂಪಿಸುವ ಘನ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಇದು ಹೆಲ್ತ್ ಇನ್ಶೂರೆನ್ಸ್‌ನ ಕತೆಯಾದರೆ ಇನ್ನೊಂದೆಡೆ ಪಾಲಿಸಿಗಳನ್ನು ಪಡೆದುಕೊಂಡಿರುವ ಗ್ರಾಹಕರ ಗೋಳನ್ನು ಕೇಳುವವರೇ ಇಲ್ಲವಾಗಿದೆ. ಮೂರು ತಿಂಗಳಲ್ಲಿ ಹೆಚ್ಚಿನ ಬಡ್ಡಿಯೊಂದಿಗೆ ವಾಪಸ್ ಪಡೆದುಕೊಳ್ಳಬಹುದು ಎಂದು ನಂಬಿಸಿ ಹಲವರಿಂದ ಹಣ ಕಸಿಯಲಾಗಿದೆ. ಮನೆಗೆ ತಲುಪಿದ ಪಾಲಿಸಿ ಬಾಂಡ್‌ನಲ್ಲಿ ಹೆಸರು ಅಥವಾ ವಿಳಾಸ ಅಥವಾ ಪಾಲಿಸಿಯ ನಮೂನೆ ತಪ್ಪಾಗಿ ಮುದ್ರಿತವಾಗಿದೆ ಎಂದು ಅದನ್ನು ಸರಿಪಡಿಸಲು ಕಂಪನಿಯವರು ನಿರಾಕರಿಸುತ್ತಿದ್ದಾರೆ ಎಂಬ ದೂರುಗಳು ವ್ಯಾಪಕವಾಗಿವೆ. ಸಾಲ ಕೊಡಿಸುವುದಾಗಿ ನಂಬಿಸಿ ಪಾಲಿಸಿ ಮಾಡಿಸಿದವರೊಬ್ಬರು ಅತ್ತ ಸಾಲವೂ ಇಲ್ಲದೆ ಇತ್ತ ಕೈಯಲ್ಲಿದ್ದ ಹಣವೂ ಇಲ್ಲದೆ ಗ್ರಾಹಕರ ಕೋರ್ಟಿಗೆ ಮೊರೆ ಹೋಗಿದ್ದಾರೆ. ಪಂಜಾಬಿನ ರೈತನೊಬ್ಬ ರಿಲಯನ್ಸ್ ನಂಬಿ 80,000 ರೂಪಾಯಿಗಳನ್ನು ತೊಡಗಿಸಿ ಹಣ ವಾಪಸ್ಸು ಬರದೆ ಪರದಾಡುತ್ತಿದ್ದಾನೆ. ತನ್ನ ಹಣವನ್ನು ವಾಪಸ್ ಕೊಡುವಂತೆ ರಿಲಯನ್ಸ್ ಅಧಿಪತಿ ಅನಿಲ್ ಅಂಬಾನಿಯವರಲ್ಲಿ ಮೊರೆ ಇಟ್ಟರೂ ಯಾವ ಪ್ರಯೋಜನವೂ ಆಗಿಲ್ಲ. ಹೀಗೆ ಗ್ರಾಹಕರ ವೇದಿಕೆಯಲ್ಲಿ ಇನ್ನಿತರ ನ್ಯಾಯಾಲಯಗಳಲ್ಲಿ ಹಲವಾರು ದೂರುಗಳು ದಾಖಲಾಗಿವೆ. ರಿಲಯನ್ಸ್ ಕಂಪನಿ ಎಷ್ಟೇ ಆಗಲಿ ದೇಶದ ನಂ.1 ಕಂಪನಿ ತಾನೇ? ಆದ್ದರಿಂದ 24 ಜನರಲ್ ಇನ್ಶೂರೆನ್ಸ್ ಕಂಪನಿಗಳ ವಿರುದ್ಧ ಐಆರ್‌ಡಿಎ ಗೆ ಬಂದಿರುವ ದೂರುಗಳಲ್ಲೂ ತನ್ನ ನಂ.1 ಸ್ಥಾನ ಕಾಯ್ದುಕೊಂಡಿದೆ. ರಿಲಯನ್ಸ್ ಇನ್ಶೂರೆನ್ಸ್ ಕಂಪನಿ ಬಗ್ಗೆ ಬಂದಿರುವ ದೂರುಗಳ ಒಟ್ಟು ಸಂಖ್ಯೆ ಬರೋಬ್ಬರಿ 65,160!



ಬಡಪಾಯಿಗಳ ಹಣ ದೋಚಿದ ಅಂಬಾನಿಗಳ ಸಂಪತ್ತು ಮಾತ್ರ ನಿರಾತಂಕವಾಗಿ ಬೆಳೆಯುತ್ತಲೇ ಇದೆ. ಅಂದಹಾಗೆ ನಮ್ಮ ಸಕಾರಗಳು ಯಾರ ಪರವಾಗಿವೆ ಎಂಬುದನ್ನು ಮತ್ತೆ ಬಿಡಿಸಿ ಹೇಳಬೇಕೆ?

ಅಂಬಾನಿಗಳು ಎಲ್ಲರಿಗೂ ಬೇಕಾದವರು

ಹಾಗೆಂದರೆ ಸರ್ವೆಜನೋ ಸುಖಿನೋ ಭವಂತು ಎಂಬ ತತ್ವವನ್ನು ಪಾಲಿಸುತ್ತಿದ್ದರು ಎಂದರ್ಥವಲ್ಲ. ಅವರಿಗೆ ದೀನದಲಿತರ ಸೇವೆ, ಸಮಾಜ ಸೇವೆ ಎಂಬ ಶಬ್ದಗಳು ರುಚಿಸುತ್ತಿರಲಿಲ್ಲ. ಅವರು ಕಟ್ಟಬೇಕಿದ್ದ ತೆರಿಗೆಗಳನ್ನು ನಿಯತ್ತಾಗಿ ಕಟ್ಟಿಬಿಟ್ಟಿದ್ದರೆ ಅದೇ ದೊಡ್ಡ ದೇಶಸೇವೆಯಾಗಿಬಿಡುತ್ತಿತ್ತು. ಯಾಕೆಂದರೆ ಅದು ಅಷ್ಟು ದೊಡ್ಡ ಮೊತ್ತದ್ದು. ಅದು ಹಾಗಿರಲಿ.

ಈ ಅಂಬಾನಿಗಳು ಈ ದೇಶದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳಿಗೂ ಪರಮಾಪ್ತರು. ಅದರಲ್ಲಿ ಆಡಳಿತ ಪಕ್ಷ ವಿರೋಧ ಪಕ್ಷಗಳೆಂಬ ಯಾವ ಭೇದವೂ ಇಲ್ಲ. 2 ಜಿ ಹಗರಣದ ಉದಾಹರಣೆಯನ್ನೇ ನೋಡಿ. ಲೋಕಸಭೆಯಲ್ಲಿ ಈ ಬಗ್ಗೆ ಇನ್ನಿಲ್ಲದ ಗದ್ದಲ ಎಬ್ಬಿಸಿರುವ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಗಳು ಈ ಹಗರಣದ ರೂವಾರಿ ಹಾಗೂ ಪ್ರಮುಖ ಲಾಭಕೋರ ಅನಿಲ್ ಅಂಬಾನಿಯ ಪಾತ್ರ ನಿಚ್ಚಳವಾಗಿದ್ದರೂ ಅಪ್ಪಿತಪ್ಪಿ ಆತನ ಹೆಸರನ್ನು ಎತ್ತಿಲ್ಲ. ದಿನಬೆಳಗಾದರೆ ಚಿದಂಬರಂ ಹೆಸರು ಸೇರಿಸಿ, ಪ್ರಧಾನಿ ಹೆಸರು ಸೇರಿಸಿ ಎಂದು ಬೊಬ್ಬೆ ಹಾಕುವ ದೇಶಭಕ್ತರ ಪಕ್ಷ ಉದ್ಯಮಪತಿಗಳನ್ನು ರಕ್ಷಿಸುವ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಿವೆ. ಎಡಪಕ್ಷದವರು ಅಪರೂಪಕ್ಕೊಮ್ಮೆ ಈ ಬಗ್ಗೆ ಮಾತಾಡಿದರೂ ನಂತರ ಮೌನಕ್ಕೆ ಶರಣಾಗಿದ್ದಾರೆ. ಅಂಬಾನಿಗಳ ತಾಕತ್ತು ಈ ಎಲ್ಲವನ್ನೂ ಮೀರಿದ್ದು.

Reliance Industries Limited

70 ಕೋಟಿಗಳಿಗೇರಿ 2002 ರಲ್ಲಿ ಧೀರೂಭಾಯಿ ಅಂಬಾನಿ ತೀರಿಕೊಂಡಾಗ 75000 ಕೋಟಿಗಳಿಗೇರಿತ್ತು.


ಜವಳಿ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದ 'ವಿಮಲ್' ಬ್ರಾಂಡ್‌ಗೆ ಅಂಬಾನಿಯೇ ಒಡೆಯ. ತಮಗೆ ವ್ಯಾಪಾರದಲ್ಲಿ ತೀವ್ರ ಪೈಪೋಟಿ ನೀಡಿದ್ದ 'ಬಾಂಬೆ ಡೈಯಿಂಗ್‌ನ ನುಸ್ಲಿವಾಡಿಯಾಗೂ ಅಂಬಾನಿಗೂ ನಡುವಿನ 'ಸ್ಪರ್ಧೆ' ಇತಿಹಾಸ ಪ್ರಸಿದ್ಧ. ಆರೋಗ್ಯಕರ ಸ್ಪರ್ಧೆಯಿರುವುದು ಉತ್ತಮವೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಅಂಬಾನಿ ನಡೆಸಿದ ಸ್ಪರ್ಧೆಯ ಕ್ಲೈಮ್ಯಾಕ್ಸ್ ಏನು ಗೊತ್ತೆ? ಉದ್ಯಮಪತಿ ನುಸ್ಲಿವಾಡಿಯಾನ ಕೊಲೆಗೆ ಸಂಚು ರೂಪಿಸಿದ ಪದ ಮೇಲೆ ರಿಲಯನ್ಸ್ ಕಂಪನಿಯ ಉನ್ನತ ಅಧಿಕಾರಿಗಳನ್ನು ಪೊಲೀಸರು ಬಂಧಿಸಿದರು. ಅಂಬಾನಿಯನ್ನು ೂ ಮುಟ್ಟಲೂ ಇಲ್ಲ, ನಂತರ ಆ ಅಧಿಕಾರಿಗಳೂ ಬಿಡುಗಡೆಯಾದರು. ಉನ್ನತ ಹಂತದ ರಾಜಕಾರಣಿಗಳು ಹಾಗೂ ರಿಗಳೊಂದಿಗೆ ಸದಾ 'ಹತ್ತಿರದ ಸಂಬಂಧ'ವನ್ನು ಕಾಯ್ದುಕೊಳ್ಳುವುದು ಅಂಬಾನಿಗಳಿಗೆ ರಕ್ತಗತವಾಗಿರುವ ಒಂದು ಗುಣ.

ೀರಜ್‌ಲಾಲ್ ಎಂಬ ಹೆಸರು ಅಷ್ಟಾಗಿ ಪರಿಚಿತವಲ್ಲ, ಬದಲಾಗಿ ಧೀರೂಭಾಯಿ ಎಂಬ ಅನ್ವರ್ಥನಾಮವೇ ಅಧಿಕೃತ ಂತೆ ಚಾಲ್ತಿಯಲ್ಲಿದೆ. ಮುಂಬೈನ ಅಂಡರ್‌ವರ್ಲ್ಡ್‌ನಲ್ಲಿರುವ ಡಾನ್‌ಗಳ ಹೆಸರಿನೊಂದಿಗೆ ಸಾಮಾನ್ಯವಾಗಿ 'ಭಾಯಿ' ಶಬ್ದ ಅಂಟಿಕೊಂಡಿರುತ್ತದೆ. ಅದು ಉದ್ಯಮಪತಿ ಧೀರಜ್‌ಲಾಲ್‌ಗೂ ಅಂಟಿಕೊಂಡಿದ್ದು ಕೇವಲ ಕಾಕತಾಳೀಯವೇನಲ್ಲ.

ೀರೂಭಾಯಿಯವರನ್ನು ಹಾಡಿಹೊಗಳುವ ಲೇಖನಗಳು, ಕೃತಿಗಳಿಗೆ ಲೆಕ್ಕವೇ ಇಲ್ಲ, ಆದರೆ ವಿದೇಶಿ ಪತ್ರಕರ್ತನೊಬ್ಬ ದ ಪಾಲಿಸ್ಟರ್ ಪ್ರಿನ್ಸ್' ಎಂಬ ಧೀರೂಭಾಯಿಯ ಜೀವನ ಚರಿತ್ರೆ ಮರೆಮಾಚಲ್ಪಟ್ಟಿರುವ ಆತನ ಹಲವು ಮುಖಗಳನ್ನು ಪರಿಚಯಿಸುತ್ತದೆ. ಆದರೆ ನಮ್ಮ ಘನ ಭಾರತ ಸರ್ಕಾರ ಆ ಕೃತಿಯನ್ನು ನಿಷೇಧಿಸಿದೆ. ಅಂಥಾ ನಿಷೇಧಕ್ಕೆ ಕಾರಣವೇನೆಂದು ುವ ಅಗತ್ಯವೇ ಇಲ್ಲ, ಅವೆಲ್ಲ ಈಗ ಕೇವಲ ಇತಿಹಾಸವಷ್ಟೆ.

ಗ ವರ್ತಮಾನಕ್ಕೆ ಬರೋಣ. ಇಂದು ಹಲವು ದೈತ್ಯ ಕಂಪನಿಗಳನ್ನು ಹೊಂದಿರುವ ಬೃಹತ್ ರಿಲಯನ್ಸ್ ಸಾಮ್ರಾಜ್ಯದ ಸಹೋದರರ ಆಸ್ತಿಗಳ ಒಟ್ಟು ಮೊತ್ತ ಸುಮಾರು 2 ಲಕ್ಷ ಕೋಟಿಗಳಿಗೂ ಅಧಿಕ. ವಾಣಿಜ್ಯ ಹಾಗೂ ಉದ್ಯಮ ಲ್ಲಿ ನೂರಾರು ವರ್ಷಗಳ ಇತಿಹಾಸವಿರುವ ಹಲವು ಕಂಪನಿಗಳಿಗೆ ಸೈಡ್ ಹೊಡೆದ ರಿಲಯನ್ಸ್ ಇಂದು ದೇಶದ ಂಪನಿಯಾಗಿ ಬೆಳೆದು ನಿಂತಿದೆ. ಇದರ ಮಾಲಿಕರು ವಿಶ್ವದ ಅತಿ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಮಾಧ್ಯಮಗಳು ಹಿಂದುಮುಂದು ನೋಡದೆ ಚಪ್ಪಾಳೆ ತಟ್ಟುವಂತೆ ನಮ್ಮನ್ನು ಹುರಿದುಂಬಿಸುತ್ತಲೇ ಇವೆ.

ಮೂರು ಜನ ಅಂಬಾನಿಗಳು



ಈ ಮೂರು ಜನರು ಅಪ್ಪ ಧೀರೂಬಾಯಿ ಹಾಗೂ ಮಕ್ಕಳಾದ ಮುಖೇಶ್ ಮತ್ತು ಅನಿಲ್ ಇರಬೇಕೆಂದು ನಿಮ್ಮ ಮನಸ್ಸಿಗೆ ಬಂದಿರುತ್ತದೆ. ಆದರೆ ಇದು ಹಾಗಲ್ಲ. ಗುಜರಾತಿನವರೇ ಆದ ಒಬ್ಬ ಲೇಖಕರು, ಧೀರೂಭಾಯಿ ಅಂಬಾನಿ ಬಗ್ಗೆ ಹೇಳಿದ ಮಾತಿದು. 'ಮೂರು ಜನ ಧೀರೂಭಾಯಿ ಅಂಬಾನಿಗಳಿದ್ದಾರೆ. ಒಬ್ಬ ಯಾರಿಗೂ ಸಾಟಿಯಿಲ್ಲದ ವ್ಯಕ್ತಿ, ಆತನ ಹೆಸರೇ ಒಂದು ಬ್ರಾಂಡ್‌ನೇಮ್. ಎಲ್ಲರ ಮನೆಮಾತಾಗಿರುವ ಈ ಕೈಗಾರಿಕೋದ್ಯಮಿ ಗುಜರಾತಿ ಜನರಿಗಂತೂ ಆರಾಧ್ಯ ದೈವವಾಗಿ, ಸದಾ ಸ್ಫೂರ್ತಿ ನೀಡುವ ವ್ಯಕ್ತಿ ಎನಿಸಿಕೊಂಡಿದ್ದಾರೆ.

ಎರಡನೇ ಧೀರೂಭಾಯಿ ಅಂಬಾನಿ ಒಬ್ಬ ಸಂಚುಗಾರ, ಮಹಾ ಸುಳ್ಳುಗಾರ, ಆತ ಯಾವುದಕ್ಕೂ ಹೇಸುವುದಿಲ್ಲ. ಆತನಿಗೆ ಜೀವನದಲ್ಲಿ ಯಾವ ಮೌಲ್ಯಗಳೂ ಇಲ್ಲ.

ಮೂರನೇ ಧೀರೂಭಾಯಿ ಅಂಬಾನಿ ಮಹಾ ರಾಜಕೀಯ ಚಾಣಾಕ್ಷ, ಮಹಾ ಕನಸುಗಾರ ಮತ್ತು ದೂರದರ್ಶಿ, ಆ ಕಾರಣಕ್ಕೆ ಈತನನ್ನು ನೆಪೋಲಿಯನ್‌ಗೆ ಹೋಲಿಸಬಹುದು. ಆದರೆ ಈ ಮೂರೂ ವ್ಯಕ್ತಿತ್ವಗಳನ್ನು ಅರ್ಥ ಮಾಡಿಕೊಳ್ಳಲಾಗದೆ ಜನರು ಯಾವಾಗಲೂ ಗೊಂದಲದಲ್ಲೇ ಮುಳುಗಿರುತ್ತಾರೆ."

ನಮ್ಮ ಘನ ಸರ್ಕಾರ ಈ ಧೀರನ ಸ್ಮರಣೆಯಲ್ಲಿ ಅಂಚೆ ಚೀಟಿಯೊಂದನ್ನು ಬಿಡುಗಡೆ ಮಾಡಿದೆ.

ಗೊಂದಲದಲ್ಲಿ ಮುಳುಗಿರುವ ನಮ್ಮ ಸಮಾಜ ಅದನ್ನು ನಿವಾರಿಸಿಕೊಳ್ಳುತ್ತದೆ ಎಂದು ನಂಬಲು ಏನಾದರೂ ಆಧಾರಗಳಿವೆಯೆ?

ಮರಿ ಕುಮಾರನ ನಿಖಿಲ್ ಎಂಟ್ರಿ


ತಂದೆ-ತಾಯಿ ಜೊತೆ ನಿಖಿಲ್ ಗೌಡ

> "ಸದ್ಯ ನಿಖಿಲ್ ಗೌಡನ ರಾಜಕೀಯ ಆರಂಗೇಟ್ರಮ್ ಅದ್ದೂರಿಯಾಗಿ ನಡೆಯುತ್ತಿದೆ. ರಾಮನಗರ-ಚನ್ನಪಟ್ಟಣಗಳಲ್ಲಿ ಮತದಾರರ ಮದುವೆ, ನಾಮಕರಣ ಮತ್ತು ಊರಹಬ್ಬಗಳಿಗೆ ಭೇಟಿ ಕೊಟ್ಟು ಬಂದುಬಿಟ್ಟರೆ ಜನ ಓಟುಹಾಕುತ್ತಾರೆ ಎಂದು ಅದ್ಯಾವ ಪುಣ್ಯಾತ್ಮಗಳಿಗೆ ಭೇಟಿ ಕೊಟ್ಟು ಬಂದುಬಿಟ್ಟರೆ ಜನ ಓಟುಹಾಕುತ್ತಾರೆ ಎಂದು ಅದ್ಯಾವ ಪುಣ್ಯಾತ್ಮ ತಲೆ ತಿಕ್ಕಿದನೊ. ದಿನ ಬೆಳಗ್ಗೆಯಾದರೆ ಯಾರ ಮನೆಯ ಮದುವೆ-ನಾಮಕರಣಕ್ಕೆ ಹೋಗಬೇಕೆಂಬ ಚಿಂತೆಯಲ್ಲೇ ನಿಖಿಲ್ ತನ್ನ ರಾಜಕೀಯ ಬಾಲ್ಯಕ್ಕೆ ಕಾಲಿಟ್ಟಿದ್ದಾನೆ."

ಬೇರುಗಳು ಮಣ್ಣಿನ ಆಳಕ್ಕಿಳಿದಷ್ಟೂ ಬಿಡುವ ಕಾಯಿಗೆ ಪುಷ್ಟಿ ಹೆಚ್ಚು. ಮಣ್ಣಿನ ಘಮಲೂ ಯಥೇಚ್ಛ!

ಆದರೆ ದೇವೇಗೌಡರ ಮೊಮ್ಮಗ ನಿಖಿಲ್ ಗೌಡನ ವಿಷಯದಲ್ಲಿ ಇದು ಕೊಂಚ ಅತಿರೇಕ ಎನ್ನಿಸುವುದಕ್ಕೂ ಕಾರಣವಿದೆ. ಮೊನ್ನೆ ಚನ್ನಪಟ್ಟಣದ ಹಳ್ಳಿಯೊಂದಕ್ಕೆ ತಿಥಿಗೆಂದು ಬಂದಿದ್ದ ಕುಮಾರಣ್ಣನ ಕುಲಪುತ್ರ ನಿಖಿಲ್ ಗೌಡರಿಗೆ ಕಿತಾಪತಿ ವರದಿಗಾರರೊಬ್ಬರು ತಮಾಷೆಗೆಂದು; "ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ? ಮೊದಲ ಮುಖ್ಯಮಂತ್ರಿ ಯಾರು? ಕರ್ನಾಟಕದ ಏಕೀಕರಣವಾಗಿದ್ದು ಯಾವ ವರ್ಷದಲ್ಲಿ? ಎಷ್ಟು ಮಂದಿ ಕನ್ನಡಿಗರಿಗೆ ಜ್ಞಾನಪೀಠ ಸಿಕ್ಕಿದೆ? ಕುವೆಂಪು ಪದದ ಪೂರ್ಣ ವಿವರಣೆಯೇನು?" ಇತ್ಯಾದಿ ಪ್ರಶ್ನೆಗಳನ್ನಿಟ್ಟರೆ ನಿಖಿಲ್ ಗೌಡರ ಬಾಯಿಂದ ಒಂದುತ್ತರವೂ ಪತ್ತೆಯಿಲ್ಲವಂತೆ!

ರಾಜಕಾರಣಿಯೊಬ್ಬನಿಗೆ ಜನರಲ್ ನಾಲೆಡ್ಜ್ ಅಂದರೆ ಸಾಮಾನ್ಯ ಜ್ಞಾನ ಕಡ್ಡಾಯವೇನಲ್ಲವಲ್ಲ, ಇರಲಿ; ನಿಖಿಲ್ ಗೌಡ ದೇವೇಗೌಡರ ಮಣ್ಣಿನ ಪೀಳಿಗೆಯ ಮೂರನೇ ತಲೆಮಾರು. ತಾತ ಪ್ರಧಾನಿಯಾಗಿ, ಅಪ್ಪ ಮುಖ್ಯಮಂತ್ರಿಯಾಗಿ ಈಗ ಮೊಮ್ಮಗ ಕನಿಷ್ಠ ಎಮ್ಮೆಲ್ಲೆ ಕೂಡ ಆಗದೇಹೋದರೆ ಹೆಂಗೆ?

ನಿಖಿಲ್ ಗೌಡರ ಆರಂಗೇಟ್ರಮ್ ಅತ್ಯಂತ ವಿಜೃಂಭಣೆಯಿಂದಲೇ ನೆರವೇರುತ್ತಿದೆ. ತಂದೆ ಕುಮಾರಸ್ವಾಮಿಯ ರಾಜಕೀಯ ಉತ್ತರಾಧಿಕಾರಿಯಾಗಿ ನಿಖಿಲ್‌ಗೆ ಪಟ್ಟಾಭಿಷೇಕ ಮಾಡುವ ಸಕಲ ಸಿದ್ಧತೆಗಳೂ ಪೂರ್ಣಗೊಂಡಾಗಿದೆ. ಮುಂಬರುವ ವಿಧಾನಸಭಾ ಚುನಾವಣೆ ವೇಳೆಗೆ ನಿಖಿಲ್ ಗೌಡರ ವಯಸ್ಸೂ ಇಪ್ಪತ್ತೈದಾಗಿರುತ್ತದೆ. ಯೋಗೇಶ್ವರ್ ವಿರುದ್ಧ ಸರಿಯಾದ ಪ್ರತಿಸ್ಪರ್ಧಿಯಾಗಿ ನಿಖಿಲ್ ನಿಂತು ಗೆದ್ದನೆಂದರೆ ಅಲ್ಲಿಗೆ ಮಣ್ಣಿನ ಮಕ್ಕಳ ಮೂರನೇ ತಲೆಮಾರಿನ ಮಣ್ಣಿನ ಋಣಕ್ಕೂ ಅರ್ಥ ಬರುತ್ತದೆ. ದೇವೇಗೌಡರ ಜೀವಕ್ಕೂ ಶಾಂತಿ ಅಪ್ಪನ ಆತ್ಮಕ್ಕೂ ತೃಪ್ತಿ-


ಗೆಳೆಯನ ಜೊತೆ ನಿಖಿಲ್ ಗೌಡ

ಪ್ರಶ್ನೆಯೆಂದರೆ ಪಂಜರದ ಹುಲಿಗೆ ಬೇಟೆ ಕಲಿಸುವವರು ಯಾರು? ದೇವೇಗೌಡರು ಹಳ್ಳಿಗಾಡಿನ ಪಕ್ಕಾ ರಾಜಕಾರಣಿ. ಅವರಿಗೆ ಚುನಾವಣೆ ಗೊತ್ತು. ಪಕ್ಷ ಕಟ್ಟುವುದೂ ಗೊತ್ತು, ಪಕ್ಷ ಒಡೆಯುವುದೂ ಗೊತ್ತು, ಹೋರಾಟ ಕಟ್ಟುವುದೂ ಗೊತ್ತು, ಕಟ್ಟಿದ ಹೋರಾಟವನ್ನು ಪಳಗಿಸುವುದೂ ಗೊತ್ತು, ಅಧಿಕಾರ ಗೊತ್ತು ಬೀದಿ ರಾಜಕಾರಣವೂ ಕರತಲಾಮಲಕ. ಇಂಥಾ ತಂದೆಗೆ ಎಂಥಾ ಮಗ ಎಂಬಂತೆ ಉದ್ಭವಿಸಿದ್ದು ಕುಮಾರಸ್ವಾಮಿ!

ತಂದೆಯ ಮಣ್ಣಿನ ಮಗನ ಗುಣಲಕ್ಷಣಗಳಿಗೆ ಹೋಲಿಸಿದರೆ ಕುಮಾರಸ್ವಾಮಿಯದು ವ್ಯತಿರಿಕ್ತ ವ್ಯಕ್ತಿತ್ವ. ಒಂದೆಡೆ ರಿಯಲ್ ಎಸ್ಟೇಟ್, ಮತ್ತೊಂದೆಡೆ ಸಿನಿಮಾ ಶೋಕಿ, ಜೊತೆಗೆ ಇಸ್ಪೀಟು, ಡೀಲು, ಲೋಲುಪ್ತ ಗೆಳೆಯರು ಇತ್ಯಾದಿಗಳೆಲ್ಲದರ ಹದವಾದ ಮಿಶ್ರಣವೇ ಕುಮಾರಣ್ಣ. ತಂದೆಯ ಹೋರಾಟ ಗುಣ, ಸಂಘಟನಾ ಚಾತುರ್ಯ, ಅವಿಶ್ರಾಂತ ಓಡಾಟ ಯಾವುದನ್ನೂ ರೂಢಿಸಿಕೊಳ್ಳದೆ ರಾತ್ರೋರಾತ್ರಿ ಮುಖ್ಯಮಂತ್ರಿಯಾದ ಕುಮಾರಸ್ವಾಮಿಯಿಂದಾಗಿ ಪದೇಪದೇ ಫಜೀತಿಗೀಡಾಗಿದ್ದು ದೇವೇಗೌಡ.

ಮುಖ್ಯಮಂತ್ರಿಯಾದ ಹೊಸದರಲ್ಲೇ ಕುಮಾರಣ್ಣ ವಿಚಿತ್ರ ಹೇಳಿಕೆಯೊಂದನ್ನು ಕೊಟ್ಟರು. ಜಾತ್ಯತೀತ ಅನ್ನೋ ಶಬ್ದಕ್ಕೆ ಅರ್ಥ ಏನು ಅನ್ನೋದೇ ನನಗೆ ಗೊತ್ತಿಲ್ಲ, ಯಾವ ಡಿಕ್ಷನರಿ ತಡಕಾಡಿದರೂ ಜಾತ್ಯತೀತ ಪದಕ್ಕೆ ಅರ್ಥ ಸಿಗುತ್ತಿಲ್ಲ... ಎಂದುಬಿಟ್ಟರು!


ಸಮಾಧಾನಕರ ಸಂಗತಿಯೇನೆಂದರೆ ದುಡುಕಿನಲ್ಲಿ ತಾನು ಕೊಟ್ಟ ಹೇಳಿಕೆಯ ವಿರೋಧಾಭಾಸ, ಅರಿವಿಲ್ಲದೆ ಮಾಡುವ ಯಡವಟ್ಟುಗಳನ್ನು ಅರ್ಥ ಮಾಡಿಕೊಂಡು ಕನಿಷ್ಠ ತಿದ್ದಿಕೊಳ್ಳುವ ಪ್ರಾಮಾಣಿಕತೆಯಾದರೂ ಕುಮಾರಣ್ಣನಿಗೆ ಇದೆ. ಈಗ ನಿಖಿಲ್ ಗೌಡನ ಸರದಿ. ಇನ್ನೂ ಬುದ್ಧಿ ಬಲಿಯದ, ಲೋಕಜ್ಞಾನ ಗೊತ್ತಿಲ್ಲದ, ರಾಜಕೀಯದ ತಲೆಬುಡ ಅರಿಯದ ನಿಖಿಲ್ ಗೌಡನನ್ನು ಇಷ್ಟೊಂದು ಆತುರಾತುರವಾಗಿ ರಾಜಕೀಯಕ್ಕೆ ಇಳಿಸುವ ತುರ್ತಾದರೂ ಏನಿತ್ತು? ತನ್ನ ಪಿತ್ರಾರ್ಜಿತಸೊತ್ತಾದ ಜೆಡಿಎಸ್ ಪಕ್ಷವನ್ನು ಮುನ್ನಡೆಸುವ ಶಕ್ತಿ ಚಾತುರ್ಯ ಮುಂದಾವತ್ತಾದರೂ ಆತನಿಗೆ ದಕ್ಕುತ್ತಾ? ತಾತ ದೇವೇಗೌಡರಷ್ಟಲ್ಲದೇ ಹೋದರೂ ತನ್ನ ಮಟ್ಟಿಗೆ ಸಣ್ಣದೊಂದು ಹೋರಾಟ ಕಟ್ಟುವಷ್ಟು ಸಾಮರ್ಥ್ಯವಾದರೂ ಆತನಿಗಿದೆಯೇ? ಮಗ ನಿಖಿಲ್ ಗೌಡನನ್ನು ರಾಜಕೀಯಕ್ಕೆ ತಂದು ತನ್ನ ಉತ್ತರಾಧಿಕಾರಿ ಎಂದು ಈಗಲೇ ಘೋಷಿಸುವ ಯಾವ ಒತ್ತಡಕ್ಕೆ ಕುಮಾರಸ್ವಾಮಿ ಸಿಲುಕಿದ್ದಾರೆ? ಇದು



ನಿಖಿಲ್ ದಾಳಿ ಮಾಡಿದ ಹೋಟೆಲ್ ಎಂಪೈರ್

ದೇವೇಗೌಡರ ಕೌಟುಂಬಿಕ ಅಧಿಕಾರದಾಹದ ಆರಂಭವೆ? ಮುಂದೆ ಎಚ್.ಡಿ. ರೇವಣ್ಣನ ಮಗ ಪ್ರಜ್ವಲ್ ಕೂಡ ನಿಖಿಲ್ ಗೌಡನ ಪ್ರತಿಸ್ಪರ್ಧಿಯಾಗಿ ರಾಜಕೀಯಕ್ಕಿಳಿಯಬಹುದಾ? ರೇವಣ್ಣನವರ ಪತ್ನಿ ಭವಾನಿ, ದೇವೇಗೌಡರ ಹಿರಿಯ ಪುತ್ರ ಬಾಲಕೃಷ್ಣೇ ಗೌಡ, ದೇವೇಗೌಡರ ಅಳಿಯ ಡಾ. ಮಂಜುನಾಥ್ ತಮ್ಮ ಬಾಲಕೃಷ್ಣ: ಹೀಗೆ ಗೌಡರ ಸಂಬಂಧಿಗಳೆಲ್ಲ ಮುಂಬರುವ ಚುನಾವಣೆಯಲ್ಲಿ ಒಂದೊಂದು ಕ್ಷೇತ್ರಕ್ಕೆ ಅಮರಿಕೊಳ್ಳುವ ಮುನ್ಸೂಚನೆಯಾಗಿ ನಿಖಿಲ್‌ನ ಆರಗೇಟ್ರಂ ನಡೆಯುತ್ತಿದೆಯಾ?

ಸದ್ಯ ಜೆಡಿಎಸ್ ಮಟ್ಟಿಗಷ್ಟೇ ಅಲ್ಲ ರಾಜಕಾರಣದ ಅನೇಕ ಲಾಬಿಗಳಲ್ಲಿ ಇದೇ ಚರ್ಚೆಯಾಗುತ್ತಿದೆ. Of course ದೇವೇಗೌಡರ ಮೇಲಿನ ಗೌರವಕ್ಕೋ, ಕುಮಾರಣ್ಣನ ಮಗನೆಂಬ ಕಾರಣಕ್ಕೋ ಹಳೇ ಮೈಸೂರು ಪ್ರಾಂತ್ಯದ ಒಕ್ಕಲಿಗರು ನಿಖಿಲ್ ಗೌಡನಿಗೆ ಜೈಕೂಗಬಹುದು. ಆದರೆ ಅದಷ್ಟೇ ರಾಜಕಾರಣದ ಸಾಮರ್ಥ್ಯವಲ್ಲ. ರಾಜಕೀಯಕ್ಕೆ ಕಾಲಿಡುವುದಕ್ಕೂ ಮೊದಲು ಕುಮಾರಣ್ಣನಿಗೆ ಗೊತ್ತಿದ್ದದ್ದು ರಿಯಲ್ ಎಸ್ಟೇಟ್ ಡೀಲುಗಾರಿಕೆ ಮತ್ತು ಸಿನಿಮಾ ಹಂಚಿಕೆ ಮಾತ್ರ. ಅದೇ ಕುಮಾರಣ್ಣನ ಅಸಲೀ ತಾಕತ್ತಾಯಿತು. ಆದರೆ ನಿಖಿಲ್ ಗೌಡ ಹಾಗಲ್ಲ.


ದೇವೇಗೌಡ

ಸುಖ, ಐಷಾರಾಮಿ, ದುಡ್ಡು, ಶೋಕಿಗಳೆಲ್ಲವೂ ಹೇಗೆ ಮನುಷ್ಯನನ್ನು ನಾಶ ಮಾಡುತ್ತದೆ ಎಂಬುದಕ್ಕೆ ನಿದರ್ಶನ ಅಂತಿದ್ದರೆ ಅದು ನಿಖಿಲ್ ಗೌಡ. ಸುಖಪಟ್ಟೇ ಜಾಫರ್ ಷರೀಫರ ಮಗ ಮುನ್ನಾ ನಾಶವಾದ. ಹೆಗಡೆ ಮಕ್ಕಳನ್ನು ಕುಡಿತ ನುಂಗಿ ಹಾಕಿತು. ದುಡ್ಡಿನ ಆಶೆಗೆ ಬಿದ್ದ ಅರಸು ಪುತ್ರಿಯ ದುರಂತ, ಕೆಂಗಲ್ ಹನುಮಂತಯ್ಯನವರ ಮೊಮ್ಮಗ ದರೋಡೆಗಿಳಿದ ಕರ್ಮ; ಹೀಗೆ ಸಾಗುವ ಮುತ್ಸದ್ದಿಗಳ ಮುದ್ದು ಮಕ್ಕಳ ಅವನತಿಯನ್ನು ಇತ್ತೀಚೆಗೆ ಜನ ಮೆಲುಕು ಹಾಕುವಂತಾಗಿದ್ದೇ ನಿಖಿಲ್ ಗೌಡನ ಮೂಲಕ.

ಎಸ್ಸೆಸ್ಸೆಲ್ಸಿ ಮುಗಿಸಿ ವಿವಿಪುರಂನ ಕುಖ್ಯಾತ ಜೈನ್ ಕಾಲೇಜು ಸೇರಿದ ನಿಖಿಲ್ ತಲೆಗೆ ಓದು ಹತ್ತಲೇ ಇಲ್ಲ, ಹೇಗೋ ಪಿಯುಸಿ ಮುಗಿಸಿ ಬಿಬಿಎಂ ಕೋರ್ಸಿಗೆ ಜಮೆಯಾದರೂ, ನಿಖಿಲ್ ಪದವೀಧರನಾಗಲೇ ಇಲ್ಲ, ದುಡ್ಡಿಗೆ ಬರವಿಲ್ಲ ಎಂದ ಮೇಲೆ ಶೋಕಿಗಾಗಲಿ, ಗೆಳೆಯರಿಗಾಗಲಿ ಕೊರತೆಯಿಲ್ಲ, ವಿಪರೀತ ಕುಡಿತಕ್ಕೆ ಬಿದ್ದ ನಿಖಿಲ್ ತಂದೆ ಮುಖ್ಯಮಂತ್ರಿಯಾಗಿದ್ದಾಗಲೇ ಚರ್ಚ್ ಸ್ಟ್ರೀಟ್‌ನಲ್ಲಿರುವ ಎಂಪೈರ್ ಹೋಟೆಲ್ ಮೇಲೆ ನಡುರಾತ್ರಿ ನುಗ್ಗಿ ದಾಂಧಲೆಗೈದ. ಅದು 2006 ರ ಅಕ್ಟೋಬರ್ 26 ನೇ ತಾರೀಖು. ಅದೇನಾಯಿತೋ ಚರ್ಚ್ ಸ್ಟ್ರೀಟ್‌ನ ಎಂಪೈರ್ ಹೋಟೆಲ್‌ಗೆ ನಿಖಿಲ್ ಗ್ಯಾಂಗ್ ಸಮೇತ ನುಗ್ಗಿ ಸಿಕ್ಕಸಿಕ್ಕವರನ್ನು ಹಿಡಿದು ಬಡಿದ. ಆತನಿಗೆ ಆಗಿನ್ನೂ 20 ರ ವಯಸ್ಸು!

ಆ ವಯಸ್ಸಿಗೇ ಕುಡಿದು ಚಿತ್ತಾಗಿ ನಡುರಾತ್ರಿ ದಾಂಧಲೆಗಿಳಿದ ನಿಖಿಲ್ ಗೌಡನ ಪುಂಡಾಟಿಕೆಯನ್ನು ತಂದೆ ಕುಮಾರಸ್ವಾಮಿಯೇ ಸಮರ್ಥಿಸಲಾಗಲಿಲ್ಲ, ತಂದೆ ಕೊಡಿಸಿದ್ದ ಹಮ್ಮರ್ ಕಾರು, ಐಷಾರಾಮಿ ಬೈಕು, ಶ್ರೀಮಂತ ಗೆಳೆಯರು, ಪಬ್ಬು, ಡಿಸ್ಕೋಥೇಕು ಇತ್ಯಾದಿ ಶೋಕಿ ಬಿಟ್ಟರೆ ನಿಖಿಲ್ ಯಾವತ್ತಿಗೂ ದಿನಪತ್ರಿಕೆ ಓದುವುದನ್ನಾಗಲಿ, ನ್ಯೂಸ್ ಚಾನಲ್‌ಗಳನ್ನು ನೋಡುವುದನ್ನಾಗಲಿ, ಪುಸ್ತಕ ಓದುವುದನ್ನಾಗಲಿ ಮಾಡಿದವನಲ್ಲ, ಇದೇ ಹೊತ್ತಿಗೆ ತಂದೆ ಕುಮಾರಸ್ವಾಮಿ ಬೇರೆ ಸಾಂಸಾರಿಕ ತಾಪತ್ರಯಕ್ಕೆ ಸಿಲುಕಿದ್ದು ತಾಯಿಯ ಪರ ನಿಂತ ನಿಖಿಲ್‌ನನ್ನು ಓರ್ವ ಕ್ರುದ್ಧ ಕ್ಷೋಭಿತ, ಪ್ರಕ್ಷುಬ್ಧ ಮನಸ್ಥಿತಿಯ ಆ್ಯಂಗ್ರಿ ಯಂಗ್‌ಮ್ಯಾನ್ ಪಾತ್ರಕ್ಕೆ ತಂದು ನಿಲ್ಲಿಸಿತು. ಬಹುಶಃ ಪತ್ನಿ ಅನಿತಕ್ಕನನ್ನು ಸಂತೈಸಲೆಂದೇ ಕುಮಾರಣ್ಣ ಆತುರಾತುರವಾಗಿ ಮಗನಿಗೆ ತನ್ನ ಉತ್ತರಾಧಿಕಾರಿ ಪಟ್ಟ ಕಟ್ಟಿರಬಹುದೆ?

ಸದ್ಯ ನಿಖಿಲ್ ಗೌಡನ ರಾಜಕೀಯ ಆರಂಗೇಟ್ರಮ್ ಅದ್ದೂರಿಯಾಗಿ ನಡೆಯುತ್ತಿದೆ.
ರಾಮನಗರ-ಚನ್ನಪಟ್ಟಣಗಳಲ್ಲಿ ಮತದಾರರ ಮದುವೆ, ನಾಮಕರಣ ಮತ್ತು ಊರಹಬ್ಬಗಳಿಗೆ ಭೇಟಿ ಕೊಟ್ಟು ಬಂದುಬಿಟ್ಟರೆ ಜನ ಓಟುಹಾಕುತ್ತಾರೆ ಎಂದು ಅದ್ಯಾವ ಪುಣ್ಯಾತ್ಮ ತಲೆ ತಿಕ್ಕಿದನೊ. ದಿನ ಬೆಳಗ್ಗೆಯಾದರೆ ಯಾರ ಮನೆಯ ಮದುವೆ-ನಾಮಕರಣಕ್ಕೆ ಹೋಗಬೇಕೆಂಬ ಚಿಂತೆಯಲ್ಲೇ ನಿಖಿಲ್ ತನ್ನ ರಾಜಕೀಯ ಬಾಲ್ಯಕ್ಕೆ ಕಾಲಿಟ್ಟಿದ್ದಾನೆ. ಹಾಗೊಮ್ಮೆ ಚನ್ನಪಟ್ಟಣಕ್ಕೋ ರಾಮನಗರಕ್ಕೋ ನಿಖಿಲ್ ನಿಂತನೆಂದರೆ ಆತನ ವಿರುದ್ಧ ಸ್ಪರ್ಧಿಸಲು ಡಿ.ಕೆ ತಮ್ಮ ಸೂರಿ ಅಣಿಯಾಗಿದ್ದಾನೆ.

ಬಡಿದಾಟ, ಡೀಲುಗಾರಿಕೆ, ರೌಡಿಸಂ ಎಲ್ಲವನ್ನೂ ಬಳಸಿ ಚುನಾವಣೆ ಗೆಲ್ಲುವ ಡಿ.ಕೆ.ಯ ಕೇಡಿ ತಮ್ಮ ಸೂರಿಯೆಲ್ಲಿ? ಶೋಕಿಯಲ್ಲೇ ಬೆಳೆದ ನಿಖಿಲ್ ಗೌಡನೆಲ್ಲಿ?

ರಾಹುಲ್ ಗಾಂಧಿಯ ರಾಜಕೀಯ ಆರಂಗೇಟ್ರಂಗೂ ನಿಖಿಲ್ ಗೌಡನ ಆರಂಗೇಟ್ರಂಗೂ ಅಜಗಜಾಂತರ ವ್ಯತ್ಯಾಸವಿದೆ. ಶೋಷಿತ ಮಹಿಳೆಯರು, ಬುಡಕಟ್ಟು ನಿರ್ಗತಿಕರು, ಬೀದಿಗೆ ಬಿದ್ದ ರೈತರ ಮಧ್ಯೆ ಓಡಾಡಿಕೊಂಡಿದ್ದು ಅವರ ಪರ ಬೀದಿಗಿಳಿದು ಹೋರಾಡುವ ರಾಹುಲ್ ಗಾಂಧಿಯ ರಾಜಕೀಯಕ್ಕೂ, ಮದುವೆ, ತಿಥಿಗಳಲ್ಲಿ ಉಂಡು ಬರುವ ನಿಖಿಲ್ ಗೌಡನ ಗೌಡಿಕೆ ರಾಜಕಾರಣಕ್ಕೂ ಎಲ್ಲಿಂದೆಲ್ಲಿಯ ವ್ಯತ್ಯಾಸವಲ್ಲವೆ?

ರೈತನ ಕಷ್ಟ ಗೊತ್ತಿಲ್ಲದೆ, ದಲಿತರ ದುಮ್ಮಾನದ ಅರಿವಿಲ್ಲದೆ, ಕನಿಷ್ಠ ಸಮಾಜಶಾಸ್ತ್ರದ ಮೂಲ ಪಾಠ ಕೂಡ ಅರಿಯದೆ ರಾಜಕೀಯಕ್ಕೆ ಬಂದನೆಂದರೆ ನಿಖಿಲ್ ಮತ್ತೊಬ್ಬ ಪುಢಾರಿ ಮಾತ್ರವೇ ಆಗಬಹುದೇ ಹೊರತು ಓರ್ವ ಹೋರಾಟಗಾರನಾಗುವ, ಜನನಾಯಕನಾಗುವ ಮಾತು ದೂರವೆ.

• ರಾ.ಸೋ.

ತನ್ನ ಪಲ್ಲಂಗದಾಟಕ್ಕೆ ಹುಡುಗಿಯರನ್ನು ಸೆಟ್ ಮಾಡಿಕೊಡಲು ನವಾಜ್ ಬೇಗಂ ಕವಾಜ್ ಎಂಬ ಘರವಾಲಿ ಮಹಿಳೆಯನ್ನು ಈತ ನೇಮಕ ಮಾಡಿಕೊಂಡಿದ್ದ. ಮನೆಮುರುಕ ನವಾಜ್ ಬೇಗಂ ಕವಾಜ್ ಎಂಬ ಹೆಣ್ಣಿನ ಸಹವಾಸದಿಂದ ಪೂರ್ಣ ...ಾರಿಬಿಟ್ಟ ಸಲ್ಮಾ ಸದಾಶಿವಾನಂದನ ಮಂಚಕ್ಕೆ ಫಿಕ್ಸ್ ಆಗುತ್ತಲೇ ಮೊದಲನೆಯವಳನ್ನು ಮುಗಿಸುವ ಸಂಚಿಗೆ ನಿಂತ.


ಕಾಮುಕ ಸದಾಶಿವಾನಂದ

ಗದಗ

ಕಾಮುಕ ವ್ಯಾಪಾರಿ ಸ್ಟೆಪ್ನಿಗಳಿಗಾಗಿ ಹೆಂಡತಿ ಮಕ್ಕಳಿಗೆ ಸ್ಕೆಚ್ ಹಾಕಿದ!

...ಕಚ್ಚೆಹರುಕ ಜವಳಿ ವ್ಯಾಪಾರಿಯ ಸೀರಿಯಲ್ ಸ್ಟೆಪ್ನಿ ...ಂದಿಗಿನ ರಂಗಿನಾಟಕ್ಕೆ ಅಡ್ಡಿಯಾದ ಹೆಂಡತಿ ಮತ್ತು ...ಳನ್ನು ಸೈಲೆಂಟಾಗಿ ಮುಗಿಸುವ ಸ್ಕೆಚ್ ಹಾಕಿದ್ದ ...ೀರಿಯಸ್ ಸ್ಟೋರಿಗೆ ಅಕ್ಷರಶಃ ಗದುಗಿನ ಜನರು ...ರಿಗೊಂಡಿದ್ದಾರೆ.

...ಪ್ರೀತಿಸಿ ಮದುವೆಯಾಗಿ, ಐದು ಮಕ್ಕಳನ್ನು ಪಡೆದ ಸಿಲ್ಕ್ ವ್ಯಾಪಾರಿ ಸದಾಶಿವಾನಂದ ದಂಡಿನ ಬರೋಬ್ಬರಿ ...ನ್ನೂರು ವರ್ಷ ತನ್ನ ಪತ್ನಿಯೊಂದಿಗೆ ಸಂಸಾರ ನಡೆಸಿದ್ದರೂ ... ತೋರಿಕೆಗೆ ಮಾತ್ರ. ಸೀರೆಗಳ ಮಾಡಲ್‌ನಂತೆ ಸದಾ ...ಗಳನ್ನ ಬದಲಿಸುವುದೇ ತನ್ನ ಫುಲ್ ಟೈಮ್ ಕಾಯಕ ...ಗಿಸಿಕೊಂಡಿರುವ ಸದಾಶಿವಾನಂದ ತನ್ನ ನಶ್ತಿನ ಧ್ಯಾನಕ್ಕೆ ...ನವಂತ ಹೆಂಡತಿ, ಮಕ್ಕಳನ್ನು ಬೀದಿಪಾಲು ಮಾಡಿರುವ ... ಕಾಮುಕ.


ಪ್ರೀತಿಸಿ ಮದುವೆಯಾದವಳನ್ನೇ ನಿತ್ಯ ಬಡಿದ...

"ನನಗೆ ಆವಾಗಲೆ ಸದಾಶಿವಾನಂದನ ನಿಜರೂಪ ...ದ್ದರೆ ಈ ಕಷ್ಟ ಅನುಭವಿಸುವಂತಹ ಸ್ಥಿತಿ ಬರುತ್ತಿರ ...ಿ" ಎಂದು ಲತಾ ಈಗ ಮರುಗುತ್ತಿದ್ದಾಳೆ. ಈಗ್ಗೆ ...ನ್ನೂರು ವರ್ಷಗಳ ಹಿಂದೆ ಜವಳಿ ಗಲ್ಲಿಯ ಬಡ ಮುಸ್ಲಿಂ ...ಂಬದಲ್ಲಿ ಹಿರಿಮಗಳಾಗಿ ಹುಟ್ಟಿದ್ದ ಫೈರೋಜಾ ...ಶಿವಾನಂದನ ಪ್ರೇಮದಾಟವನ್ನು ನಂಬಿದಳು. ತನ್ನ ...ಂಬದ ವಿರೋಧ ಕಟ್ಟಿಕೊಂಡು ಮದುವೆಗೆ ಸಿದ್ಧಳಾದ ...ೋಜಾ ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಲತಾ ಎಂಬ ...ರೂಪ ತಾಳಿದಳು. ಸದಾಶಿವಾನಂದನಿಗೂ ಇವಳನ್ನು ...ವೆಯಾಗುವುದಕ್ಕೆ ಕುಟುಂಬದಲ್ಲಿ ವಿರೋಧವಿತ್ತು. ...ಾಗಿ ಇವರಿಬ್ಬರೂ ಮದುವೆಯಾದ ನಂತರ ಹಳೇ ...ಬ್ಬಳ್ಳಿಯ ಗಲ್ಲಿಯೊಂದರಲ್ಲಿ ಮನೆಮಾಡಿಕೊಂಡು ಒಂದು ... ಕಾಲ ಕಳೆದರು. ನಂತರ ಗದಗಿನಲ್ಲಿ ಆರು ತಿಂಗಳು ... ಮನೆಯಲ್ಲೇ ನವಜೀವನ ಸಾಗಿಸಿದರು.

...ಲಿಂಗ ದೀಕ್ಷೆ ಪಡೆದ ಫೈರೋಜಾ ಲಿಂಗಾಯತ ಲತಾ ...ದ್ದಳು. ಆಗ ಅನಿವಾರ್ಯವಾಗಿ ಸದಾಶಿವಾನಂದನ ...ಂಬ ಇವರಿಬ್ಬರನ್ನು ತಮ್ಮ ಮನೆಗೆ ಸೇರಿಸಿಕೊಂಡಿತು. ... ಅನ್ಯಜಾತಿಗೆ ಸೇರಿದವಳು ಅನ್ನೋದನ್ನ ಬಿಟ್ಟರೆ, ...ದಂತೆ ಐದಾರು ವರ್ಷಗಳ ಕಾಲ ಯಾವ ತೊಂದರೆಗಳೂ ...ಗೆ ಎದುರಾಗಲಿಲ್ಲ. ಇವಳಿಗೂ ಸದಾಶಿವಾನಂದನ ...ರುಕತನದ ಬಗ್ಗೆ ತಿಳಿದಿರಲಿಲ್ಲ. ಬಡವಳಿಗೆ ಬಾಳು ... ಪುಣ್ಯಾತ್ಮ ಈತ ಎಂದು ಗಟ್ಟಿಯಾಗಿ ನಂಬಿದ್ದಳು. ..., ಕಾಲಕಳೆದಂತೆ ಈ ಪುಣ್ಯಾತ್ಮನ ಪವಾಡಗಳು ...ೊಂದಾಗಿ ಬೆತ್ತಲಾಗುತ್ತಾ ಹೋದವು. ಇವನ ನಡತೆಯ ...ಯಾರ ಬಳಿಯೂ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿ ಲತಾ ...ಲ್ಲ. ಯಾಕೆಂದರೆ, ಸ್ವತಃ ಸದಾಶಿವಾನಂದನ ತಾಯಿ ...ತೆವ್ವ ಮಗನ ಎಲ್ಲಾ ಹಲ್ಕಾ ಕೆಲಸಕ್ಕೆ ಬೆನ್ನೆಲುಬಾಗಿ ...ದ್ದಳು. ಅಲ್ಲದೆ, ಮಗನಿಗೆ ಲತಾಳನ್ನ ಹೊರದಬ್ಬಿ ...ತಿಯ ಇನ್ನೊಂದು ಮದುವೆಯಾಗುವಂತೆ ಪ್ರೇರೇಪಿಸು ...ು.

...ಮನೆಯವರ ಈ ಬೆಂಬಲದಿಂದಲೇ ಲತಾಳ ಮೇಲೆ ...ಂದಿಲ್ಲೊಂದು ಕಾರಣಕ್ಕೆ ದೈಹಿಕವಾಗಿ ಹಲ್ಲೆ ಮಾಡುತ್ತಿದ್ದ ಸದಾಶಿವಾನಂದ. ಅಷ್ಟೇ ಅಲ್ಲ, ಅವಳನ್ನ ಎಷ್ಟೋ ಬಾರಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿಗೂ ತಂದು ನಿಲ್ಲಿಸಿದ್ದ. ಇವನಿಂದ ಹಲ್ಲೆಗೊಳಗಾಗಿ ಅದೆಷ್ಟೋ ಬಾರಿ ಆಸ್ಪತ್ರೆ ಸೇರಿದ ಲತಾಳ ಮೈಮೇಲೆ ಇಂದಿಗೂ ಗಾಯದ ಗುರುತುಗಳು ಮಾಸದೆ ಹಾಗೇ ಉಳಿದಿವೆ. ಇಷ್ಟೆಲ್ಲಾ ಆದರೂ, ತನ್ನ ಗಂಡನ ಮನೆಯಲ್ಲಿ ಕೂಲಿ ಆಳಿನಂತೆ ಬದುಕು ಕಳೆದ ಲತಾ ಜವಳಿಗಲ್ಲಿಯ ಗಾಯತ್ರಿ ಸಿಲ್ಕ್ ಹೌಸ್‌ನಲ್ಲಿ ಗಂಡನ ಸರಿಸಮನಾಗಿ ದುಡಿದು ಐದು ಮಕ್ಕಳನ್ನು ಸಾಕಿ ಬೆಳೆಸಿದ್ದಾಳೆ. ಅವರಿಗೆಲ್ಲಾ ಉತ್ತಮ ಶಿಕ್ಷಣ ಕೊಡಿಸಿದ್ದಾಳೆ.

ಅಂಗಡಿಗೆ ಬರುವ ಗಿರಾಕಿಗಳು ಮತ್ತು ಕೆಲಸಕ್ಕೆ ಬರುವ ಹುಡುಗಿಯರನ್ನು ತನ್ನ ಕಾಮದಾಟಕ್ಕೆ ಬಳಸಿಕೊಳ್ಳಲೆಂದೇ ಶಿವಾನಂದ ಲತಾಳಿಗೆ ಬೇರೊಂದು ಅಂಗಡಿ ಮಾಡಿಕೊಟ್ಟ. ತನ್ನ ಮಕ್ಕಳು ಒಂದು ದಿನ ಅಂಗಡಿಯಲ್ಲಿ ಹೆಚ್ಚು ಹೊತ್ತು ನಿಲ್ಲಿಸಿಕೊಳ್ಳದೆ ಸಾಗಹಾಕುತ್ತಿದ್ದ.


ಬೀದಿಪಾಲಾದ ಲತಾ ಮತ್ತು ಮಕ್ಕಳು

ಭಯದಲ್ಲೇ ಬದುಕಿದ ಕುಡಿಗಳು

ಈ ದಂಪತಿಯ ಐವರು ಮಕ್ಕಳಲ್ಲಿ ಒಬ್ಬರೂ ತಂದೆಯ ಪ್ರೀತಿಯ ಸುಖವನ್ನು ಒಂದು ಕ್ಷಣವೂ ಅನುಭವಿಸಿಲ್ಲ. ಹಿರಿಮಗ ಮಹಾಂತೇಶ ವಿದ್ಯಾಭ್ಯಾಸದ ಜೊತೆಗೆ ತಂದೆಗೆ ವ್ಯಾಪಾರದಲ್ಲಿ ಸಹಾಯ ಮಾಡಲು ಹೋಗಿ ಅವನ ಪವಾಡಗಳನ್ನು ನಿತ್ಯ ಕಂಡು ರೋಸಿಹೋಗಿದ್ದಾನೆ. ಅದನ್ನು ತಡೆಯಲು ಹೋಗಿ ತಂದೆಯಿಂದ ಏಟು ತಿಂದಿದ್ದಾನೆ. ಕೊನೆಗೆ ಕುಟುಂಬದಿಂದಲೇ ಹೊರಬಂದು ಪ್ರೇಮ ವಿವಾಹವಾಗಿ ಗುಲ್ಬರ್ಗಾದಲ್ಲಿ ನೆಲೆಸಿದ್ದಾನೆ. ಎರಡನೇ ಮಗಳು ಪದ್ಮಿನಿ ಗದಗಿನಲ್ಲೇ ಬಿ.ಇ ಅಭ್ಯಾಸ ಮಾಡುತ್ತಿದ್ದಾಳೆ. ಅತಿ ಹೆಚ್ಚು ಕಷ್ಟ ಅನುಭವಿಸಿದ ಮುಗ್ಧ ಹುಡುಗಿಯೇ ಈಕೆ. ರಾತ್ರಿ ಹೊತ್ತು ಕುಡಿದ ಅಮಲಿನಲ್ಲಿ ತಂದೆಯಿಂದ ಸದಾ ಹಲ್ಲೆಗೊಳಗಾಗುತ್ತಿದ್ದ ಪದ್ಮಿನಿ ತಂದೆಯ ಪ್ರೀತಿಯ ಸಂಕೇತವೆಂಬಂತೆ ಕೈಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾಳೆ. ಮಗಳ ಕೈಯನ್ನೇ ಮುರಿದ ಸದಾಶಿವಾನಂದ ತನ್ನ ಇನ್ನೊಬ್ಬ ಮಗಳು ಸುಕನ್ಯಾಳಿಗೆ ಸಾಕಷ್ಟು ಚಿತ್ರಹಿಂಸೆ ನೀಡಿದ್ದಾನೆ. ಡಿಪ್ಲೋಮಾ ಇ ಅಂಡ್ ಸಿ ಓದುತ್ತಿರುವ ಇವಳ ಗೆಳತಿಯರ್ಯಾರೂ ಈಕೆಯ ಮನೆಯತ್ತ ಸುಳಿಯುವುದಿಲ್ಲ. ಅಷ್ಟೇ ಏಕೆ, ಇವಳ ಶಾಲೆಯ ಶಿಕ್ಷಕಿಯರ ಮೇಲೂ ತನ್ನ ವಕ್ರದೃಷ್ಟಿ ಬೀರುವ ಸದಾಶಿವಾನಂದ ತನ್ನ ಮಕ್ಕಳ್ಯಾರೂ ಸಮಾಜದಲ್ಲಿ ತಲೆಯೆತ್ತಿ ಓಡಾಡದಂತಹ ಸ್ಥಿತಿ ನಿರ್ಮಾಣ ಮಾಡಿದ್ದಾನೆ.


ಕಾಮುಕನೊಂದಿಗೆ ಮದುವೆ

ಅಪ್ಪನಂತೆ ಮಗ!

ಸದಾಶಿವಾನಂದನ ತಂದೆ ಕೂಡ ಇಬ್ಬರು ಹೆಂಡಿರ ಸರದಾರನಾಗಿದ್ದು ಬರೋಬ್ಬರಿ 14 ಮಕ್ಕಳ ತಂದೆಯಾಗಿದ್ದ. ಅದರಲ್ಲಿ ಒಂಭತ್ತನೆ ಮತ್ತು ಕೊನೆಯ ಮಗನೇ ಈ ವಿಕೃತ ಕಾಮಿ ಸದಾ-ಶಿವಾ-ನಂದ. ಗದುಗಿನ ಕಳಸಾಪುರ ರೋಡಿನ ಶಿವಾನಂದ ಮಠದ ಭಾಗದಲ್ಲಿ ಪ್ರಭಾವೀ ಎನಿಸಿಕೊಂಡಿರುವ ಕಾಶಪ್ಪ ದಂಡಿನ ಫ್ಯಾಮಿಲಿಯ ಮೂಲ ಕಸುಬೇ ಜವಳಿ ವ್ಯಾಪಾರ. ಒಂದು ಕಾಲದಲ್ಲಿ ಅವಿಭಕ್ತ ಕುಟುಂಬ ಎಂದು ಹೆಸರು ಮಾಡಿದ್ದರೂ ಈಗ ಅದು ಉಳಿದಿಲ್ಲ.

ಜವಳಿ ವ್ಯಾಪಾರದ ಜೊತೆಗೆ ರಿಯಲ್ ಎಸ್ಟೇಟ್, ಲೇವಾದೇವಿ ಹಾಗೂ ಕಪ್ಪತಗುಡ್ಡದ ಕಳಸಾಪುರ ಬಳಿ ಕೆಲಕಾಲ ಮೈನಿಂಗ್ ದಂಧೆಯಲ್ಲೂ ಹಣಮಾಡಿರುವ ಸದಾಶಿವಾನಂದ ತಾನು ದುಡಿದ ಹಣದಲ್ಲಿ ತನ್ನ ಹೆಂಡತಿ-ಮಕ್ಕಳಿಗೆ ಖರ್ಚು ಮಾಡಿದ್ದಕ್ಕಿಂತ ತನ್ನ ಸ್ಟೆಪ್ನಿಗಳಿಗೆ ಸುರಿದಿದ್ದೇ ಜಾಸ್ತಿ. ಅಂಗಡಿಯ ಪಕ್ಕದಲ್ಲೇ ಇರುವ ಮುಸ್ಲಿಂ ಏರಿಯಾದ ಯುವತಿಯರಿಗೆ ಹಣದ ಆಸೆ ತೋರಿಸಿ ತನ್ನ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ಸದಾಶಿವಾನಂದ ಅವರನ್ನು ಉಪಯೋಗಿಸಿಕೊಳ್ಳುತ್ತಿದ್ದ. ಅಕಸ್ಮಾತ್ ಆ ಹುಡುಗಿಯರಿಂದ ತೊಂದರೆ ಬಂದರೆ ಅವರಿಗೆ ಹಣ ಕೊಟ್ಟು ಸರಿಮಾಡಿಕೊಳ್ಳುವ ಸುಲಭ ಸೂತ್ರವೊಂದನ್ನು ಇಲ್ಲಿಯವರೆಗೆ ಪಾಲಿಸುತ್ತಾ ಬಂದಿದ್ದಾನೆ. ಮೊದಲಿನಿಂದಲೂ ಪುಡಿ ರೌಡಿಗಳೊಂದಿಗೆ ಆತ ಸ್ನೇಹವಿರಿಸಿಕೊಂಡಿದ್ದರಿಂದ ಕೈಮೀರಿದ ಸಮಸ್ಯೆಗಳನ್ನು ಹೆದರಿಸಿ ಬಗೆಹರಿಸಿಕೊಂಡ ಉದಾಹರಣೆಗಳೂ ಇವೆ.

ತನ್ನ ಪರಿಚಯದ ಪ್ರಭಾವೀ ಕುಟುಂಬವೊಂದರ ಯುವತಿ ರೇಖಾ, ಮುಬೀನಾ, ರೇಷ್ಮಾ (ಎಲ್ಲರ ಹೆಸರುಗಳನ್ನು ಬದಲಿಸಲಾಗಿದೆ) ಎನ್ನುವವರು ಇವನ ಮರುಳು ಮಾತಿಗೆ ಮಂಕಾಗಿ ಇವನ ಮಂಚ ಹತ್ತಿದರು. ಅವರಿಗೆಲ್ಲಾ ಮದುವೆಯಾಗುವ ಕನಸು ತೋರಿಸಿ ಈ ಭೂಪ ಹಾದಿ ತಪ್ಪಿಸಿದ್ದ. ಆದರೆ, ಕಳೆದ ಒಂದು ವರ್ಷದಿಂದೀಚೆಗೆ ಈತನ ಅಂಗಡಿಗೆ ಅಕೌಂಟೆಂಟ್ ಆಗಿ ಸೇರಿಕೊಂಡ ಸಲ್ಮಾ ಅಣ್ಣೇಗೇರಿ ಎಂಬುವವಳು ಈಗ ಸದಾಶಿವಾನಂದನ ಎರಡನೆಯ ಪಟ್ಟದರಸಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾಳಂತೆ. ಈಗಾಗಲೇ ಇವಳಿಗೆ ಬೇರೊಂದು ಮನೆ ಮಾಡಿಕೊಟ್ಟಿರುವ ಸದಾಶಿವಾನಂದ ಅದ್ಯಾವಾಗ ಇವಳಿಗೂ ಗುಡ್‌ಬೈ ಹೇಳ್ತಾನೋ ಗೊತ್ತಿಲ್ಲ.

ಚಟಕ್ಕಾಗಿ ಚಟ್ಟದ ಸ್ಕೆಚ್

ತನ್ನ ಪಲ್ಲಂಗದಾಟಕ್ಕೆ ಹುಡುಗಿಯರನ್ನು ಸೆಟ್ ಮಾಡಿಕೊಡಲು ನವಾಜ್ ಬೇಗಂ ಕವಾಜ್ ಎಂಬ ಘರವಾಲಿ ಮಹಿಳೆಯನ್ನು ಈತ ನೇಮಕ ಮಾಡಿಕೊಂಡಿದ್ದ. ಮನೆಮುರುಕ ನವಾಜ್ ಬೇಗಂ ಕವಾಜ್ ಎಂಬ ಹೆಣ್ಣಿನ ಸಹವಾಸದಿಂದ ಪೂರ್ಣ ದಾರಿಬಿಟ್ಟ ಸಲ್ಮಾ ಸದಾಶಿವಾನಂದನ ಮಂಚಕ್ಕೆ ಫಿಕ್ಸ್ ಆಗುತ್ತಲೇ ಮೊದಲನೆಯವಳನ್ನು ಮುಗಿಸುವ ಸಂಚಿಗೆ ನಿಂತ. ಸಲ್ಮಾಗೋಸ್ಕರವೇ ಕೊನೆ ಮಗಳು ಪೂಜಾಳನ್ನು ಧಾರವಾಡದ ಹೈಸ್ಕೂಲಿನಲ್ಲಿ ದಾಖಲಿಸಿ ಹೆಂಡತಿ ಲತಾಳನ್ನೂ ಅಲ್ಲಿಯ ಆದರ್ಶ ನಗರದ ಪಾಟೀಲ್ ಬಿಲ್ಡಿಂಗ್‌ನಲ್ಲಿ ಕೂಡಿಹಾಕಿಬಿಟ್ಟ. ತಿಂಗಳಿಗಿಷ್ಟು ಅಂತ ಆಗೊಮ್ಮೆ ಈಗೊಮ್ಮೆ ಬಂದು ಹಣ ಬಿಸಾಕಿ ಹೋಗುತ್ತಿದ್ದ ಸದಾಶಿವಾನಂದ ಇಂದಲ್ಲ ನಾಳೆ ತನ್ನ ಮೊದಲ ಹೆಂಡತಿ ಮತ್ತು ಆಕೆಯ ಮಕ್ಕಳು ತನ್ನ ಚಟಕ್ಕೆ ಅಡ್ಡಿಯಾಗುತ್ತಾರೆಂದು ಭಾವಿಸಿ ಲತಾಳ ವಿರುದ್ಧ ತನ್ನ ಬಳಿಯಿದ್ದ ಇಬ್ಬರು ಹೆಣ್ಣುಮಕ್ಕಳು ಮತ್ತು ಕೊನೆಯ ಮಗ ಕೀರ್ತಿನಾಥನನ್ನು ಎತ್ತಿಕಟ್ಟಿದ.

ಮೊದಲನೇ ಕಂತಿನಲ್ಲಿ ಹೆಂಡತಿ ಮತ್ತು ಕೊನೆಯ ಮಗಳು ಪೂಜಾಳನ್ನು ಹತ್ಯೆ ಮಾಡುವ ಇರಾದೆಯಿಂದ ಡಿಸೆಂಬರ್ 30ನೇ ತಾರೀಕು ತನ್ನ ಹಿರಿಯಣ್ಣ ಶಂಕರ ಮತ್ತು ತನ್ನ ಪುಡಿ ರೌಡಿ ಗ್ಯಾಂಗಿನೊಂದಿಗೆ ಧಾರವಾಡಕ್ಕೆ ಬಂದು ಇವರನ್ನು ಕಿಡ್ನಾಪ್ ಮಾಡಲು ಯತ್ನಿಸಿದ. ಅಪ್ಪನ ಈ ಸಂಚನ್ನು ಅರಿತ ಪೂಜಾ ದಾರಿ ಮಧ್ಯೆ ನವನಗರದ ಬಳಿ ವಾಹನದಿಂದ ಜಿಗಿದು ಪಾರಾಗಿದ್ದಾಳೆ. ನಂತರ ಅಲ್ಲಿಯ ಜನರ ಸಹಾಯದಿಂದ ನವನಗರ ಠಾಣೆಯ ಪೊಲೀಸರಿಗೆ ನಡೆದ ಘಟನೆಯ ವಿವರಗಳನ್ನ ತಿಳಿಸಿದ್ದಾಳೆ. ಈ ವಿಷಯ ಸದಾಶಿವಾನಂದನಿಗೆ ಗೊತ್ತಾಗಿದ್ದೇ ತಡ ಹೊತ್ತೊಯ್ದ ಹೆಂಡತಿ ಲತಾಳನ್ನೂ ಗದುಗಿನ ಮನೆಯೊಂದರಲ್ಲಿ ಕೂಡಿಹಾಕಿದ್ದಾನೆ. ಅಪ್ಪನ ಈ ಕ್ರೌರ್ಯವನ್ನು ಕಣ್ಣಾರೆ ಕಂಡ ಮಕ್ಕಳೆಲ್ಲಾ ಜೀವದ ಮೇಲಿನ ಹಂಗು ತೊರೆದು ತಾಯಿಯನ್ನು ಅಲ್ಲಿಂದ ಪಾರು ಮಾಡಿಕೊಂಡು ಅವಳೊಂದಿಗೆ ಹುಬ್ಬಳ್ಳಿಗೆ ಬಂದು ರಕ್ಷಣೆಗಾಗಿ ಪೊಲೀಸರ ಮೊರೆ ಹೋಗಿದ್ದಾರೆ.

ಸದಾಶಿವಾನಂದನ ರಂಗಿನಾಟದ ಬದುಕಿಗೆ ರೋಸಿಹೋಗಿರುವ ಲತಾ ಮತ್ತು ಅವಳ ಐದು ಜನಮಕ್ಕಳು ಇವತ್ತು ನಿರಾಶ್ರಿತರಂತೆ ಬದುಕುವಂತಹ ಸ್ಥಿತಿ ಬಂದೊದಗಿದೆ. ಹುಬ್ಬಳ್ಳಿಯ ಪ್ರಗತಿಪರ ಸಂಘಟನೆಗಳು, ಕೆಲ ಮಹಿಳಾ ಸಂಘಟನೆಗಳು ಇವರ ಬೆಂಬಲಕ್ಕೆ ನಿಂತಿದ್ದು ಪಾಪಿ ಸದಾಶಿವಾನಂದನ ವಿರುದ್ಧ ಮಹಿಳಾ ಪೊಲೀಸ್ ಠಾಣೆಯಲ್ಲಿ ದೈಹಿಕ ಕಿರುಕುಳ ಮತ್ತು ಕೊಲೆ ಯತ್ನದ ಪ್ರಕರಣ ದಾಖಲಿಸಿದ್ದಾರೆ. ಕೇವಲ ತನ್ನ ನಶ್ತಿನ ಚಟಕ್ಕಾಗಿ ನಂಬಿದವರನ್ನೇ ಕೊಲ್ಲುವಂತಹ ಕ್ರೂರ ಕೃತ್ಯಕ್ಕೆ ಮುಂದಾದ ಮಾನಗೇಡಿ ಸದಾಶಿವಾನಂದನಿಗೆ ಕಾನೂನು ಶಿಕ್ಷಿಸಲೇ ಬೇಕು.

• ಹುರಳಿಕುಪ್ಪಿ ವಿನಯ

ಕುದಿಯುವ ಯಡ್ಡಿ ಸ್ಫೋಟಕ್ಕೆ ರೆಡಿ



• ರಾ. ಸೋಮನಾಥ್

ರಾಜಾರೋಷವಾಗಿ ಬಿಜೆಪಿ ಹೈಕಮಾಂಡ್‌ಗೆ ಸವಾಲೆಸೆಯುವ ತುಮಕೂರು ಗ್ರಾಮಾಂತರದ ಬಿಜೆಪಿ ಶಾಸಕ ಸುರೇಶ್ ಗೌಡ, ದೆಹಲಿ ಯಾತ್ರೆ ಮುಗಿಸಿ ವರಿಷ್ಠರಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟು ಬಂದ ಶೋಭಾ ಕರಂದ್ಲಾಜೆ, ಕಳೆದೊಂದು ವಾರದಿಂದ ಯಡ್ಡಿಯ ರೇಸ್‌ಕೋರ್ಸ್ ನಿವಾಸಕ್ಕೆ ಪ್ರತಿನಿತ್ಯ ಎಡತಾಕುವ ನಿರಾಣಿ, ಬೊಮ್ಮಾಯಿ, ಸೋಮಣ್ಣ, ರೇಣುಕಾಚಾರ್ಯ; ಬಲ ಹೊಕ್ಕ ಅವಿತು ಕೂತ ರಾಜ್ಯಾಧ್ಯಕ್ಷ ಈಶ್ವರಪ್ಪ ಯಡ್ಡಿ-ಈಶ್ವರಪ್ಪ ನಡುವಿನ ಕ್ಷೋಭೆಗೆ ಹೈಕಮಾಂಡ್ ನೆರವು ಬೇಡುವ ಮುಖ್ಯಮಂತ್ರಿ ಸದಾನಂದ ಗೌಡ. ಜನವರಿ ಏಳರಿಂದ ಯಡಿಯೂರಪ್ಪ ಹಮ್ಮಿಕೊಂಡ ರಾಜ್ಯ ಪ್ರವಾಸ, ಇದರ ಬೆನ್ನಲ್ಲೇ ತುಮಕೂರಿನಲ್ಲಿ ಸಜ್ಜಾಗುತ್ತಿರುವ ಯಡ್ಡಿ ಬೆಂಬಲಿಗರ ಬೃಹತ್ ಸಮಾವೇಶ-

ಇವೆಲ್ಲವೂ ಏನನ್ನು ಸೂಚಿಸುತ್ತವೆ?

ಟಾರ್ಗೆಟ್ ಸಂಕ್ರಾಂತಿ

ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ಗಾಡ್‌ಫಾದರ್ ಯಡ್ಡಿ ಸಂಬಂಧ ಸಂಪೂರ್ಣ ಹಳಸಿದೆ. ತನ್ನನ್ನು ಹೈಕಮಾಂಡ್ ತಿರಸ್ಕರಿಸಿದ್ದರ ವಿರುದ್ಧ ಯಡ್ಡಿಯ ಸಹನೆ ಕಟ್ಟೆ ಒಡೆದಿದೆ. ಯಡಿಯೂರಪ್ಪ ಈಗಾಗಲೇ ಒಂದು ಕಾಲನ್ನು ಪಕ್ಷದಿಂದ ಹೊರಗಿಟ್ಟಾಗಿದೆ. ಹೆಚ್ಚೆಂದರೆ ಉತ್ತರದ ನಾಲ್ಕು ರಾಜ್ಯಗಳ ಚುನಾವಣೆ ಮುಗಿಯುವ ತನಕ ಯಡ್ಡಿ ಕಾಯಬಹುದು. ಬರುವ ಮಾರ್ಚ್ ಹೊತ್ತಿಗೆ ಯಡಿಯೂರಪ್ಪ ಸ್ಫೋಟಿಸುವುದು ಶತಸ್ಸಿದ್ಧ. ಅಂಥದೊಂದು ಹಾದಿ ಹಿಡಿಯುವ ಯಡ್ಡಿ ನಿರ್ಧಾರದ ಪೂರ್ವ ತಯಾರಿಯ ಕಾರ್ಯಾಚರಣೆ ಶುರುವಾಗುವುದು ಇದೇ ಸಂಕ್ರಾಂತಿಗೆ!



ಯಡ್ಡಿಯದು ಕೈಕಟ್ಟಿ ಕೂರುವ ಜಾಯಮಾನ ಅಲ್ಲವೇ ಅಲ್ಲ. ಹೇಗೆ ದೇವೇಗೌಡ ದಿನದ ಇಪ್ಪತ್ನಾಲ್ಕು ಗಂಟೆಯೂ ರಾಜಕೀಯವನ್ನೇ ಉಸಿರಾಡುತ್ತಾರೋ ಹಾಗೆ ಯಡ್ಡಿ ಕೂಡ ಮತ್ತೊಬ್ಬ ದೇವೇಗೌಡ. ರಾಜಕೀಯ ಬಿಟ್ಟರೆ ಮತ್ತೊಂದು ಗೊತ್ತಿಲ್ಲ, ಬೇಕೂ ಇಲ್ಲ. ಲೋಕಾಯುಕ್ತ ಬಲೆಗೆ ಸಿಲುಕಿಬಿದ್ದು ಮುಖ್ಯಮಂತ್ರಿ ಪದವಿ ಕಳೆಕೊಂಡು ಜೈಲಿಗೆ ಹೋಗಿ ಬಂದಮೇಲಂತೂ ಯಡ್ಡಿ ಅಕ್ಷರಶಃ ಕೆರಳಿದ ಸರ್ಪ. ಬಹುಶಃ ತಾನೇ ನಿಂತು ಮುಖ್ಯಮಂತ್ರಿಗಾದಿಗೆ ತಂದ ಸದಾನಂದ ಗೌಡ ಕೈಕೊಡದೆ ಹೋಗಿದ್ದರೆ ಯಡ್ಡಿ ಈ ಪಾಟ ಹತಾಶೆಗೆ ಬೀಳುತ್ತಿರಲಿಲ್ಲ.

ತಾನು ಜೈಲು ಸೇರಿದ್ದೇ ತಡ ಸದಾನಂದ ಗೌಡ ದೇವೇಗೌಡರ ಜೊತೆ ಕೈಜೋಡಿಸಿದ್ದು, ಪದೇಪದೇ ಕುಮಾರಸ್ವಾಮಿ-ರೇವಣ್ಣರನ್ನು ಕದ್ದುಮುಚ್ಚಿ ಭೇಟಿಯಾಗಿದ್ದು, ತಾನೇ ಲೋಕಾಯುಕ್ತಕ್ಕೆ ಸೂಚಿಸಿದ್ದ ಬನ್ನೂರು ಮಠ್ ಪರ ವಹಿಸದೇ ನಿಷ್ಕ್ರಿಯಗೊಂಡಿದ್ದು, ತನ್ನ ನಿಷ್ಠ ಅಧಿಕಾರಿಗಳನ್ನು ಮೂಲೆಗುಂಪು ಮಾಡಿದ್ದು, ತನ್ನ ಕಡುವೈರಿಗಳಾದ ಅನಂತ್‌ಕುಮಾರ್, ಈಶ್ವರಪ್ಪ ಜೊತೆ ಕೈಗೂಡಿಸಿದ್ದು ಎಲ್ಲವೂ ಯಡ್ಡಿಯ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿಹಾಕಿತ್ತು. ಇದೆಲ್ಲದರ ಮೇಲೆ ಬರೆಯಿಟ್ಟಂತೆ ಸದಾನಂದ ಗೌಡ 'ಇನ್ನೂ ಒಂದೂವರೆ ವರ್ಷಕಾಲ ತಾನೇ ಮುಖ್ಯಮಂತ್ರಿಯೆಂದು ಸದನದಲ್ಲಿ ಹೇಳಿಕೆಕೊಟ್ಟು ಯಡ್ಡಿಯ ಸುಪ್ತ ಬಯಕೆಗೆ ತಣ್ಣೀರೆರಚಿಬಿಟ್ಟರು. ಇನ್ನಾರು ತಿಂಗಳಲ್ಲಿ ತಾನೇ ಮುಖ್ಯಮಂತ್ರಿ ಎಂದು ಉದ್ದಕ್ಕೂ ಹೇಳಿಕೊಂಡೇ ಬಂದಿದ್ದ ಯಡ್ಡಿಗೆ ಸದಾನಂದ ಗೌಡ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಪರಿಷತ್ ಚುನಾವಣೆಗೆ ನಿಲ್ಲುತ್ತಾರೆಂಬ ಸುದ್ದಿಯೇ ಬರಸಿಡಲಾಗಿತ್ತು.

ಒಮ್ಮೆ ಪರಿಷತ್‌ಗೆ ನಿಂತು ಸದಾನಂದ ಗೌಡ ಗೆದ್ದರೆಂದರೆ ತನ್ನ ಮುಖ್ಯಮಂತ್ರಿ ಕನಸಿಗೆ ಎಳ್ಳುನೀರು ಬಿಟ್ಟಂತೆಯೇ ಎಂಬುದು ಯಡ್ಡಿಗೆ ಗ್ಯಾರಂಟಿಯಾಗಿ ಹೋಯ್ತು. ಪರಿಷತ್ ಚುನಾವಣೆಗೆ ಇನ್ನೆರಡು ದಿನ ಬಾಕಿಯಿರುವಂತೆಯೇ ದೆಹಲಿಗೆ ಧಾವಿಸಿದರು. ಮುಖ್ಯಮಂತ್ರಿ ಏನಾದರೂ ಸೋತರೆಂದರೆ ಪಕ್ಷಕ್ಕದು ದೊಡ್ಡ ಮುಖಭಂಗ. ಹಾಗಾಗಬಾರದು ಎಂದರೆ ಮೊದಲು ನನ್ನ ಭವಿಷ್ಯ ನಿರ್ಧರಿಸಿ ಎಂದೇ ಗಡ್ಕರಿಗೆ ತಾಕೀತಿಟ್ಟರೆ ಜೈಟ್ಲಿಗೂ ಎಚ್ಚರಿಕೆ ಕೊಟ್ಟರು. ರಾಜನಾಥ್ ಸಿಂಗ್ ಮುಂದೆಯೂ ಇದೇ ಪರತ್ತು ಮಂಡಿಸಿದರು. ದೌರ್ಭಾಗ್ಯವೆಂದರೆ ಯಡ್ಡಿಗೆ ಅಡ್ವಾಣಿಯ ಸಂದರ್ಶನ ಕೂಡ ಕಷ್ಟವಾಗಿ ಹೋಯಿತು.

ವಿಧಿಯಿಲ್ಲದೇ ಮತ್ತೆ ಬೆಂಗಳೂರಿಗೆ ವಾಪಸ್ಸಾದ ಯಡ್ಡಿ ಪರಿಷತ್ ಚುನಾವಣೆಯಲ್ಲಿ ಸದಾನಂದ ಗೌಡರನ್ನು ಬುಡಮೇಲು ಮಾಡುವ ಎಲ್ಲಾ ಕಾರ್ಯಾಚರಣೆಗೂ ಸಿದ್ಧತೆ ಮಾಡಿಕೊಂಡಿದ್ದರೆ ಮತ್ತೊಂದು ಆಘಾತಕಾರಿ ಮಾಹಿತಿ ಕಾದಿತ್ತು. ಅದು ಜೆಡಿಎಸ್-ಡಿವಿಎಸ್ ರಹಸ್ಯ ಮೈತ್ರಿ!

ಹಾಗೊಮ್ಮೆ ಯಡ್ಡಿ ಬಣ ಕೈಕೊಟ್ಟದ್ದೇ ಆದರೆ ಕಾಂಗ್ರೆಸ್ಸಿನ ಬಿ.ಸಿ. ಪಾಟೀಲ್ ನೇತೃತ್ವದ ಹತ್ತು ಮಂದಿ ಶಾಸಕರು, ಬಳ್ಳಾರಿ ಗಣಿ ಗ್ಯಾಂಗಿನ ಶ್ರೀರಾಮುಲು ಕಡೆಯ ಒಂದಷ್ಟು ಎಮ್ಮೆಲ್ಲೆಗಳು ಮತ್ತು ಪಕ್ಷೇತರರೆಲ್ಲ ಸೇರಿ ಸದಾನಂದ ಗೌಡರನ್ನು ಬೆಂಬಲಿಸುವ ಪ್ರತಿತಂತ್ರವೊಂದನ್ನು ಸಿಎಂ ಮತ್ತು ಕುಮಾರಸ್ವಾಮಿ ಸೇರಿ ರೂಪಿಸಿದರು. ಇದು ಗೊತ್ತಾಗಿದ್ದೇ ತಡ ಯಡ್ಡಿ ರಾಗ ಬದಲಿಸಿ ಸದಾನಂದ ಗೌಡರನ್ನೇ ಗೆಲ್ಲಿಸುತ್ತೇನೆಂದು ಮಾನ ಉಳಿಸಿಕೊಳ್ಳುವ ಡ್ರಾಮಾ ಶುರುವಿಟ್ಟರು.

ಇದು ಯಡ್ಡಿ ಹತಾಶೆಯ ಪರಮಾವಧಿಯಾದರೆ ಇದರ ಬೆನ್ನಲ್ಲೇ ಈಶ್ವರಪ್ಪ ಜೊತೆ ದೆಹಲಿ ಯಾತ್ರೆ ನಡೆಸಿದ ಮುಖ್ಯಮಂತ್ರಿ ನಿರಾಯಾಸವಾಗಿ ಅಡ್ವಾಣಿಯನ್ನು ಕಂಡುಬಂದದ್ದು, ಹೈಕಮಾಂಡ್ ಮುಖ್ಯಮಂತ್ರಿಯ ಬೆನ್ನಿಗೆ ನಿಂತದ್ದು ಮತ್ತು ದೆಹಲಿಯಿಂದ ಬಂದ ಈಶ್ವರಪ್ಪ 'ಯಡಿಯೂರಪ್ಪ ಆರೋಪ ಮುಕ್ತರಾದ ನಂತರವೇ ಮುಂದಿನ ಮಾತು' ಎಂದು ಹೇಳಿದ್ದು ಯಡ್ಡಿಯನ್ನು ಅಕ್ಷರಶಃ ಕೆರಳಿಸಿತು.

ಕೈತಪ್ಪಿದ ಮುಖ್ಯಮಂತ್ರಿ ಪದವಿ, ಹೈಕಮಾಂಡ್ ನಿರ್ಲಕ್ಷ್ಯ, ತನ್ನ ವಿರುದ್ಧ ಈಶ್ವರಪ್ಪನ ಹರುಕುಬಾಯಿ ಮತ್ತು ದಿನೇದಿನೇ ವೃದ್ಧಿಸುತ್ತಿರುವ ಸದಾನಂದ ಗೌಡರ ಜನಪ್ರಿಯತೆ ಎಲ್ಲವೂ ತನ್ನ ವಿನಾಶಕ್ಕೆ ಅಪಶಕುನವಾಗಿ ಕಾಡಿದೆ. ಪಕ್ಷ ಕಟ್ಟಿದವನು ನಾನು. ಜನ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದೇ ನನಗಾಗಿ. ಹೀಗಿದ್ದೂ ಇಷ್ಟೆಲ್ಲ ಅವಮಾನ, ಅಡನಿಂದೆಯಲ್ಲಿ ಏಕೆ ಕೈಕಟ್ಟಿ ಕೂರಲಿ? ತನಗಿಲ್ಲದ ಅಧಿಕಾರ ಇದ್ದರೇನು ಬಿಟ್ಟರೇನು, ಎಂದೇ ತನ್ನ ಪಾಲಿನ ಯುದ್ಧದ ಕಹಳೆ ಊದಿಬಿಟ್ಟರು.

ಆದರ ಮೊದಲ ಪೆಟ್ಟಿಗೆ ಸಿಲುಕಿದ್ದು ಈಶ್ವರಪ್ಪ. ತಾನು ಜೈಲಿಗೆ ಹೋಗುವಂತೆ ಮಾಡಿದ್ದೇ ಈಶ್ವರಪ್ಪ. ಇಷ್ಟಾದಮೇಲೂ ಅವರಿಗೆ ತೃಪ್ತಿ ಆಗಿಲ್ಲ ಅಂದರೆ ಇನ್ನು ಏನೇನು ಮಾಡಬೇಕೆಂದಿದ್ದಾರೆ.....! ಎಂದು ಯಡ್ಡಿ ತಿರುಗಿಬಿದ್ದಿದ್ದೇ ತಡ, ಈಶ್ವರಪ್ಪ ಅಡ್ರೆಸ್ಸಿಗಿಲ್ಲದೆ ಮೂಲೆ ಸೇರಿಬಿಟ್ಟರು. ಅಲ್ಲಿಗೆ ಈಶ್ವರಪ್ಪನ ಬಾಯಿ ಮುಚ್ಚಿಸುವ ಯಡ್ಡಿಯ ಒಂದು ತಂತ್ರ ಫಲಿಸಿತ್ತು. ಇನ್ನು ಹೈಕಮಾಂಡಿಗೆ ತನ್ನ ವಿರುದ್ಧ ಚಾಡಿ ಚುಚ್ಚಲು ಉಳಿದಿರುವುದು ಅನಂತ್‌ಕುಮಾರ್ ಮಾತ್ರ. ಅದಕ್ಕೂ ಮುನ್ನ ಹೈಕಮಾಂಡಿಗೇ ಬಿಸಿ ಮುಟ್ಟಿಸಿದರೆ?

ಅದಕ್ಕೆಂದು ಯಡ್ಡಿ ಬಿಟ್ಟದ್ದೇ ಟಾರ್ಗೆಟ್ ಸಂಕ್ರಾಂತಿಯ ಅಸ್ತ್ರ. ಬಸವಣ್ಣನ ಹುಟ್ಟೂರು ಬಸವನಬಾಗೇವಾಡಿಯಿಂದಲೇ ತನ್ನ ಅಭಿಯಾನ ಆರಂಭಿಸುವ ಯಡ್ಡಿಯ ನಿರ್ಧಾರ ಏಕಾಏಕಿ ರದ್ದಾಗಿ ಸಂಕ್ರಾಂತಿಗೆ ಬದಲಾಗುವುದಕ್ಕೂ ಕಾರಣವಿತ್ತು. ತನ್ನ ಪ್ರತಿನಿಧಿಯಾಗಿ ಹೈಕಮಾಂಡ್ ವರಿಷ್ಠರ ಮನವೊಲಿಸಲೆಂದು ಆದರೆ ಅದು ಹುಸಿಯಾಗಿದ್ದು ಜನವರಿ 1 ರ ಹೊಸ ವರ್ಷದ ರಾತ್ರಿ.

ಯಡ್ಡಿಗೆ ಅನಂತ್ ನಿಷ್ಠರ 'ಮಸ್ಕ'

ನಿನ್ನೆ ಮೊನ್ನೆಯ ತನಕ ಯಡ್ಡಿಯ ಬದ್ಧವೈರಿಯಂತಿದ್ದ ಗೃಹ ಸಚಿವ ಆರ್. ಅಶೋಕ್ ಏಕಾಏಕಿ 'ಯಡಿಯೂರಪ್ಪ ನಮ್ಮ ಪ್ರಶ್ನಾತೀತ ನಾಯಕರು. ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕು ಎಂಬ ಬಗ್ಗೆ ಪಕ್ಷದಲ್ಲಿ ಯಾರಿಗೂ ತಕರಾರಿಲ್ಲ. ಅವರಿಗೆ ಬೆಂಗಳೂರಿನ ಬಗ್ಗೆ ವಿಶೇಷ ಕಾಳಜಿಯಿದೆ. ಮುಖ್ಯಮಂತ್ರಿಯಾಗಿ ಅವರಿದ್ದಾಗ ಬೆಂಗಳೂರು ಅಭಿವೃದ್ಧಿಗೆ ವಿಶೇಷ ಅನುದಾನ ನೀಡಿದ್ದರು. ಈಗ ಅಧಿಕಾರ ಇಲ್ಲ ಎಂದ ಮಾತ್ರಕ್ಕೆ ಅವರನ್ನು ಏಕಾಂಗಿ ಮಾಡುವುದಿಲ್ಲ. ನಾವೆಲ್ಲ ಈಗಲೂ ಅವರ ಜೊತೆಗೇ ಇದ್ದೇವೆ. ಅವರು ರಾಜ್ಯದಲ್ಲಿ ಪಕ್ಷ ಕಟ್ಟಿ ಬೆಳೆಸಿದವರು. ಅವರೇ ನಮ್ಮ ನಾಯಕರು....!' ಇತ್ಯಾದಿ ಪುಂಖಾನುಪುಂಖವಾಗಿ ಪುಂಗಿ ಊದುತ್ತಿದ್ದಾರೆಂದರೆ ಇನ್ನಾವುದೋ 'ಧರ್ಮ ಸೂಕ್ಷ್ಮ' ಇರಲೇಬೇಕಲ್ಲವೆ?



ಇಲ್ಲದಿದ್ದರೆ ಅಶೋಕ್ ನಿಷ್ಠೆ ರಾತ್ರೋರಾತ್ರಿ ಏಕೆ ಬದಲಾಗುತ್ತಿತ್ತು? ನಿನ್ನೆ ಮೊನ್ನೆಯ ತನಕ ಯಡ್ಡಿಯ ಪಕ್ಕಾ ವಿರೋಧಿಯಂತಿದ್ದ, ಬಿಜೆಪಿ ಒಕ್ಕಲಿಗರ ಪಾಳಯದ ಪ್ರಶ್ನಾತೀತ ಅಧಿಪತಿಯಂತಿದ್ದ ಅಶೋಕ್ ಈಗ ಬೆಂಗಳೂರಿನ ಒಂದು ಡಜನ್ ಶಾಸಕರನ್ನು ಕಟ್ಟಿಕೊಂಡು ತಾವೇ ಮೇಲೆ ಬಿದ್ದು ಯಡಿಯೂರಪ್ಪನವರ ನಿವಾಸಕ್ಕೆ ಏಕೆ ಪಾದ ಬೆಳೆಸುತ್ತಾರೆ.

ಅಶೋಕ್ ಜೊತೆ ಯಡಿಯೂರಪ್ಪ ದರ್ಶನಕ್ಕೆಂದು ಬಂದಿದ್ದವರಾದರೂ ಎಂಥವರು? ಯಡ್ಡಿಯ ಕಡುವೈರಿ ಅನಂತ್‌ಕುಮಾರ್‌ರ ನಂಬಿಕಸ್ತ ಬಂಟನೆಂದೇ ಖ್ಯಾತಿವೆತ್ತ ಜಯನಗರದ ಶಾಸಕ ವಿಜಯ್‌ಕುಮಾರ್, ಅನಂತ್ ಅವರ ಮಾನಸಪುತ್ರನೆಂದೇ ಚಾಲ್ತಿಯಲ್ಲಿರುವ ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯ, ಮತ್ತೊಬ್ಬ ಅನಂತ್ ಬಲಗೈ ಬಂಟ ನಗರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ, ಬಿಜೆಪಿ ಬೆಂಗಳೂರು ಜಿಲ್ಲಾಧ್ಯಕ್ಷ ಸಚ್ಚಿದಾನಂದಮೂರ್ತಿ ಎಂಬ ಮಗದೊಬ್ಬ ಅನಂತ್ ನಿಷ್ಠ.....

ಜಾತಿಯಲ್ಲಿ ತೆಲುಗು ಮೂಲದ ಸ್ಮಾರ್ತ ಬ್ರಾಹ್ಮಣರಾದ ರಾಷ್ಟ್ರನಾಯಕ ಅನಂತ್‌ಕುಮಾರ್ ಪಾಲಿಗೆ ಬದ್ಧನಿಷ್ಠರಾಗಿರುವ ಆರೆಸ್ಸೆಸ್ ಮೂಲದ ಈ ಬಿಜೆಪಿ ಶಾಸಕರು-ಪದಾಧಿಕಾರಿಗಳನ್ನು ಕಟ್ಟಿಕೊಂಡು ಅಶೋಕ್ ಹೊಸ ವರ್ಷದ ಮರುದಿನ ಅಂದರೆ ಜನವರಿ ಎರಡರಂದು ಯಡ್ಡಿಯ ನಿವಾಸಕ್ಕೆ ಬಂದು ಯಾವತ್ತೂ ಇಲ್ಲದ ಯಡ್ಡಿಯ ಗುಣಗಾನ ಮಾಡುತ್ತಾರೆಂದರೆ ಅದು ಕಾಟಾಚಾರದ ಮನವೊಲಿಕೆಯಾಗಲಿ, ಆರೆಸ್ಸೆಸ್ ಆಣತಿಯ ಮೇರೆಗೆ ಯಡ್ಡಿಯನ್ನು ಸಂತೈಸುವ ಯತ್ನವಾಗಲಿ ಆಗಿರಲಿಕ್ಕಿಲ್ಲ!



'ಬೆಂಗಳೂರಿನ ಅಭಿವೃದ್ಧಿ ಕುರಿತಂತೆ ಚರ್ಚಿಸುವುದಕ್ಕೆ ನಾವೆಲ್ಲ ಬೆಂಗಳೂರಿನ ಶಾಸಕರು ಯಡಿಯೂರಪ್ಪನವರ ಮನೆಯಲ್ಲಿ ಸಭೆ ಸೇರಿದ್ದೆವು' ಎಂದು ಯಡ್ಡಿ ನಿಷ್ಠ ರಾಜರಾಜೇಶ್ವರಿ ನಗರದ ಶಾಸಕ ಎಂ. ಶ್ರೀನಿವಾಸ್ ಆಣೆ ಪ್ರಮಾಣ ಮಾಡುತ್ತಾರೆ ನಿಜ. ಇದೇ ಮಾತು ಅಶೋಕ್ ಬಾಯಿಂದಲೂ ಹೊರಬೀಳುತ್ತದೆ. ಸದ್ಯ ಬಂದಿದ್ದವರಾದರೂ ಯಾರ್‍ಯಾರು?

ಸರ್ ಸಿ.ವಿ. ರಾಮನ್‌ನಗರದ ಶಾಸಕ ಮತ್ತು ಅನಂತ್‌ಕುಮಾರ್‌ರ ಪರಮಾಪ್ತ ಎಸ್. ರಘು, ಈತನ ಭಾವ ಮತ್ತು ಮಾಜಿ ಮಂತ್ರಿ ಅರವಿಂದ ಲಿಂಬಾವಳಿ, ಅಶೋಕ್ ಪರಮಾಪ್ತ ದಾಸರಹಳ್ಳಿ ಮುನಿರಾಜು, ಯಡ್ಡಿಯ ಕಟ್ಟರ್ ಅನುಯಾಯಿ ಯಲಹಂಕ ಶಾಸಕ ವಿಶ್ವನಾಥ್, ಯಡ್ಡಿಯ ಮತ್ತೊಬ್ಬ ಚೇಲಾ ಸಂದೀಶ್ ರೆಡ್ಡಿ, ಅಶೋಕ್ ಬೆಂಬಲಿಗ ಬೆಂಗಳೂರು ದಕ್ಷಿಣದ ಶಾಸಕ ಎಂ. ಕೃಷ್ಣಪ್ಪ, ಈತನ ಖಾಸಾ ಅಣ್ಣ ಮತ್ತು ಎದುರಾಳಿ ಯಡ್ಡಿಯ ಬೆಂಬಲಿಗ ಎಂ. ಶ್ರೀನಿವಾಸ್...... ಪರಸ್ಪರ ವಿರೋಧಿ ಗುಂಪಿನ, ಒಬ್ಬರ ತಲೆಕಂಡರೆ ಮತ್ತೊಬ್ಬರಿಗಾಗದ, ಪರಸ್ಪರ ಕಿತ್ತಾಡುವ ಒಂದೇ ಪಕ್ಷದ ಈ ಬೆಂಗಳೂರಿನ ಎಮ್ಮೆಲ್ಲೆಗಳೆಲ್ಲ ಇದ್ದಕ್ಕಿದ್ದಂತೆ ಯಡಿಯೂರಪ್ಪನವರ ಮನೆಗೆ ಮೆರವಣಿಗೆ ಬಂದದ್ದು ಬೆಂಗಳೂರಿನ ಹಿತಕ್ಕಾಗಿ ಎಂಬುದು ನಿಜವೇ ಆಗಿದ್ದರೆ ಅಧಿಕಾರವಿಲ್ಲದ, ಮಾಜಿಯಾಗಿರುವ, ಪಕ್ಷದಿಂದೀಚೆಗೆ ಒಂದು ಕಾಲನ್ನು ಚಾಚಿ ಕೂತಿರುವ ಯಡಿಯೂರಪ್ಪನವರನ್ನು ಮುಗಿಬಿದ್ದು ನೋಡಬೇಕಾದ ಹರಕತ್ತೇನಿತ್ತು?



ಅಶೋಕ್ ಹೆಸರು ಕೇಳಿದರೇನೇ ರಾಜರಾಜೇಶ್ವರಿ ಶಾಸಕ ಶ್ರೀನಿವಾಸ್ ಉರಿದುಬೀಳುತ್ತಾರೆ. ಯಲಹಂಕ ಶಾಸಕ ವಿಶ್ವನಾಥ್‌ಗೂ ಸಿ.ವಿ. ರಾಮನ್‌ನಗರದ ರಘುವಿಗೂ ಬದ್ಧವೈರತ್ವ. ಬೆಂಗಳೂರು ದಕ್ಷಿಣದ ಕೃಷ್ಣಪ್ಪ ಅವರಣ್ಣ ಶ್ರೀನಿವಾಸ್ ಕಂಡಿದ್ದೇ ತಡ ಜಾಗ ಖಾಲಿ ಮಾಡುತ್ತಾರೆ. ದಾಸರಹಳ್ಳಿ ಮುನಿರಾಜು ಯಡ್ಡಿಯ ವಿರೋಧಿ ಪಾಳಯದ ಪ್ರಮುಖ ವಕ್ತಾರನಿದ್ದಂತೆ. ಲಿಂಬಾವಳಿ ಕೂಡ ಇವತ್ತಿಗೂ ಯಡ್ಡಿ ವಿರುದ್ಧ ಕಿಡಿಕಾರುವ ಆಸಾಮಿ. ಇಂಥವರೆಲ್ಲ ಸಂಘಟಿತರಾಗಿ ಮಾಜಿ ಸಿ.ಎಂ. ಯಡ್ಡಿಯ ಮನೆಗೆ ಬಂದು ಬೆಂಗಳೂರಿನ ಅಭಿವೃದ್ಧಿ ಕುರಿತ ಮಂತ್ರಾಲೋಚನೆಗೆ ಸೇರುತ್ತಾರೆಂದರೆ ಅದನ್ನು ನಂಬಲು ಸಾಧ್ಯವೆ?

ನಿಜಕ್ಕೂ ಬೆಂಗಳೂರಿಗೆ ಏನಾದರೂ ಪ್ರಯೋಜನವಾಗಬೇಕೆಂದಿದ್ದರೆ ಇವರು ನೋಡಬೇಕಾಗಿದ್ದು ಮುಖ್ಯಮಂತ್ರಿಯನ್ನು. ಅಧಿಕಾರವಿಲ್ಲದ ಯಡ್ಡಿ ತಾನೇ ಏನು ಮಾಡಲು ಸಾಧ್ಯ? ಹಾಗೊಮ್ಮೆ ಬೆಂಗಳೂರಿನ ಅಭಿವೃದ್ಧಿಗೆ ಏನಾದರೂ ಮಾಡಬೇಕೆಂಬ ಕಳಕಳಿ ಯಡ್ಡಿಗೆ ಇದ್ದಿದ್ದೇ ಆಗಿದ್ದರೆ once again ಮುಖ್ಯಮಂತ್ರಿ ಸದಾನಂದ ಗೌಡರಿಗೇ ಹೇಳಬೇಕು. ವಿಪರ್ಯಾಸವೆಂದರೆ ಸಿ.ಎಂ. ಸದಾನಂದ ಗೌಡರೇ ಸದ್ಯ ಯಡ್ಡಿಗೆ ಮಣೆ ಹಾಕುವ ಸ್ಥಿತಿಯಲ್ಲಿಲ್ಲ. ಹೀಗಿರುವಾಗ ಬೆಂಗಳೂರಿನ ಅಭಿವೃದ್ಧಿಗೆ ಅಧಿಕಾರಹೀನ ಯಡ್ಡಿಯ ಮೂಲಕ ಕಾರ್ಯಾಚರಣೆಗಿಳಿಯುವುದೇ ಹಾಸ್ಯಾಸ್ಪದ.



ಯಡ್ಡಿಯ ದುರ್ಗತಿ, ಹತಾಶೆಗೂ ಅನಂತ್ ನಿಷ್ಠ ಅಶೋಕ್ ಮುಗಿಬಿದ್ದು ಯಡ್ಡಿಯ ಬಳಿ ಶಾಸಕರ ನಿಯೋಗ ತಂದಿದ್ದಕ್ಕೂ ಇರುವ ಸಂಬಂಧದ ಆಯಾಮವೇ ಬೇರೆ. ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಬೆಂಗಳೂರಿನ ಶಾಸಕರನ್ನು ಸಂತೃಪ್ತಿಯಾಗಿಟ್ಟಿದ್ದೇ ಯಡಿಯೂರಪ್ಪ. ಅದರ ಫಲವೇ ಬಿಬಿಎಂಪಿಯ ಬೋಗಸ್ ಕಾಮಗಾರಿ ಕರ್ಮಕಾಂಡ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರವೊಂದರಲ್ಲೇ 700 ಕೋಟಿ ಹಗರಣ ನಡೆದಿದೆಯೆಂದ ಮೇಲೆ ಇನ್ನು ಉಳಿಕೆ ಕ್ಷೇತ್ರಗಳಲ್ಲಿ ಏನೆಲ್ಲ ಲೂಟಿಯಾಗಿರಬೇಡ?

ಮಲ್ಲೇಶ್ವರದ ಶಾಸಕ ಅಶ್ವತ್ಥನಾರಾಯಣ, ಗಾಂಧಿನಗರದ ದಿನೇಶ್ ಗುಂಡೂರಾವ್ ಮತ್ತು ರಾಜರಾಜೇಶ್ವರಿನಗರದ ಎಂ. ಶ್ರೀನಿವಾಸ್ ಈ ಮೂರು ಕ್ಷೇತ್ರಗಳಲ್ಲಿ ನಡೆದ ಕಾಮಗಾರಿ ಕರ್ಮಕಾಂಡವೊಂದೇ 1538 ರೂಪಾಯಿಗಳೆಂದ ಮೇಲೆ ಉಳಿಕೆ ಬೆಂಗಳೂರಿನ ಕ್ಷೇತ್ರಗಳಲ್ಲಿ ಎಷ್ಟು ಲೂಟಿಯಾಗಿರಬೇಡ? ಸದಾನಂದ ಗೌಡ ಮುಖ್ಯಮಂತ್ರಿಯಾದ ಮೇಲೆ ಮಾಡಿದ ಮೊದಲ ಕೆಲಸವೇ ಈ ಮೂರು ಕ್ಷೇತ್ರಗಳ ಅವ್ಯವಹಾರವನ್ನು ಸಿಐಡಿಗೆ ವಹಿಸಿದ್ದು!



ಬಿಬಿಎಂಪಿಯಲ್ಲಿ ಹಗರಣವೇ ನಡೆದಿಲ್ಲ ಎಂದು ಮುಖ್ಯಮಂತ್ರಿ ಸದಾನಂದ ಗೌಡರೇ ಹೇಳಿಕೆ ಕೊಟ್ಟು ಅವರೇ ಅದನ್ನು ಸಿಬಿಐ ತನಿಖೆಗೊಪ್ಪಿಸಿದ್ದನ್ನು ಕಂಡವರು ಸರ್ಕಾರ ಇಡೀ ಹಗರಣಕ್ಕೊಂದು ಗತಿ ಕಾಣಿಸುತ್ತದೆಯೆಂದೇ ಲೆಕ್ಕ ಹಾಕಿದ್ದರು. ಎಷ್ಟೆಂದರೂ ತಮ್ಮದೇ ಪಕ್ಷದ ಶಾಸಕರನ್ನು ಮುಖ್ಯಮಂತ್ರಿ ಇಕ್ಕಟ್ಟಿಗೆ ಸಿಲುಕಿಸುವುದು ಎಲ್ಲಾದರೂ ಉಂಟೆ? ಎಂದೇ ನಗರ ಬಿಜೆಪಿಯ ಪುಢಾರಿಗಳು ನಿಟ್ಟುಸಿರಿಟ್ಟಿದ್ದರು.

ಲೋಕಾಯುಕ್ತದಲ್ಲಿದ್ದು ಅನೇಕಾನೇಕ ಭ್ರಷ್ಟರ ಪಾಲಿಗೆ ಸಿಂಹಸ್ವಪ್ನವಾಗಿದ್ದ ನಿಷ್ಠುರಿ ಐಪಿಎಸ್ ರೂಪಕುಮಾರ್ ದತ್ತರನ್ನು ಸಿ.ಎಂ. ಸದಾನಂದ ಗೌಡ ಸಿಐಡಿಯ ಡಿಐಜಿಯನ್ನಾಗಿ ನೇಮಿಸಿದರು!

ಮೇಲುನೋಟಕ್ಕಿದು ಸಾಮಾನ್ಯ ವರ್ಗಾವರ್ಗಿಯ ಕ್ರಮದಂತೆ ಕಂಡರೂ ಆಳದಲ್ಲದರ ಪರಿಣಾಮವೇ ಭಯಂಕರವಾಗಿತ್ತು. ಈಗಾಗಲೇ ಮೂರು ಕ್ಷೇತ್ರಗಳ ಕಾಮಗಾರಿ ಹಗರಣದ ತನಿಖೆ ಸಿಐಡಿಯ ಮುಂದಿದೆ. ಹಾಗೊಮ್ಮೆ ಸಿಐಡಿ

ಮುಖ್ಯಸ್ಥರಾಗಿ ದತ್ತ ಈ ಹಿಂದಿನ ಲೋಕಾಯುಕ್ತರ ತಮ್ಮ ನಿಷ್ಠುರತೆಯನ್ನೇ ಮುಂದುವರಿಸಿದರೆಂದರೆ ಪಕ್ಕಾ ಅನಂತ್ ನಿಷ್ಠ ಮಲ್ಲೇಶ್ವರ ಶಾಸಕ ಅಶ್ವತ್ಥನಾರಾಯಣ ಜೈಲು ಪಾಲಾಗುವುದು ಶತಸ್ಸಿದ್ಧ. ಜೊತೆಗೆ ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಮತ್ತು ರಾಜರಾಜೇಶ್ವರಿನಗರದ ಎಮ್ಮೆಲ್ಲೆ ಎಂ. ಶ್ರೀನಿವಾಸ್ ಕೂಡ ಅಪರಾಧಿಗಳಾಗಲೇಬೇಕು. ಒಮ್ಮೆ ಈ ಮೂರು ಕ್ಷೇತ್ರಗಳ ಭ್ರಷ್ಟಾಚಾರ ಸಾಬೀತಾಯಿತೆಂದರೆ ಉಳಿಕೆ 24 ಕ್ಷೇತ್ರಗಳ ಅವ್ಯವಹಾರ ಬಯಲಾಗುತ್ತದೆ. ಆಗ ಬಹುಸಂಖ್ಯೆಯ ಬೆಂಗಳೂರು ಬಿಜೆಪಿ ಶಾಸಕರೆಲ್ಲ ಅನಾಯಾಸವಾಗಿ ಬಲೆಗೆ ಬೀಳುತ್ತಾರೆ. ಇಂಥದೊಂದು ಸಂದಿಗ್ಧವನ್ನು ರೂಪ್‌ಕುಮಾರ್ ದತ್ತ ಎಂಬ ಪ್ರಾಮಾಣಿಕ ಪೊಲೀಸ್ ಅಧಿಕಾರಿಯನ್ನು ಸಿಐಡಿಗೆ ತರುವ ಮೂಲಕವೇ ತಂದಿಟ್ಟಿದ್ದಾರೆ ಮುಖ್ಯಮಂತ್ರಿ ಸದಾನಂದ ಗೌಡ.

ಇದಿಷ್ಟೇ ಆಗಿದ್ದರೆ ಆ ಮಾತೇ ಬೇರೆ. ಆದರೆ ಸದಾನಂದ ಗೌಡ ಮುಖ್ಯಮಂತ್ರಿಯಾದ ಮೇಲೆ ಪುಗಸಟ್ಟೆ ಉಂಡು ತೇಗಿಕೊಂಡಿದ್ದ ಬೆಂಗಳೂರಿನ ಶಾಸಕರ ಪಾಡೇನಾಗಿದೆಯೆಂದರೆ-ಹಿಂದಿನಂತೆ ಸಿಕ್ಕಾಪಟ್ಟೆ ಫಂಡು ಬಿಡುಗಡೆಯಾಗಲ್ಲ. ವೀರಾವೇಶದ ಬಜೆಟ್ ಮಂಡಿಸಿದ ಮೇಯರ್ ಶಾರದಮ್ಮನ ಪಾಡು ಏನಾಯ್ತೆಂದರೆ ಬಜೆಟ್ ಮೊತ್ತವಾದ ಸಾವಿರಕ್ಕೂ ಅಧಿಕ ಕೋಟಿ ರೂಪಾಯಿಗಳನ್ನು ಸರ್ಕಾರ ಈತನಕ ಬಿಡುಗಡೆ ಮಾಡಿಲ್ಲ. ಹಿಂದೆ ಯಡಿಯೂರಪ್ಪ ಧಾರಾಳಿಯಾದಂತೆ ಸದಾನಂದ ಗೌಡರು ಕ್ಷೇತ್ರಾಭಿವೃದ್ಧಿಗೆ ಕಾಸು ಕೊಡುತ್ತಿಲ್ಲ. ಕನಿಷ್ಠ ಆಗಲಾದರೂ ನರ್ಮ್ ನಿಧಿಯಿತ್ತು. ಈಗ ಅದೂ ಖಾಲಿಯಾಗಿದೆ. ಮಾಡಿದ ಕಾಮಗಾರಿಯ ಹೆಸರಲ್ಲಿ ಹಾಕಿದ

ಂದು ಶೋಭಾ ಕರಂದ್ಲಾಜೆಯನ್ನು ದೆಹಲಿಗೆ ಕಳಿಸಿಕೊಟ್ಟು ಯಡ್ಡಿಗ
ನಿರ್ಧಾರ ಮನದಟ್ಟಾಗಿತ್ತು, ಗಡ್ಕರಿ, ರಾಜನಾಥ್ ಮತ್ತು ಮುರಳಿ
ಜೋಷಿಯ ಹೊರತಾಗಿ ಅಡ್ವಾಣಿ, ಸುಷ್ಮಾ ಸ್ವರಾಜ್, ವೆಂಕಯ್ಯ
ಂತ್‌ಕುಮಾರ್ ಇತ್ಯಾದಿಗಳ್ಯಾರಿಗೂ ತಾನು ಮುಖ್ಯಮಂತ್ರಿಯಾಗು
ಎಂಬುದು ಸ್ಪಷ್ಟವಾಗಿತ್ತು.

ರಾಜ್ಯಗಳ ಚುನಾವಣೆ ನಡೆಯುತ್ತಿರುವಾಗಲೇ ಕಾಂಗ್ರೆಸ್ಸಿನ
ನ್ನು ಅಸ್ತ್ರಮಾಡಿಕೊಂಡ ಬಿಜೆಪಿಗೆ ಮತ್ತೆ ಯಡ್ಡಿಯನ್ನು ಮುಖ್ಯಮಂತ್ರಿ
ಅಸಾಧ್ಯವೆಂಬ ಹೈಕಮಾಂಡ್ ನಿರ್ಧಾರ ಅಚಲವಾಗಿತ್ತು. ಹಾಗಂತ
ಮರ್ಜಿಗೆ ಬಿದ್ದು ತಾನು ಕೈಕಟ್ಟಿ ಕೂರುವಂತಿಲ್ಲ. ದಿನಕಳೆದಂತೆ
ಸದಾನಂದ ಗೌಡರ ಜನಪ್ರಿಯತೆ, ದೇವೇಗೌಡರ ಜೊತೆಗಿನ ಸಿಎಂ
ಸ್ಸ ಅನಂತ್‌ಕುಮಾರ್ ಸೇರಿ ಮುಖ್ಯಮಂತ್ರಿಯ ಬೆಂಬಲಕ್ಕೆ ನಿಂತಿದ್ದು
ಶಕ್ತಿ ಕುಂದಿಸುವುದು ಗ್ಯಾರಂಟಿ. ಇದು ಹೀಗೆ ಮುಂದುವರಿಯಿತೆಂದರೆ
ಗಿರುವ ಶಾಸಕರೆಲ್ಲ ಒಬ್ಬೊಬ್ಬರಾಗಿ ತನ್ನ ಕೈಬಿಡುತ್ತಾರೆ. ನಿನ್ನೆಮೊನ್ನೆಯ
ಬಂಟನಂತಿದ್ದ ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ ಈಗಾಗಲೇ
ನಂದ ಗೌಡರ ಪಾಳಯಕ್ಕೆ ಹಾರಿದ್ದಾನೆಂದರೆ ಇನ್ನು ಉಳಿಕೆ ಶಾಸಕರು
ಅಂತ ತನ್ನ ಬೆನ್ನಿಗಿರಲು ಸಾಧ್ಯ?

ಂಡ್ ಕೃಪೆಗಾಗಿ ಕಾದು ಕೂರುವುದೇ ವ್ಯರ್ಥ ಎನ್ನಿಸಿದೆ. ಯಡ್ಡಿಯ
ನಿವಾಸದಲ್ಲಿ ಬೆಂಬಲಿಗರ ಸಭೆ ಶುರುವಾಗಿದೆ. ಸಂಕ್ರಾಂತಿಯ ಒಳಗೇ
ತನ್ನ ನಿರ್ಧಾರ ಪ್ರಕಟಿಸುವಂತೆ ಮತ್ತೊಂದು ಸುತ್ತಿನ ಒತ್ತಡ ತಂತ್ರ
ಅದಕ್ಕೊಂದು ಜನವರಿ 7 ರಿಂದಲೇ ರಾಜ್ಯ ಪ್ರವಾಸದ ಬಳಿಕ
ರೂಪುಗೊಂಡಿದೆ. ಅವತ್ತು ಶಿವಮೊಗ್ಗದಿಂದ ತಮ್ಮ ಪ್ರವಾಸ
ನವರಿ 14 ರವರೆಗೆ ಬೆಂಗಳೂರು, ಬಾದಾಮಿ, ಬಿಜಾಪುರ,
, ಮುಧೋಳ, ಇಂಡಿಯಿಂದ ಮೊದಲಾಗಿ ತುಮಕೂರು, ಕೆ.ಆರ್.
ಗೆರೆ, ಚನ್ನಗಿರಿ, ಗುಲ್ಬರ್ಗಾ, ಬೆಳಗಾವಿ, ಉಡುಪಿ ಸುತ್ತಿಬರುವುದು
ತ್ರ.

ಜೆಪಿ ಬೆಂಕಿ ಬಿದ್ದ ಮನೆ. ಯಾವ ಗಳಿಗೆಯಲ್ಲಿ ಏನಾಗುತ್ತೆ ಎಂದು
ತ್ತಿಲ್ಲ. ಇಂಥದೊಂದು ಅನಾಹುತವನ್ನು ಲೆಕ್ಕ ಹಾಕಿಯೇ ಆರ್.
ಹಲಿಗೆ ಧಾವಿಸಿದ್ದಾರೆ. ಜನವರಿ 5 ರ ಗುರುವಾರ ದೆಹಲಿಯಲ್ಲಿ
ವರಿಷ್ಠರನ್ನು ಕಂಡು ಯಡ್ಡಿಯನ್ನು ಸಂಭಾಳಿಸುವಂತೆ ದುಂಬಾಲು
ಗೆ ಅಷ್ಟಿಷ್ಟು ಫಲವೂ ಸಿಕ್ಕಿರಬೇಕು. ಒಂದು ಮೂಲದ ಪ್ರಕಾರ
ದ ಅಧ್ಯಕ್ಷತೆ ವಹಿಸಿಕೊಡಲು ಈಗಾಗಲೇ ಹೈಕಮಾಂಡ್
ಈಶ್ವರಪ್ಪನನ್ನು ಉಪಮುಖ್ಯಮಂತ್ರಿ ಮಾಡಿ ಆ ಜಾಗಕ್ಕೆ ಯಡ್ಡಿಯನ್ನು
ಹಾಕುವ ಮತ್ತೊಂದು ತಂತ್ರವನ್ನು ದೆಹಲಿ ವರಿಷ್ಠರು ರೂಪಿಸಿದ್ದಾರಂತೆ.
ಎಡ್ಡಿ ಅದಕ್ಕೆ ಒಪ್ಪಬೇಕಲ್ಲ?

ಲ್ಲಿನ ದುಡ್ಡೇ ಬರುತ್ತಿಲ್ಲ ಎಂದಮೇಲೆ ಬಹುಪಾಲು ಬೇನಾಮಿ
ಮಾಡಿಯೇ ದುಡ್ಡು ದೋಚಲು ಹೊರಟ ಶಾಸಕರ ಪಾಡು
ಇದು ಒತ್ತಟ್ಟಿಗಿರಲಿ, ಈಗಾಗಲೇ ಮುಕ್ಕಿದ ಬಿಬಿಎಂಪಿಯ
ಕ್ಕಿಸಿಕೊಳ್ಳಬೇಕೆಂದರೆ ಅದೂ ಕೂಡ ಕಷ್ಟವೆ. ಏಕೆಂದರೆ ಸಿಐಡಿಯ
ಬಂದಿರುವುದು ರೂಪ್‌ಕುಮಾರ್ ದತ್ತ!

ಪೂರ್ವಕವಾಗೇ ದತ್ತರನ್ನು ಸಿ.ಎಂ. ಸಿಐಡಿಗೆ ತಂದರೋ ಅಥವಾ
ಉದ್ದೆಯೆಂದು ಭಾವಿಸಿ ನೇಮಿಸಲಾಯ್ತೋ ಗೊತ್ತಿಲ್ಲ. ದತ್ತ ಸಿಐಡಿಗೆ
ಕ ಪರಿಣಾಮವಂತೂ ಬಿಜೆಪಿ ಶಾಸಕರ ಪಾಲಿಗೆ ವಿನಾಶಕಾರಿಯೆ.
, ಜನಸಾಮಾನ್ಯರ ಪಾಲಿಗೆ ದತ್ತರನ್ನು ಸಿಐಡಿಗೆ ತಂದಿದ್ದು ಎಷ್ಟೇ
ವಾಗಿ ಕಂಡರೂ ದೋಚಿದ ಶಾಸಕರ ಪಾಲಿಗದು ಆಪತ್ತೆ!

ದಾದರೆ ಇನ್ನೊಂದೆಡೆ ಮುಖ್ಯಮಂತ್ರಿ ಸದಾನಂದ ಗೌಡರ ವಿರುದ್ಧ
ತ್ತಿಕಟ್ಟಿರುವುದು ಅಶೋಕ್‌ರನ್ನು. ಯಾವತ್ತು ಸದಾನಂದ ಗೌಡ
ಟ್ಟರೋ ಅದಕ್ಕೆ ಪ್ರತಿಯಾಗಿ ಯಡ್ಡಿ ಮಾಡಿದ ಕಪಟ ನಾಟಕವೆಂದರೆ
ಬಿಟ್ಟಿದ್ದು. 'ನೋಡಪ್ಪಾ.... ಗೌಡ ಬೆಳೀಲಿ ಅಂತ ಅವನನ್ನು
ಿದೆ. ಈಗ ನೋಡಿದ್ರೆ ಆತನೇ ನಮಕ್ ಹರಾಮಿ ಕೆಲಸ
ಷ್ಟೆಂದರೂ ಕರಾವಳಿ ಮಂದಿ ನಂಬಿಕೆಗೆ ಯೋಗ್ಯರಲ್ಲ. ಈ ರೀತಿ
ತ ಮೊದಲೇ ಗೊತ್ತಿದ್ದರೆ ಆತನ ಬದಲು ನಿನ್ನನ್ನೇ ಸಿ.ಎಂ.
ಮಾಡ್ತಾ ಇದ್ದೆ.....!'

ಳಿದ್ದೇ ತಡ ಅಶೋಕ್ ತಲೆ ತಿರುಗಿದೆ. ಇವತ್ತಲ್ಲ ನಾಳೆ ತಾನು
ಯಾಗಲೇಬೇಕೆಂದು ಹೊಂಟವರು ಅಶೋಕ್. ಯಡ್ಡಿಯ
ಗೌಡರ ಮಧ್ಯೆ ತಂದಿಟ್ಟು ತನ್ನ ಬೇಳೆ ಬೇಯಿಸಿಕೊಳ್ಳುವುದೇ
ೋಕ್ ತಲೆಗದು ಹೋಗಬೇಕಲ್ಲ? ಸಿಐಡಿಗೆ ದತ್ತರನ್ನು ತಂದಿದ್ದು,
ದುಡ್ಡು ತಡೆ ಹಿಡಿದದ್ದು ಸಿ.ಎಂ. ಪರೋಕ್ಷವಾಗಿ ತನ್ನನ್ನು
ಡೆಸುತ್ತಿರುವ ಹುನ್ನಾರವೆಂದೇ ಅಶೋಕ್ ಲೆಕ್ಕಾಚಾರ. ಹಾಗೊಮ್ಮೆ
ದ ಗೌಡರನ್ನು ಇಳಿಸಲು ಯತ್ನಿಸಿದ್ದೇ ಆದಲ್ಲಿ ಕನಿಷ್ಠ ಇನ್ನಾರು
ತಾನು ಮುಖ್ಯಮಂತ್ರಿಯಾಗಬಹುದಲ್ಲ ಎಂಬ ದುರಾಶೆ
ಹೊಕ್ಕಿದೆ. ಹಾಗಂತ ಇದನ್ನು ಅನಂತ್ ಬಳಿಯಾಗಲಿ, ಈಶ್ವರಪ್ಪ
ನೇರಾನೇರ ಹೇಳಿಕೊಳ್ಳುವಂತಿಲ್ಲ.

ಅಶೋಕ್ ಹೊಸ ತಂತ್ರವೊಂದನ್ನು ರೂಪಿಸಿದ್ದಾರೆ. ಅದು ಪಕ್ಷ
ಿವ ಯಡ್ಡಿಯನ್ನು ಸಂತೈಸುವ ನಾಟಕ. ಯಡ್ಡಿಯೇನಾದರೂ ಈ
ಒಡೆಯು ಹೊರಟರೆ ಅದು ನಮಗೇ ಆಪತ್ತು, ಹಾಗಾಗದಂತೆ
ಲ್ಲೂ ನಾಟಕವಾದರೂ ಯಡ್ಡಿಗೆ ಪೂಸಿ ಹೊಡೆಯಬೇಕು. ಯಡ್ಡಿ
ಮಾಡುವ ಹಾನಿಗಿಂತಲೂ ಅವರನ್ನು ಜೊತೆಗಿಟ್ಟುಕೊಂಡು
ವೇ ಲಾಭಕರ. ಜೊತೆಗೆ ಸಿಐಡಿಗೆ ತಂದ ದತ್ತರನ್ನು ಕಟ್ಟಿಹಾಕಲು
ಪಿಗೆ ಬಜೆಟ್ ಮೊತ್ತವನ್ನು ಬಿಡುಗಡೆ ಮಾಡಲು ಮುಖ್ಯಮಂತ್ರಿ
ತರ ಮೇಲೂ ಒತ್ತಡ ಹೇರಿದಂತಾಗುತ್ತದೆ.

ಲೆಕ್ಕಾಚಾರ ಹಾಕಿಯೇ ಅಶೋಕ್ ಗ್ಯಾಂಗ್ ಯಡ್ಡಿಯ ನಿವಾಸಕ್ಕೆ
ತಸ್ಯ ಬುಡಕ್ಕೇ ಬೆಂಕಿ ಬಿದ್ದಿರುವಾಗ ಯಡ್ಡಿಗೆ ಬೆಂಗಳೂರಿನ
ಗಾಡಲು ಸಮಯವೆಲ್ಲಿದೆ? ಅತ್ತ ಹೈಕಮಾಂಡ್ ಕ್ಯಾರೇ
ಮುಖ್ಯಮಂತ್ರಿಯೂ ಮಾತು ಕೇಳುತ್ತಿಲ್ಲ, ಪರಿಸ್ಥಿತಿ ಹೀಗೇ
ೆ ಜೊತೆಗಿರುವ ಶಾಸಕರೂ ನಿಲ್ಲುವ ಲಕ್ಷಣವಿಲ್ಲ. ಅಜ್ಜಿಗೆ ಅರಿವೆ
ಂಗಳಿಗೆ ಇನ್ನೆಂಥದೋ ಚಿಂತೆಯೆಂಬಂತೆ ಬಂದ ಶಾಸಕರೆದುರು
ಳಿಕೊಂಡಿದ್ದಾರೆ ಯಡ್ಡಿ, ತನ್ನ ಬುಡವೇ ಅಲುಗಾಡುತ್ತಿರುವಾಗ
ಗ ಅಶೋಕ್ ಹುನ್ನಾರಕ್ಕೆ ಹೆಗಲು ಕೊಡಲು ಅಸಕ್ತಿ, ಉತ್ಸಾಹ

ಡಿವಿಎಸ್-ಜೆಡಿಎಸ್ ಸಂಸಾರ ಶುರು

ಪರಿಷತ್ ಚುನಾವಣೆಯಲ್ಲಿ ನಿರಾಯಾಸವಾಗಿ ಗೆದ್ದ ಮುಖ್ಯಮಂತ್ರಿ ಸದಾನಂದ ಗೌಡರು ಜೆಡಿಎಸ್‌ನ ಋಣ ತೀರಿಸಿದ್ದು ಹೇಗೆ?

ಡಿಸೆಂಬರ್ 27 ರ ಮಂಗಳವಾರ ಸಂಜೆ ದೆಹಲಿಯಲ್ಲಿ ಸದಾನಂದ ಗೌಡ ಸಂಸದರಿಗೆಂದು ಕೊಟ್ಟ ಔತಣಕೂಟಕ್ಕೆ ದೇವೇಗೌಡರು ವಿಶೇಷ ಮುತುವರ್ಜಿ ವಹಿಸಿ ಹೋಗಿದ್ದು, ಡಿಸೆಂಬರ್ 22 ರ ಪರಿಷತ್ ಚುನಾವಣೆಗೂ ಮೂರು ದಿನಗಳ ಮುನ್ನ ಜೆಡಿಎಸ್ ನಾಯಕ ಕುಮಾರಸ್ವಾಮಿ ಜೊತೆ ಸದಾನಂದ ಗೌಡ ಮಾಡಿದ ರಹಸ್ಯ ಭೇಟಿ, ಇದಕ್ಕೆ ಪೂರಕವೆಂಬಂತೆ ಜೆಡಿಎಸ್‌ನ ಮತ್ತೊಬ್ಬ ಅಧಿಪತಿ ರೇವಣ್ಣನ ಜೊತೆ ಮುಖ್ಯಮಂತ್ರಿಗಳು ಪದೇಪದೇ ನಡೆಸಿದ ಡೀಲು–ಇದೆಲ್ಲವೂ ಮೇಲುನೋಟಕ್ಕೆ ಸದಾನಂದ ಗೌಡ ಮತ್ತು ದೇವೇಗೌಡರ ಒಳ ನೆಂಟಸ್ತಿಕೆಯಂತೆ ಕಂಡರೂ ಅದರ ಆಳ-ವಿಸ್ತಾರವೇ ಬೇರೆಯಿದೆ.

ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ತಟಸ್ಥವಾಗುಳಿದದ್ದು ಸದಾನಂದ ಗೌಡರನ್ನು ಗೆಲ್ಲಿಸುವ ಏಕೈಕ ಉದ್ದೇಶಕ್ಕೇ ಹೊರತು ಮತ್ತೇನಕ್ಕೂ ಅಲ್ಲ ಎಂಬುದು ಸದ್ಯ ಗುಟ್ಟಾಗಿ ಉಳಿದಿಲ್ಲ. ಪ್ರಶ್ನೆಯೆಂದರೆ ಕೇವಲ ಒಕ್ಕಲಿಗನೆಂಬ ಒಂದೇ ಕಾರಣಕ್ಕೆ ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ ಸದಾನಂದ ಗೌಡರ ಗೆಲುವಿಗೆ ಸಹಕರಿಸುವುದುಂಟಾ? ಹತ್ತುಪಟ್ಟು ಲಾಭವಿಲ್ಲದೆ ಈ ಮಣ್ಣಿನ ಮಕ್ಕಳು ಯಾರಿಗಾದರೂ ನಯಾಪೈಸೆಯ ನೆರವಾಗುವುದುಂಟಾ? ಏನದು? ಯಾವ್ಯಾವ ಲಾಭದ ಲೆಕ್ಕಾಚಾರ ಹಾಕಿ ಜೆಡಿಎಸ್ ಮುಖ್ಯಮಂತ್ರಿ ಪರ ತಟಸ್ಥವಾಗುಳಿಯಿತು? ಏಕೆ ರಾತ್ರಿ 11 ರ ನಂತರವೇ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾಕ್ಕೆ ಎಚ್.ಡಿ. ರೇವಣ್ಣ ಕದ್ದೂಮುಚ್ಚಿ ಬರುತ್ತಾರೆ?



ಹೀಗೆ ಒಂದರ ಮೇಲೊಂದಾಗಿ ಹೊಗೆಯಾಡುವ, ಡಿವಿಎಸ್-ಜೆಡಿಎಸ್ ನೆಂಟಸ್ತಿಕೆ ಕುರಿತ ಊಹಾಪೋಹಗಳ ಪರಿಣಾಮ ನಿಜಕ್ಕೂ ಕುತೂಹಲಕರ. ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ತಟಸ್ಥವಾಗುಳಿಯುವ ನಿರ್ಧಾರ ಪ್ರಕಟಿಸಿದ್ದೇ ತಡ, ಖುಷಿಗೆ ಬಿದ್ದ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ಮೇಲೆ ಬಿದ್ದು ದೇವೇಗೌಡರ ಜೊತೆ ಮಾತುಕತೆಗಿಳಿದರು. ತಾವೇ ಹೋಗಿ ಕುಮಾರಸ್ವಾಮಿಯನ್ನು ಕಂಡುಬಂದರು. ಪಾಪ, ಪರಮೇಶ್ವರ್‌ಗೆ ಎಲ್ಲಿ ಗೊತ್ತಿತ್ತು ಜೆಡಿಎಸ್‌ನ ಅಸಲಿ ಮರ್ಮ!



ಸದಾನಂದ ಗೌಡರು ಏನೇ ಆರೆಸ್ಸೆಸ್, ಚೆಡ್ಡಿ ಅಂದರೂ ಜಾತಿಯಲ್ಲಿ ಒಕ್ಕಲಿಗ. ತಮ್ಮವನೊಬ್ಬ ಮುಖ್ಯಮಂತ್ರಿಯಾಗಿದ್ದನ್ನು ತಪ್ಪಿಸಿದ ಕಳಂಕವೇನಾದರೂ ಜೆಡಿಎಸ್‌ಗೆ ಅಂಟಿಕೊಂಡರೆ ಸಹಜವಾಗೇ ಅದು ದೇವೇಗೌಡರ ಓಟ್‌ಬ್ಯಾಂಕಿಗೆ ಹಾನಿಯೊಡ್ಡುತ್ತದೆ. ಮತ್ತೊಂದೆಡೆ ಕಾಂಗ್ರೆಸ್ ನಾಯಕ ಕೃಷ್ಣ ಬೇರೆ ಪದೇಪದೇ ರಾಜ್ಯಕ್ಕೆ ಭೇಟಿ ಕೊಟ್ಟು ತಮ್ಮದೇ ಒಕ್ಕಲಿಗ ಸಾಮ್ರಾಜ್ಯಕ್ಕೆ ಸೆಡ್ಡು ಹೊಡೆಯುತ್ತಿರುವುದು ದೇವೇಗೌಡರಿಗೆ ಹೇಳಿಕೊಳ್ಳಲಾಗದ ಸಂಕಟವೆ. ಜೆಡಿಎಸ್ ಕೋಟೆಗೆ ಅಸಲಿ ಆತಂಕ ಅಂತಿದ್ದರೆ ಅದು ಯಡಿಯೂರಪ್ಪ ಮತ್ತು ಕೃಷ್ಣ ಮಾತ್ರ.

ಒಂದೆಡೆ ಯಡಿಯೂರಪ್ಪನ ವಿರುದ್ಧ ಸದಾನಂದ ಗೌಡರನ್ನು ಎತ್ತಿಕಟ್ಟಿದಂತೆಯೂ ಇರಬೇಕು. ಯಡ್ಡಿ ಮತ್ತು ಡಿವಿಎಸ್ ಮಧ್ಯೆ ಅಂತರವೂ ಹೆಚ್ಚಬೇಕು. ಹಾಗೆ ಸದಾನಂದ ಗೌಡರನ್ನು ಬೆಂಬಲಿಸುವ ಮೂಲಕ ಎಸ್.ಎಂ. ಕೃಷ್ಣರ ವರ್ಚಸ್ಸನ್ನೂ ತಡೆಗಟ್ಟಬೇಕು. ಇದೆಲ್ಲಕ್ಕೂ ದೇವೇಗೌಡರು ಬಳಸಿಕೊಂಡಿದ್ದು ಪರಿಷತ್ ಚುನಾವಣೆಯ ಪಕ್ಷಗಳ ಬಲಾಬಲದ ಲೆಕ್ಕಾಚಾರ. ಏನೇ ಇದ್ದರೂ ಜೆಡಿಎಸ್‌ನ 26 ಮತಗಳೇ ಇಲ್ಲಿ ನಿರ್ಣಾಯಕ. ಶ್ರೀರಾಮುಲು ಗಣಿರೆಡ್ಡಿಗಳ ಪರ ವಹಿಸಿ ತನಗೆ 22 ಶಾಸಕರ ಬೆಂಬಲವಿದೆ ಎಂದು ಎಷ್ಟೇ ಭಡಾಯಿಕೊಚ್ಚಿದರೂ ಎಂಟಕ್ಕಿಂತ ಅಧಿಕ ಮಂದಿ ಗಣಿ ರೆಡ್ಡಿಗಳ ಜೊತೆಗಿಲ್ಲ ಎಂಬ ವಾಸ್ತವ ದೇವೇಗೌಡರಿಗೆ ಚೆನ್ನಾಗಿ ಅರ್ಥವಾಗಿತ್ತು, ಆರು ಮಂದಿ ಪಕ್ಷೇತರರು ಕೂಡ ಈ ಹಂತದಲ್ಲಿ ಎಷ್ಟು ಕೋಟಿ ಗಿಟ್ಟಬಹುದೆಂಬ ದುರಾಶೆಗೆ ಬೀಳುತ್ತಾರೆಯೇ ಹೊರತು ವಿನಾಕಾರಣ ರಿಸ್ಕ್‌ಗೆ ಕೈಹಾಕುವುದಿಲ್ಲ, ಈ ಪಕ್ಷೇತರರು, ಶ್ರೀರಾಮುಲು ಕಡೆಯ ಓಟುಗಳು, ಅತೃಪ್ತರು; ಇತ್ಯಾದಿ ಏನೆಲ್ಲ ಎಂದು ಸದಾನಂದ ಗೌಡರನ್ನು ಸೋಲಿಸ ಹೊರಟರೂ ಆ ಸಂಖ್ಯೆ ಎತ್ತಿಂದೆತ್ತ ಲೆಕ್ಕ ಹಾಕಿದರೂ ತೊಂಭತ್ತನ್ನು ಮೀರಲು ಸಾಧ್ಯವೇ ಇಲ್ಲ.



ಆದರೆ ಸದಾನಂದ ಗೌಡರ ಸ್ಥಿತಿ ಹಾಗಲ್ಲ, ಬಿಜೆಪಿಯದ್ದೇ ಎಂದು 121 ಓಟುಗಳಿವೆ. ಇದಕ್ಕೆ 6 ಮಂದಿ ಪಕ್ಷೇತರರ ಓಟು ಬಿದ್ದರೂ ಅದು 127 ಮುಟ್ಟಲೇಬೇಕು. ಯಾವ ರೀತಿಯಲ್ಲೂ ಡಿವಿಎಸ್ ಸೋಲುವುದು ಸಾಧ್ಯವೇ ಇಲ್ಲ, ಅದೇ ಜೆಡಿಎಸ್ ಕಾಂಗ್ರೆಸ್ ಜೊತೆ ಕೈಜೋಡಿಸಿತೆಂದರೆ ಕತೆ ಬೇರೆಯಾಗುತ್ತದೆ. ಆಗ ಪಕ್ಷೇತರ ಜೊತೆ ಗಣಿ ಶಾಸಕರೂ ಕೈಜೋಡಿಸಿ ಸದಾನಂದ ಗೌಡರ ಸೋಲಿಗೆ ಹಣ ತೊಟ್ಟರೆಂದರೆ ಬಿಜೆಪಿಯಲ್ಲೇ ಇರುವ ಅತೃಪ್ತರ ಗುಂಪಿಗೆ ಜೀವ ಬರುತ್ತದೆ. ಆಗ ಯಡ್ಡಿ ಕಡೆಯಿಂದಲೋ, ಬಿಜೆಪಿಯಲ್ಲಿ ಇರುವ ಅವಕಾಶವಾದಿಗಳೋ ಯಾರು ಬೇಕಾದರೂ ಸದಾನಂದ ಗೌಡರನ್ನು ಬ್ಲ್ಯಾಕ್‌ಮೇಲ್ ಮಾಡಬಹುದು. ಇಂಥ ಯಾವ ತಾಪತ್ರಯಕ್ಕೂ ಅವಕಾಶ ಇರಬಾರದೆಂದರೆ ಅದು ದೇವೇಗೌಡರ ಜೊತೆ ಕೈ ಜೋಡಿಸಿದರೆ ಮಾತ್ರವೇ ಸಾಧ್ಯ ಎಂಬುದು ಸದಾನಂದ ಗೌಡರ ಪಕ್ಕಾ ಲೆಕ್ಕಾಚಾರವಾಗಿತ್ತು, ದೇವೇಗೌಡರಿಗೂ ಅದೇ ಬೇಕಿತ್ತು.

ಜೆಡಿಎಸ್ ಓಟುಗಳೆಲ್ಲ ತಮಗಲ್ಲದೆ ಇನ್ನಾರಿಗೆ ಬೀಳಲು ಸಾಧ್ಯ ಎಂದೇ ಲೆಕ್ಕಹಾಕಿ ಗದಗದ ಗಡ್ಡದೇವರ ಮಠರನ್ನು ಸದಾನಂದ ಗೌಡರ ವಿರುದ್ಧ ಕಣಕ್ಕಿಳಿಸಿದ್ದ ಪರಮೇಶ್ವರ್‌ಗೆ ಜೆಡಿಎಸ್-ಡಿವಿಎಸ್ ಒಳಸಂಬಂಧದ ಅರಿವಾಗಿದ್ದು ಡಿಸೆಂಬರ್ 22 ರ ಹಿಂದಿನ ರಾತ್ರಿಯೇ. ಮರುದಿನ ಸಂಜೆಗದು ಇನ್ನೂ ನಿಚ್ಚಳವಾಗಿತ್ತು, 71 ಮಂದಿ ಕಾಂಗ್ರೆಸ್ ಶಾಸಕರಿದ್ದರೂ ಗಡ್ಡದೇವರಮಠರಿಗೆ ದಕ್ಕಿದ್ದು ಕೇವಲ 69 ಮತಗಳು ಮಾತ್ರ. ಪರಿಷತ್ ಚುನಾವಣೆಯಲ್ಲಿ ತಾನು ಮುಖ್ಯಮಂತ್ರಿಯನ್ನು ಸೋಲಿಸಬಾರದೆಂದರೆ ತನ್ನ ಭವಿಷ್ಯವನ್ನು ಅದಕ್ಕೂ ಮೊದಲೇ ನಿರ್ಧರಿಸಿ ಎಂದು ಹೈಕಮಾಂಡಿಗೆ ಸೆಡ್ಡು ಹೊಡೆದಿದ್ದ ಯಡ್ಡಿ ಜೆಡಿಎಸ್‌ನಿಂದಾಗಿ ಕೊನೆಗಳಿಗೆಯಲ್ಲಿ ತಮ್ಮ ದುಸ್ಸಾಹಸ ಕೈಬಿಟ್ಟು ತೆಪ್ಪಗಾಗಿದ್ದರು. ಡಿವಿಎಸ್ ಮತ್ತು ಜೆಡಿಎಸ್ ಮಧ್ಯೆ ಸಂಬಂಧ ಕುದುರಿದ ಸುದ್ದಿ ಗೊತ್ತಾಗಿಯೇ ಶ್ರೀರಾಮುಲು ತನ್ನ ಬುಡಮೇಲು ಕಾರ್ಯಾಚರಣೆಯನ್ನು ಕೈಬಿಟ್ಟು ಮುಖ್ಯಮಂತ್ರಿಗೆ ಶರಣಾದನು. ಪಕ್ಷೇತರರು, ಅತೃಪ್ತರು ಎಲ್ಲರಿಗೂ ಜೆಡಿಎಸ್ ಮುಖ್ಯಮಂತ್ರಿಯ ಬೆನ್ನಿಗಿರುವುದು ಗೊತ್ತಾಗಿ ಒಂದಷ್ಟು ಗುಂಜಿಕೊಂಡು ಬಿಜೆಪಿ ಪರ ಮತಹಾಕುವ ನಿರ್ಧಾರಕ್ಕೆ ಬಂದುಬಿಟ್ಟರು.

ಡಿವಿಎಸ್-ಜೆಡಿಎಸ್ ಒಳನೆಂಟಸ್ತಿಕೆಯಿಂದಾಗಿ ಏಕಕಾಲಕ್ಕೆ ಹತ್ತಾರು ಲಾಬಿಗಳು, ಕೂಟಗಳ ಬಾಯಿ ಬಂದ್ ಆಗಿತ್ತು!

ಹಾಗಂತ ದೇವೇಗೌಡರಾಗಲಿ, ಕುಮಾರಸ್ವಾಮಿಯಾಗಲಿ, ರೇವಣ್ಣನೇ ಆಗಲಿ ಕೇವಲ ಸದಾನಂದ ಗೌಡರ ಕುರ್ಚಿ ಉಳಿಸಿದ ಮಾತ್ರಕ್ಕೆ, ಅಥವಾ ಒಕ್ಕಲಿಗರ ಓಟ್‌ಬ್ಯಾಂಕ್ ಎಂಬ ಒಂದೇ ಕಾರಣಕ್ಕೆ ಜೆಡಿಎಸ್ ಅನ್ನು ತಟಸ್ಥಗೊಳಿಸುವಂಥ ಮಹತ್ವದ ನಿರ್ಧಾರಕ್ಕೆ ಕೈಹಾಕುವವರಲ್ಲ, ಅವರಿಗೆ ದೊಡ್ಡ ಲಾಭವಾಗಲೇಬೇಕು. ಸದ್ಯ ಬಿಜೆಪಿಯ ಆಯಕಟ್ಟಿನ ಮೂಲವೊಂದರ ಮಾಹಿತಿಯನ್ನೇ ನಂಬುವುದಾದರೆ ಡಿವಿಎಸ್-ಜೆಡಿಎಸ್ ದೋಸ್ತಿಯ ಒಟ್ಟೂ ಲಾಭದ ಮೊತ್ತ ಹತ್ತುಕೋಟಿ ಮತ್ತು ಆ 22 ಫೈಲುಗಳು!

ಸದಾನಂದಗೌಡ ಮತ್ತು ಕುಮಾರಣ್ಣನ ಮುಖಾಮುಖಿಯಲ್ಲಿ ಟೋಕನ್ ಅಡ್ವಾನ್ಸ್ ಎಂದು ಸದಾನಂದಗೌಡರು ಹತ್ತು ಕೋಟಿಯ ಕಾಣಿಕೆ ಸಲ್ಲಿಸಿದರೆಂಬುದಕ್ಕೆ ಯಾವುದೇ ಆಧಾರವಿಲ್ಲ. ಯಡ್ಡಿಯ ಹಾಗೆ ದೊಡ್ಡ ಮೊತ್ತದ ರೊಕ್ಕ ಬಿಚ್ಚುವ ಆಸಾಮಿಯಲ್ಲ ಸದಾನಂದ ಗೌಡ. ಗಣಿ ರೆಡ್ಡಿಗಳ ಹಾಗೆ ಧಾರಾಳಿಯಾಗಲಿ, ಧೈರ್ಯವಂತನಾಗಲಿ ಅಲ್ಲವೇ ಅಲ್ಲ, ಹತ್ತು ಕೋಟಿ ಏನೆಂದು ಕೊಟ್ಟಾರ್ರು? ಯಾವ ರೂಪದಲ್ಲಿ ಕೊಟ್ಟಾರು?



ದೇವೇಗೌಡರು ಹೇಳಿದ 12 ಪ್ರಮುಖ ಫೈಲುಗಳು ಮತ್ತು ರೇವಣ್ಣನ ಎಂಟು ಫೈಲುಗಳು, ಜೊತೆಗೆ ಕುಮಾರಸ್ವಾಮಿಯ ಎರಡು ಫೈಲುಗಳನ್ನು ಕ್ಲಿಯರ್ ಮಾಡಿಕೊಡಲು ಸದಾನಂದ ಗೌಡರು ಒಪ್ಪಿದ ನಂತರವೇ ಜೆಡಿಎಸ್ ತನ್ನ ತಟಸ್ಥ ನಿರ್ಧಾರಕ್ಕೆ ಕಟಿಬದ್ಧವಾಯಿತೆಂಬುದು ಮತ್ತೊಂದು ಸುದ್ದಿ. ದೇವೇಗೌಡರ 12 ಫೈಲುಗಳು ಯಾವ ಕಾಂಟ್ರಾಕ್ಟು, ಕಾಮಗಾರಿ ಬಿಲ್ಲು ಅಥವಾ ಡಿನೋಟಿಫಿಕೇಷನ್ನಿಗೆ ಸಂಬಂಧಪಟ್ಟವು? ರೇವಣ್ಣನ ಎಂಟು ಫೈಲುಗಳ ಲಾಭದ ಮೊತ್ತವೆಷ್ಟು? ಕುಮಾರಸ್ವಾಮಿಯ ಆ ಎರಡು ಫೈಲುಗಳು ಯಾವ ಯೋಜನೆಗೆ, ಟೆಂಡರಿಗೆ ಅಥವಾ ಬಿಡಿಎ ಲ್ಯಾಂಡಿಗೆ ಸಂಬಂಧಪಟ್ಟವು?


ಫೈಲುಗಳ ಸಂಖ್ಯೆ ಒತ್ತಟ್ಟಿಗಿರಲಿ, ಅವುಗಳು ಕಲ್ಪಿಸುವ ಲಾಭದ ಮೊತ್ತ ಎಷ್ಟು? ಕೋಟಿ ಇರಬಹುದು?

ಡಿವಿಎಸ್-ಜೆಡಿಎಸ್ ದೋಸ್ತಿಯ ಶಕೆಯಂತೂ ಶುರುವಾಗಿದೆ. ನಾಳೆ ಯಡ್ಡಿ ತನ್ನ ಬೆಂಬಲಿಗರೊಂದಿಗೆ ಬಿಜೆಪಿ ವಿರುದ್ಧ ತಿರುಗಿಬಿದ್ದರೆ ಆಗ ಜೆಡಿಎಸ್ ಸದಾನಂದ ಗೌಡರ ಬೆಂಬಲಕ್ಕೆ ನಿಲ್ಲುವುದಂತೂ ಗ್ಯಾರಂಟಿ. ಮತ್ತೊಂದೆಡೆ ಯಡ್ಡಿಯನ್ನು ಛೂಬಿಟ್ಟು ಕಾಂಗ್ರೆಸ್ ಅನ್ನು ಛಿದ್ರಗೊಳಿಸಿ ಎನ್‌ಸಿಪಿ ಹುಟ್ಟುಹಾಕುವ ಷಡ್ಯಂತ್ರಕ್ಕೂ ಕುಮಾರಸ್ವಾಮಿ-ದೇವೇಗೌಡರೇ ತುಪ್ಪ ಸುರಿಯುತ್ತಿದ್ದಾರೆ.

ಕಾಂಗ್ರೆಸ್ ಚೂರಾದರೂ, ಬಿಜೆಪಿ ಹೋಳಾದರೂ, ಯಡ್ಡಿ ಬಂಡೆದ್ದರೂ, ಸದಾನಂದ ಗೌಡ ತಿರುಗೇಟು ಕೊಟ್ಟರೂ- ಲಾಭ ಮಾತ್ರ ಜೆಡಿಎಸ್‌ಗೇ ತಾನೇ?

ಉತ್ತರ ಕನ್ನಡ


ಡಿಸಿ ಎತ್ತಂಗಡಿಯೂ ಕಾಗೇರಿ ಕರಾಮತ್ತೂ !



ಉತ್ತರ ಕನ್ನಡದ ಉಸ್ತುವಾರಿ ಮಂತ್ರಿಯೆಂದು ಅದ್ಯಾವ ಕೆಟ್ಟ ಕ್ಷಣದಲ್ಲಿ ಕಾಗೇರಿ ಹೆಗಡೆ ಎಂಬ ಸಂಘ ಪರಿವಾರದ ಪುರೋಹಿತನ ನೇಮಣೂಕಿ ಆಯ್ತೋ ಏನೋ? ಆ ಗಳಿಗೆಯಿಂದಲೇ ಈ ನತದೃಷ್ಟ ಜಿಲ್ಲೆಯಲ್ಲಿ ತರಹೇವಾರಿ ಅವಾಂತರ-ಅಕ್ರಮ-ಅನ್ಯಾಯ-ಅನಾಹುತಗಳೆಲ್ಲ ಶುರುವಾಗಿ ಹೋಯ್ತು! ಸ್ವಜಾತಿ ಹಾರವ ಸಾಮ್ರಾಜ್ಯ ಕಟ್ಟುವ ಅಜೆಂಡಾ ಇಟ್ಟುಕೊಂಡು ಅಧಿಕಾರವನ್ನು ಯದ್ವಾತದ್ವಾ ಚಲಾಯಿಸುತ್ತಿರುವ ಈ ಗುಳ್ಳೆ ನರಿಯ ಹುಚ್ಚಾಟದಿಂದ ಇಡೀ ಜಿಲ್ಲೆಯಲ್ಲಿ ಅರಾಜಕತೆ-ಅಧ್ವಾನಗಳೇ ತಾಂಡ ವಾಡುತ್ತಿವೆ. ಕಾಗೇರಿಯ ಸ್ಯಾಡಿಸ್ಟ್ ಪರಿಕಲ್ಪನೆಯಿಂದ ಪ್ರಗತಿಯೆಂಬುದು ಮರೀಚಿಕೆಯಂತಾಗಿ ಉತ್ತರ ಕನ್ನಡ ಬಂಜರು ಭೂಮಿಯಂತಾಗಿ ಹೋಗಿದೆ.

ಜಿಲ್ಲೆಯ ಭೌಗೋಳಿಕ ಉದ್ದಗಲದ ಪರಿಚಯವೇ ಇಲ್ಲದ ಈ ನಾಲಾಯಕ್ ಪುಢಾರಿಗೆ ಯಾವ ಸಮಸ್ಯೆಯೂ ಪರಿಹಾರ ವಾಗೋದು ಬೇಕಾಗಿಲ್ಲ. ಸ್ವಕ್ಷೇತ್ರ ಶಿರಸಿ-ಸಿದ್ಧಾಪುರದ ಆಚೀಚೆಯ ಹೈಗರ ಏರಿಯಾಬಿಟ್ಟರೆ ಕಾಗೇರಿಗೆ ಉಳಿದೆಡೆಯ ಅಬ್ರಾಹ್ಮಣ ಜನರು-ಅವರ ಜೀವನವೆಂದರೆ ಲೆಕ್ಕಕ್ಕೇ ಇಲ್ಲ. ಈ ಚಡ್ಡಿ ಚತುರ ಅದೆಂಥ ಅನಾಹುತಕಾರಿ ಜಾತಿವಾದಿಯೆಂದರೆ, ಜನಿವಾರ ನಡುವೆ ಇಟ್ಟು ಜಿಲ್ಲೆಯನ್ನು ಎರಡಾಗಿ ಒಡೆದುಹಾಕಿದ್ದಾನೆ. ಕಾಗೇರಿಯ ತಾರತಮ್ಯ ನೀತಿಯಿಂದಾಗಿ ಎಲ್ಲೂ ಇಲ್ಲದ ಜಲ್ಲಿಕಲ್ಲಿನ ಸಮಸ್ಯೆ-ಮರಳು ಸಮಸ್ಯೆ ಉತ್ತರ ಕನ್ನಡದಲ್ಲಷ್ಟೇ ತಲೆದೋರಿದೆ. ಅಭಿವೃದ್ಧಿ ಕಾಮಗಾರಿಗಳೆಲ್ಲ ಈ ಅಗತ್ಯ ವಸ್ತು ಕೊರತೆಯಿಂದಾಗಿ ನಿಂತುಹೋಗಿದೆ; ಸಂಕಷ್ಟಕ್ಕೀಡಾಗಿರುವ ಜನತೆ ಕಾಗೇರಿಗೆ ಹಿಡಿಶಾಪ ಹಾಕುತ್ತ ಲಟಿಕೆ ಮುರಿಯುತ್ತಿದ್ದಾರೆ.

ಮಂತ್ರಿಗಿರಿಯ ದೌಲು-ಧರತಿಯಲ್ಲಿ ನಾಲ್ಕು ವರ್ಷ ಕಳೆದಿರುವ ಕಾಗೇರಿ ಈ ಅವಧಿಯಲ್ಲಿ ಒಂದೇ ಒಂದು ಜನಪರ ಕೆಲಸ ಮಾಡಿದ ಕುರುಹೂ ಕಾಣಿಸದು. ಕಿಕ್‌ಬ್ಯಾಕ್-ಪರ್ಸೆಂಟೇಜ್ ವ್ಯವಹಾರವನ್ನು ನಾಜೂಕಾಗಿ ನಡೆಸುತ್ತಿರುವ ಕಾಗೇರಿ ಮಾಣಿ ಸ್ವಂತ ತಮ್ಮನನ್ನೇ ಲೇವಾದೇವಿ ಏಜೆಂಟನಾಗಿ ನೇಮಿಸಿಕೊಂಡಿದ್ದಾನೆ. ತಾನೊಬ್ಬ ಹುಟ್ಟಾ ಆಗರ್ಭ ಶ್ರೀಮಂತ-ಲಂಚದ ಕಾಸಿನ ಅವಶ್ಯಕತೆಯಿಲ್ಲದ ಪರಮಪವಿತ್ರನೆಂದು ಪೋಸು ಕೊಡುವ ಕಾಗೇರಿ ಇವತ್ತು ಮಲ್ಟಿ ಮಿಲೇನರ್ ಎಂದು ಘಟ್ಟದ ಮೇಲಿನ ಹೈಗರೇ ಪಿಸುಗುಡುತ್ತಾರೆ. ತಾನು-ತನ್ನವರೆಂಬ ಸ್ವಾರ್ಥದಲ್ಲಿ ಮುಳುಗಿರುವ ಕಾಗೇರಿಗೆ ತನ್ನನ್ನು ಮಂತ್ರಿಗಿರಿಯಂಥ ದೊಡ್ಡ ಸ್ಥಾನ-ಮಾನಕ್ಕೇರಿಸಿದ ಜನರ ಋಣ ತೀರಿಸಬೇಕೆಂಬ ಸಣ್ಣ ಕೃತಜ್ಞತಾ ಭಾವವೂ ಇಲ್ಲ!



ಕಾಗೇರಿ

ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ, ಕೈಗಾ ಅಣು ವಿದ್ಯುತ್ ಮತ್ತು ಕಾಳಿ ಜಲವಿದ್ಯುತ್ ಯೋಜನಾ ಬಾಧಿತರ ಸಂಕಷ್ಟ, ಜೋಯಿಡಾ ಎಂಬ ನರಕದ ನರಳಾಟ, ಜಿಲ್ಲಾ ಆಸ್ಪತ್ರೆಯೆಂಬ ಕಟುಕರ ಅಡ್ಡೆಯ ಆರ್ಭಟ, ರೈತ-ಮೀನುಗಾರರ ಬವಣೆ, ಬಡ ಅರಣ್ಯ ಅತಿಕ್ರಮಣದಾರರ ಗೋಳು, ಆದಿವಾಸಿ ಹಾಲಕ್ಕಿ-ಗೌಳಿ-ಕುಣಬಿ-ಸಿದ್ಧಿಗಳ ಯಾತನೆ.... ಇದ್ಯಾವುದೂ ಕಾಗೇರಿ ಮಾಣಿಗೆ ಕಾಣಿಸಿದ್ದಾಗಲೀ, ಕೇಳಿಸಿದ್ದಾಗಲೀ ಇಲ್ಲವೇ ಇಲ್ಲ. ಹಾಗಂತ ಈ ಮಹಾಬ್ರಾಹ್ಮಣ ಸ್ವಜಾತಿ ಜನಗಳಿಗೇನಾದರೂ ಕುಂದು-ಕೊರತೆಯಾದರೆ ಅದು ಕಾನೂನುಬಾಹಿರವೇ ಇದ್ದರೂ ಅವರ ರಕ್ಷಣೆಗೆ ಕಚ್ಚೆಕಟ್ಟಿಕೊಳ್ಳುತ್ತ ಓಡುತ್ತಾನೆ!

ಕಾಗೇರಿ ಮಾಣಿಯ ಕೊಳಕು ಗುಣವೆಂದರೆ, ತಾನೂ ಜನರ ಬೇಕು-ಬೇಡಗಳಿಗೆ ಸ್ಪಂದಿಸುವುದಿಲ್ಲ, ಜನಸಾಮಾನ್ಯರೊಂದಿಗೆ ಬೆರೆವ ಕರ್ತವ್ಯ ನಿಷ್ಠ ಅಧಿಕಾರಿಗಳು ಜಿಲ್ಲೆಯಲ್ಲಿ ಉಳಿಯಲಿಕ್ಕೂ ಬಿಡುವುದಿಲ್ಲ! ಕಾಗೇರಿಯ ಹುಸಿ-ಹುಸಿ ಹೊಟ್ಟೆಕಿಚ್ಚಿನಿಂದಾ... ಜಿಲ್ಲಾಧಿಕಾರಿಯಂಥ ಆಯಕಟ್ಟಿನ ಅಧಿಕಾರಿಗಳಿಗೆ ಇಲ್ಲಿ ಉಳಿಗಾಲ ಇಲ್ಲದಂತಾಗಿದೆ. ಕಾಗೇರಿ ಮಾಣಿಯ ನಾಲ್ಕು ವರ್ಷದ ಮಂತ್ರಿಗಿರಿ ದರ್ಬಾರಿನಲ್ಲಿ ಬರೋಬ್ಬರಿ 7 ಜಿಲ್ಲಾಧಿಕಾರಿಗಳು ಉತ್ತರ ಕ... ಕಂಡುಹೋಗಿದ್ದಾರೆ!! ಕಾಗೇ... ಸಾಹೇಬರು 'ಸರ್ಕಾರಿ ಗೂಟ... ಕಾರೇರಿದ ಒಂದೇ ತಿಂಗಳಿಗೆ... ಮುನಿಷ್ ಮೌದ್ಗಿಲ್ ಎಂಬ ಕಡಕ್ ಡಿಸಿ ವರ್ಗಾವಣೆಗೊಂಡು ಹೋದರು... ಆನಂತರ ಬಂದ ಡಾ. ಗೋವಿಂದ ರಾಜ್ ಜಿಲ್ಲೆಯಲ್ಲಿದ್ದದ್ದು 2008 ರ ಜು... 28 ರಿಂದ 2009 ರ ಫೆಬ್ರವರಿ 5 ರವರೆಗಷ್ಟೇ. ಆತನಿಗೆ "ಖೋ" ಕೊಟ್ಟಾ... ಎನ್.ಎಸ್. ಚೆನ್ನಪ್ಪಗೌಡನೆಂಬ ಚಮತ್ಕಾರಿ. ಬರೀ ಒಂದೂವರೆ ತಿಂಗಳು ... ಮಾತ್ರ ಕಾರವಾರದಲ್ಲಿದ್ದ ಈತನ ಸ್ಥಾನಕ್ಕೆ ಲೋಕಸಭಾ ಚುನಾವಣೆ ಕಾರಣಕ್ಕೆ... ಹಿರಿಯ ಐಎಎಸ್ ಸೆಲ್ವಕುಮಾರ್‌ರನ್ನು ನೇಮಿಸಲಾಗಿತ್ತು.


ಈ ಸೆಲ್ವಕುಮಾರ್ ಎರಡೇ ಎರಡು ಕಾಲು ತಿಂಗಳಷ್ಟೇ ಜಿಲ್ಲೆಯಲ್ಲಿದ್ದು ಎ... ಹೋದರು. ಮತ್ತೆ ಚೆನ್ನಪ್ಪಗೌಡರನ್ನೇ ಕಾಗೇರಿ "ಅಡ್ಜಸ್ಟೇಬಲ್" ಎಂದು ಭಾ... ತಂದುಕೊಂಡರು. ಈತ ಕಾಗೇರಿಯನ್ನು ಖುಷಿಪಡಿಸುತ್ತ 2009 ಜೂನ್... ರಿಂದ 2010 ರ ಜೂನ್ 17 ರ ತನಕ 'ಆಡಳಿತ' ನಡೆಸಿದರು. ಆ ಬಳಿಕ... ಅಮರನಾರಾಯಣನೆಂಬ ಸರಳ-ಜನಪರ ಕಳಕಳಿಯ ವ್ಯಕ್ತಿ ಜಿಲ್ಲಾಧಿಕಾರಿಯ... ಬಂದಿದ್ದರು. ಈತ ಇಲ್ಲಿದ್ದದ್ದು ಬರೀ ಐದೇ ತಿಂಗಳು. ಜಿಲ್ಲಾಧಿಕಾರಿ ಎಂಬ ಯ... ಹಮ್ಮು-ಬಿಮ್ಮು ಇಲ್ಲದೆ ಜನರೊಂದಿಗೆ ಬೆರೆಯುತ್ತಿದ್ದ, ಜನರ ಸಮ... ಸಂಕಟಕ್ಕೆ-ಸ್ಪಂದಿಸುತ್ತಿದ್ದ ಅಮರನಾರಾಯಣ ಜಿಲ್ಲೆಯಲ್ಲಿ ಕಂತ್ರಿ ಮಂತ್ರಿ ಕಾಗೇ... ಗಿಂತ ಜನಪ್ರಿಯರಾಗಿ ಹೋಗಿದ್ದರು. ಅಷ್ಟೇ ಅಲ್ಲ, ಕಾಗೇರಿಯ ಕಿವಿಕಚ್ಚು... ಚಾಡಿಕೋರ ಹೆಡ್‌ಕ್ವಾಟ್ರಸ್ ಅಸಿಸ್ಟೆಂಟ್ (ಎಚ್‌ಕ್ಯೂಎ) ನರಸಿಂಹಮೂರ್ತಿ ಎ... ಲ್ಯಾಂಡ್ ಮಾಫಿಯಾ ಮಿತ್ರನ ಎನ್‌ಎ (ನಾನ್ ಅಗ್ರಿಕಲ್ಚರ್) ದಂಧೆಗೂ ಕಡಿವಾ... ಹಾಕಿದ್ದರು. ಕರ್ತವ್ಯನಿಷ್ಠ ಅಧಿಕಾರಿ ಅಮರನಾರಾಯಣರ 'ನಡವಳಿಕೆ' ಮ... ಕಾಗೇರಿ-ಎಚ್‌ಕ್ಯೂಎ ನರಸಿಂಹಮೂರ್ತಿಗೆ ಉದ್ಧಟತನದಂತೆ-ಬಿಜೆಪಿ ತೀ... ತದ್ವಿರುದ್ಧದಂತೆ ಕಂಡಿತು.

ಗೋಲ್‌ಮಾಲ್ ವೀರ ನರಸಿಂಹಮೂರ್ತಿಯ ಸಲಹೆಯಂತೆ ಜ...

ಮೂಡಿಗೆರೆ

ದಲಿತ ಶಾಸಕ ಕುಮಾರಸ್ವಾಮಿಯ ವಿರುದ್ಧ ಚೆಡ್ಡಿ ಪಡೆಯ ಸವಾರಿ

ಚಿಕ್ಕಮಗಳೂರು ಜಿಲ್ಲೆಯ ಬಿಜೆಪಿ ಪಾಳಯದಲ್ಲಿ ಒಡಕು ಮೂಡಿದೆ. ಈವರೆಗೆ ಚೆಡ್ಡಿಗಳ ನಡುವೆ ತೆರೆಮರೆಯಲ್ಲಿ ನಡೆಯುತ್ತಿದ್ದ ಜಿದ್ದಾಜಿದ್ದಿ ಈಗ ಬೀದಿ ರಂಪಾಯಣವಾಗುತ್ತಿದೆ. ಹಿಂದೆ ಕಾಂಗ್ರೆಸ್ ಮತ್ತು ಜೆಡಿಎಸ್‌ನೊಳಗಿನ ಮುಸುಕಿನ ಗುದ್ದಾಟ ಆ ಪಕ್ಷಗಳನ್ನು ಬಲಿ ತೆಗೆದುಕೊಂಡಿತ್ತು, ಇದರ ಪರಿಣಾಮ ಚೆಡ್ಡಿ ಪಡೆ ಇಡೀ ಜಿಲ್ಲೆಯನ್ನು ಪಾಚಿಯಂತೆ ವ್ಯಾಪಿಸಿತೆಂದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ನಿರೀಕ್ಷೆಗಳಂತೆ ನಡೆಯುತ್ತಿರುವ ನಂತರದ ರಾಜಕೀಯವು ಇಲ್ಲಿನ ಜಾತ್ಯತೀತ ಚಿತ್ರಣವನ್ನು ಸಂಪೂರ್ಣವಾಗಿ ಬದಲಿಸುತ್ತಿದೆ. 1998ರಿಂದ ಲೋಕಸಭೆ ಕ್ಷೇತ್ರದ ಜೊತೆಗೆ 2004ರಿಂದ ವಿಧಾನಸಭೆಯ ಅಷ್ಟೂ ಕ್ಷೇತ್ರಗಳನ್ನು ಸಾರಾಸಗಟಾಗಿ ಗುಡಿಸಿರುವ ಬಿಜೆಪಿಗರ ಅಟ್ಟಹಾಸ ಸಹಜ ಮಟ್ಟದ್ದಲ್ಲ.




ಪ್ರಾಣೇಶ್

ಸದ್ಯದ ಮಟ್ಟಿಗೆ ಜಿಲ್ಲೆಯಲ್ಲಿ ಬಿಜೆಪಿ ಪಕ್ಷದ ಗ್ರಹಗತಿಗಳು ನೆಟ್ಟಗಿಲ್ಲ. ಅನಂತಕುಮಾರ್ ಬಣದಲ್ಲಿರುವ ರಾಜ್ಯ ಅರಣ್ಯ ವಸತಿ ವಿಹಾರಧಾಮದ ಅಧ್ಯಕ್ಷ ಕಂ ಪಕ್ಷದ ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್ ಜೊತೆಗೆ ಚಿಕ್ಕಮಗಳೂರು ಶಾಸಕ ಸಿ.ಟಿ.ರವಿ ಹದ್ದು ಮೀರಿ ವರ್ತಿಸುತ್ತಿದ್ದಾರೆ. ಇವರಿಬ್ಬರೂ ಸೇರಿ ಮೂಡಿಗೆರೆ ಮೀಸಲು ಕ್ಷೇತ್ರದ ದಲಿತ ಶಾಸಕ ಎಂ.ಪಿ.ಕುಮಾರಸ್ವಾಮಿಯನ್ನು ಇನ್ನಿಲ್ಲದಂತೆ ಕಾಡತೊಡಗಿದ್ದಾರೆ.


ಚಿಕ್ಕಮಗಳೂರು ಜಿಲ್ಲೆಯ ಐದು ಶಾಸಕರಿಗೆ ಹೋಲಿಸಿದರೆ ಕುಮಾರಸ್ವಾಮಿ ವರ್ಚಸ್ವಿ ರಾಜಕಾರಣಿಯಾಗಿ ಬೆಳೆದಿದ್ದಾರೆ. ಅವರು ಯಡಿಯೂರಪ್ಪನ ಬಣದಲ್ಲಿ ಗುರುತಿಸಿಕೊಂಡಿದ್ದೂ ಪಕ್ಕಾ ಚೆಡ್ಡಿ ತೊಡದಿರುವ ಮನುಷ್ಯ. ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗದ ಜನರ ಅಭಿವೃದ್ಧಿಗೆ ಶ್ರಮಿಸುವ ಆಕಾಂಕ್ಷೆಯೂ ಅವರಿಗಿದೆ. ಹಳ್ಳಿ ಹಳ್ಳಿಗಳಲ್ಲಿ ಜನಪ್ರಿಯವಾಗುತ್ತಿರುವ ಈ ದಲಿತ ಶಾಸಕನ ಬೆಳವಣಿಗೆಯನ್ನು ಕಂಡು ಚೆಡ್ಡಿ ಪಡೆ ನಿಜಕ್ಕೂ ಪತರಗುಟ್ಟಿದೆ. ಹೀಗಾಗಿ ಮುಂಬರುವ ವಿಧಾನಸಭಾ ಚುನಾವಣೆ ವೇಳೆಗೆ ಕುಮಾರಸ್ವಾಮಿಯನ್ನು ಹದ್ದುಬಸ್ತಿನಲ್ಲಿಡುವ ಪ್ರಯತ್ನಗಳು ತೆರೆಮರೆಯಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿವೆ.

ಹಾಗೆ ನೋಡಿದರೆ ಇದೇ ಕುಮಾರಸ್ವಾಮಿಗೆ 2008ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಬಿ.ಫಾರಂ ಕೊಡಬೇಕೆಂದು ರಾಜ್ಯ ನಾಯಕರ ಮುಂದೆ ಮಂಡಿಯೂರಿ ಕುಳಿತವರಲ್ಲಿ ರವಿ ಮೊದಲಿಗ. ಆದರೀಗ ಇದೇ ರವಿಗೆ ಶತಾಯಗತಾಯ ಕುಮಾರಸ್ವಾಮಿಯನ್ನು ಕಂಡರಾಗದು. ಇವರಿಬ್ಬರದ್ದು ಈಗ ಹಾವು, ಮುಂಗುಸಿಯ ವರ್ತನೆ. ಕ್ಷೇತ್ರ ಪುನರ್ವಿಂಗಡಣೆಯ ಕಾರಣದಿಂದ ಮೂಡಿಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಚಿಕ್ಕಮಗಳೂರು ತಾಲ್ಲೂಕಿನ ಆಲ್ದೂರು, ಅಂಬಳೆ, ವಸ್ತಾರೆ ಮತ್ತು ಆವತಿ ಎಂಬ ನಾಲ್ಕು ಹೋಬಳಿಗಳು ಸೇರ್ಪಡೆಗೊಂಡಿರುವುದು ಈ ಇಬ್ಬರು ಶಾಸಕರ ವೈಮನಸ್ಸುಗಳಿಗೆ ಕಾರಣವಾಗಿದೆ. ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್, ಕುಮಾರಸ್ವಾಮಿಗೆ ಕೆಲವು ವಿಷಯಗಳಲ್ಲಿ ಸಾಥ್ ನೀಡುತ್ತಾನಾದರೂ ಮಂತ್ರಿ ಪದವಿ ವಿಚಾರದಲ್ಲಿ ರಾಜಿಯಾಗುತ್ತಿಲ್ಲ. ಕಳೆದೆರಡು ಅವಧಿಗಳಲ್ಲಿ ಜಿಲ್ಲೆಗೆ ಒಂದೂ ಮಂತ್ರಿ ಪದವಿ ಒಲಿಯದಿರಲು ಈ ಮೂವರು ಶಾಸಕರ ನಡುವಿನ ಗುದ್ದಾಟಗಳೇ ಮೂಲಕಾರಣವಾಗಿದೆ. ದಲಿತ ಕೋಟಾದಡಿ ಕುಮಾರಸ್ವಾಮಿಗೆ ಸಿಗಬಹುದಾಗಿದ್ದ ಮಂತ್ರಿ ಸ್ಥಾನವನ್ನು ರವಿ ಮತ್ತು ಜೀವರಾಜ್ ಎಂಬ ಇಬ್ಬರು ಒಕ್ಕಲಿಗ ಶಾಸಕರು ಸೇರಿ ತಪ್ಪಿಸುತ್ತಿರುವುದು ರಹಸ್ಯವಲ್ಲ.



ಸಿ.ಟಿ.ರವಿ

ಇದೇ ಹೊತ್ತಿನಲ್ಲಿ ಸಂಸದರಾಗಿದ್ದ ಡಿ.ವಿ.ಸದಾನಂದ ಗೌಡರ ರಾಜಿನಾಮೆಯಿಂದ ತೆರವಾಗಿರುವ ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸುವ ಆಕಾಂಕ್ಷೆ ಹೊತ್ತುಕೊಂಡಿರುವ ಎಂ.ಕೆ.ಪ್ರಾಣೇಶ್‌ಗೆ ಇದೇ ಕುಮಾರಸ್ವಾಮಿ ಮಗ್ಗುಲ ಮುಳ್ಳಾಗುತ್ತಿದ್ದಾರೆ. ಜೊತೆಗೆ ಮೂಡಿಗೆರೆ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯೊಳಗೆ ಸಿ.ಟಿ.ರವಿ ಮತ್ತು ಪ್ರಾಣೇಶ್ ಮೂಗು ತೂರಿಸಿ ಹಸ್ತಕ್ಷೇಪ ನಡೆಸುತ್ತಿರುವುದು ಕುಮಾರಸ್ವಾಮಿಯನ್ನು ನಿಜಕ್ಕೂ ಕೆರಳಿಸಿದೆ. ಹೀಗಾಗಿ ಮೇಕನಗದ್ದೆ ಎಂಬ ಕುಗ್ರಾಮದ ಬಡ ದಲಿತ ಕುಟುಂಬದಲ್ಲಿ ಹುಟ್ಟಿ ವಿಧಾನಸೌಧದೊಳಗೆ ಪ್ರವೇಶ ಪಡೆದ ಕುಮಾರಸ್ವಾಮಿ ಚೆಡ್ಡಿ ಪಡೆಯನ್ನು ದಂಗುಬಡಿಸಲು ತಯಾರಿ ನಡೆಸಿದ್ದಾರೆ. ಹೀಗಾಗಿ ಜಿಲ್ಲಾ ಬಿಜೆಪಿಯೊಳಗಿನ ಭಿನ್ನಮತ ಬೀದಿಗೆ ಬಿದ್ದಿದೆ. ಸದ್ಯದ ಮಟ್ಟಿಗೆ ಕುಮಾರಸ್ವಾಮಿ ತಮ್ಮ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡುವ ನಾಟಕವಾಡಿದ್ದಾರೆ... ಆದರೆ ದಿನ ಕಳೆದಂತೆ ಚೆಡ್ಡಿಗಳ ಅಟ್ಟಹಾಸ ಮಿತಿಮೀರಿ ಬೆಳೆಯುವುದರಿಂದ ಕುಮಾರಸ್ವಾಮಿಗೆ ಬಿಜೆಪಿಯಲ್ಲಿನ ವಾತಾವರ... ಅಷ್ಟಾಗಿ ಸರಿ ಹೊಂದುತ್ತಿ... ಎನ್ನಲಾಗುತ್ತಿದೆ. ಅವರು ಬಿಜೆಪಿಯಿಂದ ಹೊರ ನಡೆಯುವ ಮಾತುಗಳೂ ದಟ್ಟವಾಗಿ ಹರಡುತ್ತಿದೆ.




ಕುಮಾರಸ್ವಾಮಿ

ಇದಕ್ಕೆ ನಾನಾ ಕಾರಣಗ... ಆಲ್ದೂರು ಹೋಬಳಿ ಕೇಂದ್ರದಲ್ಲಿ ನಾಲ್ಕು ಹೆಸರುಗ... ವಿವಾದಿತ ವೃತ್ತವೊಂದಿದೆ. ವೃತ್ತದ ವಿವಿಧ ಹೆಸರುಗಳ... ಹಳೆ ಫಾರೆಸ್ಟ್ ಗೇಟ್ ಸರ್ಕಲ್, ಹವ್ವಳ್ಳಿ ವೃತ್ತ ಮತ್ತು ಮ... ಸರ್ಕಲ್. ವೃತ್ತದ ವಿಚಾರದಲ್ಲಿ ಸಂಘ ಪರಿವಾರ ಮೊ... ಕ್ಯಾತೆ ತೆಗೆಯಿತು. ಮದೀನ ಸರ್ಕಲ್ ಅಂತಿರುವು... ಸಹಿಸದ ಸಂಘ ಪರಿವಾರದ ಚೇಲಾಗಳಲ್ಲೊಬ್ಬನಾಗಿದ್ದ ... ಗಿರೀಶ್ ಎಂಬಾತ ಎಂಟು ವರ್ಷಗಳ ಹಿಂದೆ ಅಲ್ಲಿ ಭ... ಧ್ವಜವನ್ನು ಹಾರಿಸಿ ಆ ಜಾಗದ ಹೆಸರನ್ನು ಹನುಮ... ವೃತ್ತವನ್ನಾಗಿ ಬದಲಿಸಿದ್ದ. ಆವರೆಗೆ ಸಾಮರಸ್ಯ... ಬದುಕುತ್ತಿದ್ದ ಸ್ಥಳೀಯ ಹಿಂದೂ ಮತ್ತು ಮುಸ್ಲಿಂರ ... ಒಡಕು ಮೂಡಿತ್ತು.

ಎರಡು ಕೋಮುಗಳ ನಡುವೆ ಉದ್ಭವಿಸಿದ್ದ ಸಮ... ಪರಿಹಾರಕ್ಕೆ ಸ್ಥಳೀಯ ಗ್ರಾಮ ಪಂಚಾಯತ್‌ನ ಚುನಾ... ಸದಸ್ಯರು ಮುಂದಾದರು. ಪಂಚಾಯತ್ ನಡೆಸಿದ ... ಭಾವಿ ಸಭೆಯಲ್ಲಿ ಭಜರಂಗದಳ ಮತ್ತು ವಿಎಚ್‌ಪಿ ... ಧ್ವಜದ ತೆರವಿಗೆ ಬಿಜೆಪಿ ಸದಸ್ಯರು ವಿರೋಧ ವ್ಯಕ್ತಪಡಿಸಿ... ಆದರೆ ಮೂಡಿಗೆರೆ ವಿಧಾನಸಭಾ ಕ್ಷೇತ್ರದ ... ಕಾರ್ಯದರ್ಶಿಯೂ ಆಗಿದ್ದ ಪಂಚಾಯತಿಯ ...

ನಡೆಸುವ ಶತತಡ್ಡ ಕಾಗೇರಿ ಆತನ ಮಾತಿನಂತೇ ಅಮರ
ರನ್ನು ಹೀನಾಯವಾಗಿ ಜಿಲ್ಲೆಯಿಂದ ಓಡಿಸಿದ್ದರು. ಅಮರನಾರಾಯಣರ
ನಂತರ ತಮ್ಮ ಬಳಗದ ಬೇಳೆ ಬೇಯುತ್ತದೆಂದು ಭಾವಿಸಿದ್ದ
ರಸಿಂಹಮೂರ್ತಿ ಜೋಡಿ ಬಿ.ಎಸ್. ಕೃಷ್ಣಯ್ಯನೆಂಬ ಸರಳ-ಶುದ್ಧ
ವೃದ್ಧಿ ಧೋರಣೆಯ ಮತ್ತು ಜನಪರ ಆಡಳಿತಗಾರ ಡಿಸಿಯಾಗಿ ಬಂದಿದ್ದೇ
ಲೆಯಿಂದ ಬೆಂಕಿಗೆ ಬಿದ್ದಂತಾಗಿ ಚಡಪಡಿಸತೊಡಗಿತ್ತು!! ಹಲವು



ಕೃಷ್ಣಯ್ಯ ವರ್ಗಾವಣೆ ವಿರುದ್ಧ ಜನರ ಪ್ರತಿಭಟನೆ....

ಂತ್ರಿಗಳ ಸಚಿವಾಲಯದಲ್ಲೇ ಕೆಲಸ ಮಾಡಿ ಅನುಭವ ಹೊಂದಿದ್ದ ಈ
ಕಾರಿ ತನ್ನ ಅಧಿಕಾರವನ್ನು ಉತ್ತರ ಕಾಣದ ಉತ್ತರ ಕನ್ನಡದ ಸಮಸ್ಯೆ
ಬಳಸತೊಡಗಿದ್ದಂತೂ ಅಯೋಗ್ಯ ಕಾಗೇರಿಯನ್ನು ಕಂಗೆಡಿಸಿಬಿಟ್ಟಿತ್ತು.
ನ್ನನ್ನು ಓವರ್‌ಟೇಕ್ ಮಾಡುತ್ತಿದ್ದಾನೆಂಬ ಅಸಹಜ ಅನುಮಾನದ ರೋಗ
ಡುಬಿಟ್ಟಿದ್ದ ಕಾಗೇರಿ ಮಾಣಿ! ಡಿಸಿ ಕೃಷ್ಣಯ್ಯ ಮಾತ್ರ ಜಿಲ್ಲೆಯ ಯಾವ
ಲ್ಲಿ ಸಮಸ್ಯೆ-ಗೊಂದಲ-ಗಲಾಟೆಯಾದರೂ ಸೀದಾ ಅಲ್ಲಿಗೇ ಹೋಗಿ
ಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತ ಹೋದರು. ಈ ಕರ್ತವ್ಯಪ್ರಜ್ಞೆ
ತ್ರಿ ಕಾಗೇರಿಗೆ ಪ್ರಚಾರದ ಗೀಳಂತೆ ಕಾಣಿಸಿತು.

ಹೆಜ್ಜೆಗೂ ಕಾಗೇರಿ ಆಡಳಿತದಲ್ಲಿ ಮೂಗು ತೂರಿಸಿ ದಕ್ಷ ಡಿ.ಸಿ.ಯನ್ನು
ಭಿಸಿದರು. "ಎನ್ರೀ... ಡಿ.ಸಿ. ಸಾಹೇಬ್ರೆ... ಬಾಳ ಪೇಪರ್‌ನಲ್ಲಿ ಟೀವಿಯಲ್ಲಿ
ದ್ದೀರಲ್ರಿ....." ಎಂದು ಮೂದಲಿಸತೊಡಗಿದರು ಮಂತ್ರಿ ಮಾನ್ಯರು.
ಡಿಸಿ ಕೃಷ್ಣಯ್ಯ ಆಡಳಿತ ಪಕ್ಷ-ವಿರೋಧ ಪಕ್ಷ ಎಂದು ಭೇದ-ಭಾವ
ಎಲ್ಲ ಪಕ್ಷಗಳ ಶಾಸಕರನ್ನು ಸಮಾನ ಗೌರವಾದರದಿಂದ ಮಾತಾಡಿಸಿ
ಯಯುತ ಬೇಡಿಕೆ ಈಡೇರಿಸಲು ಮುಂದಾಗುತ್ತಿದ್ದುದು ಮನೆಹಾಳ
ಗೇರಿಗೆ ಸಹಿಸಲಾಗಲಿಲ್ಲ, ಡಿಸಿ ಕೃಷ್ಣಯ್ಯ ಸರ್ಕಾರಿ ಅನುದಾನವನ್ನು

ಸರಿಯಾಗಿ ಎಲ್ಲಾ ಪಕ್ಷದ ಶಾಸಕರಿಗೂ ಹಂಚುತ್ತಿದ್ದುದು, ನೂರು ಕೋಟಿಯ 'ಸ್ಪೆಷಲ್ ಪ್ಯಾಕೇಜ್' ಕಾಮಗಾರಿಯ ನೀಲನಕ್ಷೆಯಲ್ಲಿ ಎಲ್ಲಾ ಶಾಸಕರಿಗೂ ಅವಕಾಶ ಕಲ್ಪಿಸಿದ್ದು ದೊಡ್ಡ ಪಾಲು ಮಂತ್ರಿಗಿರಿ ತಾಕತ್ತಿನಿಂದ ಹೊಡಕೊಂಡಿದ್ದ ಕಾಗೇರಿಯ ಕಣ್ಣು ಕೆಂಪಾಗಿಸಿತ್ತು.

ಎದುರಾಳಿ ಮಂತ್ರಿ ಆನಂದ್ ಅಸ್ನೋಟಿಕರನ ಒಂದೇಒಂದು ಸಣ್ಣ ಬೇಡಿಕೆ ಈಡೇರಿಸಿದರೂ ಸಾಕು, ಮಂತ್ರಿ ಕಾಗೇರಿ ಡಿಸಿ ಸಾಹೇಬರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. "ಆ ಚಿಂಟು ಮಂತ್ರಿಯ ಮಾತು ಕೇಳಿ ಆಡಳಿತ ನಡೆಸ್ತೀಯಾ?" ಎಂಬರ್ಥದ ಮೂದಲಿಕೆ ಮಾಡುತ್ತಿದ್ದರು. ಇತ್ತ ಹುಂಬ ಅಸ್ನೋಟಿಕರನಂತೂ "ಕಾಗೇರಿ ಹೇಳಿದಂತೆ ಕೇಳ್ತೀರಿ.... ನನ್ನ ಕ್ಷೇತ್ರದ ಸಮಸ್ಯೆ ಪರಿಹರಿಸಲು ಬೇಕಂತಲೇ ಅಡ್ಡಿಪಡಿಸ್ತೀರಿ....." ಎಂದು ಬೊಬ್ಬೆ ಹೊಡೆಯುತ್ತಿದ್ದ. ಕಾಗೇರಿ ಮಂತ್ರಿಯಾಗಿದ್ದರೂ ತನ್ನ ಹೈಗರ ರಾಜಧಾನಿ ಶಿರಸಿಯಿಂದಾಚೆ ಹೋಗದೆ ಸಣ್ಣತನದ ರಾಜಕೀಯದಲ್ಲಿ ನಿರತನಾಗುತ್ತಿದ್ದರೆ, ಜಿಲ್ಲಾಧಿಕಾರಿ ಕೃಷ್ಣಯ್ಯ ಜಿಲ್ಲೆಯಿಡೀ ಸುತ್ತುತ್ತಿದ್ದರು. ಅಸ್ನೋಟಿಕರ್‌ನ ಮಂತ್ರಿಗಿರಿಯೂ ಕಾರವಾರ-ಅಂಕೋಲೆಗಷ್ಟೇ ಸೀಮಿತವಾಗಿತ್ತು. ಇದು ಈ ಕೆಲಸಕ್ಕೆ ಬಾರದ ದಂಡ-ಪಿಂಡ ಮಂತ್ರಿದ್ವಯರಲ್ಲಿ ಅಸೂಯೆ ಮೂಡಿಸಿತ್ತು.

ಒಂದೆಡೆ ಕಾಗೇರಿ-ಅಸ್ನೋಟಿಕರ್‌ರ ಮೇಲಾಟದಿಂದ ಜನಸಾಮಾನ್ಯರಿಗೆ ನ್ಯಾಯ ಒದಗಿಸಲಾಗದೆ ಡಿಸಿ ಹತಾಶರಾಗಿದ್ದರೆ, ಇನ್ನೊಂದೆಡೆ ಈ 'ಪೀಡೆ'ಯನ್ನು ಜಿಲ್ಲೆಯಿಂದ ಓಡಿಸಲು ಕರ್ಮಗೇಡಿ ಮಂತ್ರಿದ್ವಯರು ಒಳಗೊಳಗೆ ಸ್ಕೆಚ್ ಹಾಕುತ್ತಿದ್ದರು. ಈ ಕಾಗೇರಿ-ಅಸ್ನೋಟಿಕರ್‌ರ ಅಧಿಕಪ್ರಸಂಗ-ಕಿರಿಕಿರಿಯಿಂದ ಡಿಸಿ ತಮ್ಮ ಕೆಲಸ ಮಾಡಲಾಗದೆ ರೋಸತ್ತು ಹೋದರು. ಇದೇ ಸಮಯವೆಂದು ಭಾವಿಸಿದ ಕಾಗೇರಿ-ಅಸ್ನೋಟಿಕರ್ ಎಂಬ ಶತ್ರುಗಳು ದಕ್ಷ-ಆಡಳಿತ ಬದ್ಧತೆಯ ಡಿಸಿಯನ್ನು ಜಿಲ್ಲೆಯಿಂದ ಎತ್ತಂಗಡಿ ಮಾಡುವ ಸಮಾನ ಆಸಕ್ತಿ-ಉದ್ದೇಶದಿಂದ ರಹಸ್ಯವಾಗಿ ಒಂದಾಗಿಬಿಟ್ಟರು.



ಅಸ್ನೋಟಿಕರ್

ಕಾಗೇರಿ ತನ್ನ ಚೆಡ್ಡಿ ಲಾಬಿ ತಾಕತ್ತು-ಮಂತ್ರಿಗಿರಿ ಬಲವನ್ನೆಲ್ಲ ಬಳಸಿ ಡಿಸಿ ಕೃಷ್ಣಯ್ಯರನ್ನು ಈಗ ಹದಿನಾಲ್ಕು ತಿಂಗಳು ಕಳೆಯುವಷ್ಟರಲ್ಲೇ ಜಿಲ್ಲೆಯಿಂದ ಓಡಿಸಿ 'ಹ್ಯಾಪಿ ನ್ಯೂಇಯರ್' ಆಚರಿಸುತ್ತಿದ್ದಾರೆ!

ಕಾಗೇರಿ ಜಾಯಮಾನವೇ ಅಷ್ಟು. ಆತನಿಗೆ ಸಹೃದಯಿ-ಜನಪರ ಅಧಿಕಾರಿಗಳು ಜಿಲ್ಲೆಯಲ್ಲಿರುವುದು ಬೇಡ. ಸ್ವಜನ ಪಕ್ಷಪಾತ-ಜಾತಿಯತೆ-ಸ್ವಹಿತಾಸಕ್ತಿಯ ಭ್ರಷ್ಟ ಆಡಳಿತ-ರಾಜಕಾರಣ ಮಾಡುತ್ತಿರುವ ಕಾಗೇರಿಗೆ ಕಾನೂನು ನಿಷ್ಠ-ಜನ ಸೇವಕ ಅಧಿಕಾರಿಗಳು ಜಿಲ್ಲೆಯಲ್ಲಿದ್ದರೆ ತನ್ನ ದಗಲುಬಾಜಿ ಇಮೇಜಿಗೆ-ಕಣ್ಕಟ್ಟಿನ ಆಟಕ್ಕೆ ಧಕ್ಕೆ ಎಂಬ ಭಯ. ಹೀಗಾಗಿ ಈತ ತನ್ನ ಗಂಡಾಗುಂಡಿ ಆಟಕ್ಕೆ ಸರಿಹೊಂದುವ ಅಧಿಕಾರಿಗಳನ್ನೇ ಜಿಲ್ಲೆಯಲ್ಲಿ ತುಂಬಿಕೊಂಡಿದ್ದಾರೆ. ಜಿಲ್ಲೆಯವರೇ ಆದ ಹಲವು ಹರಾಮಿ ಅಧಿಕಾರಿಗಳು ಹಲವು ವರ್ಷದಿಂದ ಆಯಕಟ್ಟಿನ ಸ್ಥಾನದಲ್ಲಿ ಠಿಪಿಕಾಲ್ ಹಾಕಿಕೊಂಡು ಕುಂತಿದ್ದಾರೆ. ಪ್ರಜಾಪೀಡಕ-ಬ್ರಹ್ಮಾಂಡ ಭ್ರಷ್ಟ ಅಧಿಕಾರಿಗಳನ್ನು ಡಿಸ್ಟರ್ಬ್ ಮಾಡದೆ ಕಾಗೇರಿ ಜತನದಿಂದ ಕಾಪಾಡಿಕೊಂಡಿದ್ದಾರೆ. ಕೆಲವು ತಿಂಗಳ ಹಿಂದಷ್ಟೇ ಕಾನೂನು ನಿಷ್ಠ ಎಸ್ಪಿ ಅನ್ನಿಸಿಕೊಂಡಿದ್ದ ರಮೇಶ್‌ರನ್ನು ವರ್ಗಾಯಿಸಲಾಗಿತ್ತು. ಆತ ಮಟ್ಕಾ, ಓಸಿ, ಇಸ್ಪೀಟ್, ಮಾಮೂಲಿ, ಕ್ರೈಮ್‌ಗೆಲ್ಲ ಕಡಿವಾಣ ಹಾಕಿದ್ದೇ ದೊಡ್ಡ ಅಪರಾಧವಾಗಿ ವರ್ಗಾವಣೆ ಶಿಕ್ಷೆಗೆ ಒಳಗಾಗಬೇಕಾಗಿ ಬಂದಿತ್ತು.

ಇದೀಗ ನಿಷ್ಕಲ್ಮಷ ಆಡಳಿತ-ಜನಪರ ಬದ್ಧತೆಯಿಂದ ಜನಾನುರಾಗಿಯಾಗಿದ್ದ ದಲಿತ ಅಧಿಕಾರಿ ಕೃಷ್ಣಯ್ಯರಿಗೆ ರಾತ್ರೋರಾತ್ರಿ ಜಿಲ್ಲೆಯಿಂದ ಹೊರಹೋಗುವ ಆಜ್ಞೆ ಕಾಗೇರಿ ಪ್ರಭುತ್ವ ಮಾಡಿದೆ! ಸರ್ಕಾರಿ ನೌಕರರಿಗೆ ವರ್ಗಾವಣೆ ಸಹಜ ಪ್ರಕ್ರಿಯೆ ನಿಜ. ಆದರೆ ಜಿಲ್ಲಾಧಿಕಾರಿಯಂಥ ಮಹತ್ವದ, ಇಡೀ ಜಿಲ್ಲೆಯ ಆಗು-ಹೋಗುಗಳ ಹೊಣೆ ಹೊತ್ತಂಥ ಅಧಿಕಾರಿಯನ್ನು ಪದೇಪದೇ ಫುಟ್‌ಬಾಲ್‌ನಂತೆ ಒದೆಯುವುದರಿಂದ ಹಾನಿ ಯಾರಿಗೆ? ಇದರಿಂದ ಜಿಲ್ಲೆಯ ಆಡಳಿತ ವ್ಯವಸ್ಥೆ-ಅಭಿವೃದ್ಧಿ ಕೆಲಸ-ಕಾಮಗಾರಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಆಗುವುದೇ ಹೆಚ್ಚು! ಇದು ಕಾಗೇರಿಯಂಥ ಮನೆಮುರುಕ ಮಂತ್ರಿಗಳಿಗೆ ಅರ್ಥವಾಗುವುದಿಲ್ಲ, ಬಿಡಿ!! 11 ತಾಲ್ಲೂಕಿರುವ-ಭೌಗೋಳಿಕವಾಗಿ ದುರ್ಗಮ ವಾಗಿರುವ ಉತ್ತರ ಕನ್ನಡದಂಥ ಜಿಲ್ಲೆಯ ಪರಿಚಯವಾಗುವ ಮೊದಲೇ ವರ್ಗಾಯಿಸಿದರೆ ಉದ್ಧಾರ ಸಾಧ್ಯವಾ?

ಹಿಂದೆ ಅಮರನಾರಾಯಣ ಎಂಬ ಸಜ್ಜನ ಡಿಸಿಯನ್ನು ಕಾಗೇರಿ ಪಟಾಲಂ ವರ್ಗ ಮಾಡಿಸಿದಾಗ ಜನರು ಒಂದಾಗಿ ಸಿಟ್ಟಿಗೆದ್ದಿದ್ದರು. ಆ ವಿರೋಧವನ್ನು ಕಾಗೇರಿ ತನ್ನ ಕುತಂತ್ರಗಾರಿಕೆ-ಅಧಿಕಾರ ಮದದಿಂದ ಅಡಗಿಸಿದ್ದರು. ಈಗ ಪ್ರಾಮಾಣಿಕ-ದಕ್ಷ-ಜನ ಸ್ನೇಹಿ ಆಡಳಿತಗಾರ ಕೃಷ್ಣಯ್ಯ ಅವರ ಟ್ರಾನ್ಸ್‌ಫರ್ ವಿರೋಧಿಸಿ ಜನ ಪಕ್ಷಭೇದ ಮರೆತು ಪ್ರತಿಭಟಿಸುತ್ತಿದ್ದಾರೆ. ಈ ಹೋರಾಟವನ್ನೂ ಕಾಗೇರಿ ಮಟ್ಟಹಾಕುವುದು ಗ್ಯಾರಂಟಿ. ಹೀಗಾಗಿ ಜನರೀಗ ಕಾಗೇರಿಯನ್ನೇ ಮಂತ್ರಿ ಮಂಡಳದಿಂದ ಉಚ್ಚಾಟಿಸಿ ಜಿಲ್ಲೆಯನ್ನು 'ಶನಿ'ಯಿಂದ ಮುಕ್ತಿಗೊಳಿಸುವಂತೆ ಸಿಎಂ ಸದಾನಂದ ಗೌಡರ ಮೇಲೆ ಒತ್ತಡ ಹಾಕುವಂಥ ಹೋರಾಟ ನಡೆಸಬೇಕಿದೆ. ಡಿಸಿ ಉಳಿಸಿಗಿಂತ ಕಾಗೇರಿ ಹಠಾವೋ ಒಂದೇ ಜಿಲ್ಲೆಯನ್ನು ಬಚಾವಾಗಿಸಬಲ್ಲದು!

• ನಹುಷ

ಂಬಾತ ಚೆಡ್ಡಿಗಳನ್ನೇ ವಿರೋಧಿಸಿದ್ದರು. ಹೇಳಿ, ಕೇಳಿ ಕವೀಶ್ ಶಾಸಕ
ಮಿಯ ಪರಮಾಪ್ತ.
ಡಿಸೆಂಬರ್‌ನಲ್ಲಿ ಸಂವಿಧಾನ ಶಿಲ್ಪಿಯ ಪ್ರತಿಮೆಯನ್ನು ವೃತ್ತದಲ್ಲಿ ನಿಲ್ಲಿಸಿ
.ಬಿ.ಆರ್.ಅಂಬೇಡ್ಕರ್ ಹೆಸರಿಡಲು ಗುದ್ದಲಿಪೂಜೆ ನಡೆಸಲಾಗಿತ್ತು.
ರಿಗೆ ಆಲ್ದೂರು ಗ್ರಾಮ ಪಂಚಾಯತ್ ರೂಪುರೇಷೆ ಸಿದ್ಧಪಡಿಸಿತ್ತು.
ದಿತ ವೃತ್ತದಿಂದ ಭಗವದ್ಧ್ವಜ ತೆರವುಗೊಳಿಸಿದ್ದರಲ್ಲಿ ಕವೀಶ್ ಪಾತ್ರ
ಗಿತ್ತು. ಇದು ರವಿ ಮತ್ತು ಪ್ರಾಣೇಶ್‌ಗೆ ಸಹಿಸಲಾಗಲಿಲ್ಲ. ಅವರು
ನ್ನು ಬಿಜೆಪಿಯಿಂದಲೇ ಹೊರಹಾಕಿದರು. ತನ್ನ ಪರಮಾಪ್ತನನ್ನು
ದ ಹೊರಹಾಕುವಾಗ ಅದನ್ನು ತನ್ನ ಗಮನಕ್ಕೆ ತರಲಿಲ್ಲ ಎನ್ನುವುದು
ಮಿಯನ್ನು ಕೆರಳಿಸಿದೆ.
ರಲ್ಲಿ ಮುಗುಳುವಳ್ಳಿ ವಿದ್ಯುತ್ ಪರಿವರ್ತನಾ ಘಟಕ ನಿರ್ಮಾಣ
ವಿಷಯದಲ್ಲಿ ಸಿ.ಟಿ.ರವಿ ಮತ್ತು ಕುಮಾರಸ್ವಾಮಿ ಅವತ್ತಿನ ಜಿಲ್ಲಾ
ಮಂತ್ರಿ ಕೆ.ಎಸ್.ಈಶ್ವರಪ್ಪನ ಸಮ್ಮುಖದಲ್ಲಿ ಹೊಡೆದಾಡಿದ್ದರು.
ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಇವರಿಬ್ಬರ ಜಗಳದಿಂದಾಗಿ
ವಳ್ಳಿ ವಿದ್ಯುತ್ ಘಟಕದ ಕಾಮಗಾರಿ ಮುಗಿದಿದ್ದರೂ ಅದರ
ಯಾಗುತ್ತಿಲ್ಲ. ಅದಲ್ಲದೇ ರವಿಯ ಭಾವ ಸುದರ್ಶನ್ ಈ ಹಿಂದೆ
ರಳು ಗಣಿಗಾರಿಕೆಯಿಂದ ಮೂಡಿಗೆರೆ ತಾಲ್ಲೂಕಿನ ಹೇಮಾವತಿ
ಲು ಬರಿದುಗೊಳಿಸುತ್ತಿದ್ದನ್ನು ಕುಮಾರಸ್ವಾಮಿ ವಿರೋಧಿಸಿದ್ದರು.
ಆಲೂರು ಬಳಿಯ ಕೂಡಿಗೆ ಎಂಬಲ್ಲಿ ರಸ್ತೆ ಕಾಮಗಾರಿ ಮುಗಿದ
ಪಿ ಜಿಲ್ಲಾಧ್ಯಕ್ಷ ಎಂ.ಕೆ.ಪ್ರಾಣೇಶ್ ಅದನ್ನು ಉದ್ಘಾಟಿಸಿದ್ದರು. ಆ
ಕ್ಕೆ ಶಾಸಕರಾದ ಕುಮಾರಸ್ವಾಮಿಯವರನ್ನು ಆಹ್ವಾನಿಸಿರಲಿಲ್ಲ. ಬಿದರ
ನೂತನ ಅಗ್ನಿಶಾಮಕ ಠಾಣೆ ಕಟ್ಟಡದ ಕಾಮಗಾರಿ ಮುಗಿದರೂ
ಹಸ್ತಕ್ಷೇಪದಿಂದ ಉದ್ಘಾಟನೆಗೆ ಸಂಚಕಾರವಿದೆ ಅನ್ನುವುದು ಕುಮಾರ
ರೋಪ. ಪ್ರಾಣೇಶ್ ಅರಣ್ಯ ಬೆಳೆಸುವುದನ್ನು ಬಿಟ್ಟು ತನ್ನ ಕ್ಷೇತ್ರದಲ್ಲಿ
ೂರಿಸುವುದು ಸರಿಯೇ ಎನ್ನುವುದು ಕುಮಾರಸ್ವಾಮಿ ಪ್ರಶ್ನೆ.
ಷೆಯ ಸಂಗತಿ ಎಂದರೆ, ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ
ೂರಿನಲ್ಲಿ ಟ್ರೀ ಪಾರ್ಕ್ ಒಂದನ್ನು ನಿರ್ಮಿಸುವ ಯೋಜನೆ ಇತ್ತು.
ದ್ಧಿಯ ಅಂಗವಾಗಿ ಈ ಯೋಜನೆಗೆ ಕದ್ರಿಮಿದ್ರಿ ಎಂಬಲ್ಲಿ ಅಂದಾಜು
ಎಕರೆ ಜಮೀನು ಗೊತ್ತುಪಡಿಸಲಾಗಿತ್ತು. ಈ ಜಮೀನು ಮೂಡಿಗೆರೆ
ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಆದರೆ "ಕೋಟ್ಯಂತರ ರೂಪಾಯಿಯ
ನೆಯಿಂದ ತನಗೆ ಪರ್ಸಂಟೇಜ್ ಬರುವುದಿಲ್ಲ ಎಂದು ಅಂದಾಜಿಸಿದ
ೋಜನೆಯ ಸ್ಥಳವನ್ನೇ ಬದಲಾಯಿಸುವಲ್ಲಿ ಯಶಸ್ವಿಯಾದ" ಎಂದು
ದ್ದಿಗಳೇ ಹೇಳುತ್ತಿದ್ದಾರೆ. ಈ ಪಾರ್ಕ್‌ನ್ನು ಕರಡಿ ಕಾವಲು ಎಂಬಲ್ಲಿಗೆ
ಲಾಗಿದೆ.
ದರಿಂದ ಕುಮಾರಸ್ವಾಮಿ ಕುಪಿತಗೊಂಡಿದ್ದಾರೆ. ಮುಖ್ಯಮಂತ್ರಿ
ನಂದ ಗೌಡ ಮತ್ತು ಕಾನೂನು ಮಂತ್ರಿ ಸುರೇಶ್ ಕುಮಾರ್
ಗಿ ಕುಮಾರಸ್ವಾಮಿಯ ಬೆನ್ನು ತಟ್ಟಿ ಆತನನ್ನು ಸಂತೈಸಿದ್ದಾರೆ. ಆದರೆ
ಚೆಡ್ಡಿಗಳ ಮಾತನ್ನು ನಂಬಿ ಕುಮಾರಸ್ವಾಮಿ ಬಿಜೆಪಿಯಲ್ಲೇ
ರೆದರೆ ಅವರ ಮುಂದಿನ ಹಾದಿಯಂತೂ ಇನ್ನಷ್ಟು
ಾಗಲಿದೆ.

• ಅಜೀಜ್ ಕಿರುಗುಂದ

ಈಕೆ ಲಿವಿಂಗ್ 'ಮಮ್ಮಿ'




ಯಾವುದೋ ಪಿರಮಿಡ್‌ನಿಂದ ಇದೀಗ ತಾನೆ ಎಬ್ಬಿತಂದ ಮಮ್ಮಿಗೆ ಮಾಡರ್ನ್ ಡ್ರೆಸ್ ತೊಡಿಸಿ ಮಾಡೆಲಿಂಗ್‌ಗೆ ನಿಲ್ಲಿಸಿದಂತಿದೆಯಲ್ಲವೇ ಈ ಚಿತ್ರ. ಆದರೆ ಇದು ಡೆಡ್ ಮಮ್ಮಿಯ ಫೋಟೋವಲ್ಲ, ಲಿವಿಂಗ್ ಮಮ್ಮಿಯ ದಾರುಣ ಕತೆ. ಈಕೆಯ ಹೆಸರು ಲಿಜ್ಜೀ ವೆಲಾಸ್ಕ್ವೆಜ್. ಅಮೆರಿಕಾದ ಟೆಕ್ಸಾಸ್ ಪ್ರಾಂತ್ಯದವಳು. ಇಡೀ ವೈದ್ಯಲೋಕವೇ ಬೆಚ್ಚಿಸದಂತಹ ವಿಚಿತ್ರ ರೋಗದ ಕಾರಣದಿಂದ ಈಕೆಗೆ ಈ ಸ್ಕೆಲಿಟಾನ್ ಗತಿ ಬಂದಿದೆ. ಈಕೆ ಅದೆಷ್ಟು ತಿಂದರೂ ತೂಕವೇ ಮೈಗೆ ಹತ್ತುತ್ತಿಲ್ಲ. ಅಷ್ಟೇ ಅಲ್ಲ, ದಿನದಿಂದ ದಿನಕ್ಕೆ ಆಕೆಯ ಮೈಯಲ್ಲಿರುವ ಕೊಬ್ಬಿನ ಅಂಶ ಕಡಿಮೆಯಾಗುತ್ತಾ ಬರುತ್ತಿದೆ. ಅದರ ಪರಿಣಾಮವಾಗಿಯೇ ಆಕೆ ಈಗ 'ಜೀರೋ ಬಾಡಿ ಫ್ಯಾಟ್'ಗೆ ಬಂದು ತಲುಪಿದ್ದಾಳೆ. ಆಕೆ ದಪ್ಪ ಆಗುವುದಿರಲಿ, ಈಗಿರುವಂತೆಯೇ ಮಿನಿಮಮ್ ಕೊಬ್ಬಿನಂಶವನ್ನು ಕಾಯ್ದುಕೊಳ್ಳಲು ಪ್ರತಿ ಹದಿನೈದು ನಿಮಿಷಕ್ಕೊಮ್ಮೆ ಮಿನಿ ಮೀಲ್ಸ್ ಸೇವಿಸುತ್ತಿರಲೇಬೇಕು. ಈ ವಿಚಿತ್ರ ಕಾಯಿಲೆಯಿಂದಾಗಿ ಆಕೆಯ ರೋಗನಿರೋಧಕ ಶಕ್ತಿಯು ಕ್ಷೀಣಿಸಿದೆ, ಅಲ್ಲದೆ ಒಂದು ಕಣ್ಣು ಸಂಪೂರ್ಣ ಕುರುಡಾಗಿ ಹೋಗಿದೆ. ಈ ರೋಗದ ಹೆಸರೇನು, ಮೂಲವೇನು, ಮುಂದೇನು ಎಂಬುದು ಸ್ಟೆತಾಸ್ಕೋಪುಗಳಿಗಿನ್ನೂ ಸವಾಲಾಗಿರುವಾಗ ಅದಕ್ಕೆ ಚಿಕಿತ್ಸೆಯ ಮಾತೆಂಬುದು ದೂರವೇ ಉಳಿದಿದೆ.

ಕ್ರೇಜಿ ಲೋಕ

ಆದಾಗ್ಯೂ ಟೆಕ್ಸಾಸ್ ವಿ.ವಿ.ಯ ಪ್ರೊಫೆಸರ್ ಅಭಿಮನ್ಯು ಗರ್ಗ್ ಎಂಬಾತ ಇದು 'ನಿಯೋನೇಟಲ್ ಪ್ರೊಜೆರಾಯ್ಡ್ ಸಿಂಡ್ರೋಮ್' ಇರಬಹುದೆ ಎಂಬ ಪರೀಕ್ಷೆಗಳನ್ನು ನಡೆಸಿದ್ದನಂತೆ. ಆ ರೋಗದಲ್ಲೂ ತುಂಬಾ ಬೇಗನೆ ವಯಸ್ಸಾಗುವುದು, ದೇಹದಿಂದ ಕೊಬ್ಬು ವಿಪರೀತದಲ್ಲಿ ಮಾಯವಾಗುವುದು, ಅಂಗಾಂಶಗಳು ನಶಿಸಿ ಹೋಗುವುದು ಮುಂತಾದ ಸಿಮಿಲರ್ ಲಕ್ಷಣಗಳಿರುತ್ತವೆ. ಆದರೆ ಅದೂ ಅಲ್ಲ ಎಂದು ನಂತರದಲ್ಲಿ ತಿಳಿದುಬಂದಿತ್ತು. ಇದರಿಂದ ಈಕೆಯೇನೂ ಧೃತಿಗೆಟ್ಟಿಲ್ಲ, ಬದಲಾಗಿ ತನ್ನ ಜೀವನವನ್ನೇ ಉದಾಹರಣೆಯಾಗಿ ಇಟ್ಟುಕೊಂಡು ಯುವ ಜನರಿಗೆ ಧೈರ್ಯದಿಂದ ಜೀವನ ನಡೆಸುವಂತೆ ಸ್ಫೂರ್ತಿದಾಯಕ ಮಾತುಗಳನ್ನಾಡುತ್ತಾಳೆ. ಈಕೆಯ ಭಾಷಣವೆಂದರೆ ಮುಗಿಬಿದ್ದು ಕೇಳುವಂತಿರುತ್ತದಂತೆ. 'ಯಾವುದೋ ಕಾರಣಕ್ಕೆ ದೇವರು ನನ್ನನ್ನು ಹೀಗೆ ಹುಟ್ಟಿಸಿದ್ದಾನೆ, ನಾನದನ್ನು ಬದಲಿಸುವುದಿಲ್ಲ, ರಸ್ತೆಯಲ್ಲಿ ಅಡ್ಡಬರುವ ಹಂಪ್ಸ್‌ಗಳಂತೆ ಇದನ್ನೂ ನಾನು ಮೀರುತ್ತೇನೆ. ನನ್ನ ಮುಖದ ಮೇಲಿನ ನಗುವನ್ನು ಮಾಸಗೊಡುವುದಿಲ್ಲ' ಎಂದು ಹೇಳುತ್ತಾಳೆ.

ಅಂದಹಾಗೆ ಪ್ರಪಂಚದಲ್ಲಿ ಮೂರೇ ಜನರಿಗೆ ಮಾತ್ರವಂತೆ ಈ ಕಾಯಿಲೆ ಇರೋದು.

ಎದ್ದೇಳು ಬೆಳಗಾಯಿತು....



ಇತಿಹಾಸದ ಸೆರಗಲ್ಲಿ ಮರೆಯಾಗಿ ಹೋಗಿರುವ ವೃತ್ತಿಯೊಂದರ ಅನಾವರಣವಿದು. ಬೆಳ್ಳಂಬೆಳಗಿನ ಚುಮುಚುಮು ಚಳಿಯಲ್ಲೂ ನಮ್ಮನ್ನು ನಾವು ಎಬ್ಬಿಸಿಕೊಳ್ಳಬೇಕೆಂದರೆ ಅದಕ್ಕೆ ಅಲಾರ್ಮ್‌ನ ಸಾಥ್ ಬೇಕೇ ಬೇಕು ಎನ್ನುವಂತಾಗಿದೆ. ಆದರೆ ಈ ಅಲಾರ್ಮ್‌ಗಳೇ ಇರದಿದ್ದ ಕಾಲದಲ್ಲಿ ಜನ ಹಾಸಿಗೆ ಬಿಟ್ಟೇಳಲು ಒಂದು ಮಸ್ತ್ ಐಡಿಯಾ ಹುಡುಕಿಕೊಂಡಿದ್ದರು ಎಂಬುದು ಬಹುಶಃ ಬಹಳ ಜನರಿಗೆ ತಿಳಿದಿರದ ಸಂಗತಿ.

ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ 'ನಾಕರ್ ಅಪ್' ಎಂಬ ಒಂದು ವೃತ್ತಿ ಅಸ್ತಿತ್ವದಲ್ಲಿತ್ತಂತೆ. ಈ ಕಸುಬಿನವರು ಮಾಡಬೇಕಾದ್ದೇನಪ್ಪಾ ಎಂದರೆ ಬೆಳಗ್ಗೆಯೇ ಎಲ್ಲಾ ಮನೆಯವರನ್ನು ಎಬ್ಬಿಸುವುದು. ತಮ್ಮ ನಸುಕಿನ ನಿದ್ದೆಯಿಂದ ಕೆಲಸಕ್ಕೆ ಹೋಗುವುದು ತಡವಾಗಬಾರದೆಂಬ ಕಾರಣಕ್ಕೆ ಜನ ಈ ವ್ಯವಸ್ಥೆ ಮಾಡಿಟ್ಟುಕೊಂಡಿದ್ದರು. ಆ ಮನೆಯವರು ಎದ್ದಿರುವುದು ಖಾತ್ರಿಯಾಗುವವರೆಗೂ ಆತ ಮುಂದಿನ ಮನೆಗೆ ಹೋಗುವಂತಿರಲಿಲ್ಲವಂತೆ. ಎರಡನೇ, ಮೂರನೇ ಅಂತಸ್ತಿನ ಮನೆಯಲ್ಲಿರುವವರನ್ನು ಎಚ್ಚರಿಸಲು ಈ 'ನಾಕರ್ ಅಪ್'ಗಳು ಉದ್ದನೆಯ ಬೊಂಬುಗಳನ್ನು ಮಾಡಿಕೊಂಡು ಕಿಟಕಿಯನ್ನು ಬಡಿಯುತ್ತಿದ್ದರಂತೆ. ವಾರಕ್ಕೊಮ್ಮೆ ಆ ಮನೆಯವರುಗಳು ಆತನಿಗೆ ಇಂತಿಷ್ಟು ಎಂಬ ಪಗಾರ ನೀಡುತ್ತಿದ್ದರು. ಇವರೇನೋ ಜನರನ್ನು ಎಬ್ಬಿಸುತ್ತಿದ್ದರು ಆದರೆ ಇವರನ್ನು ಎಬ್ಬಿಸಲು ಅದಿನ್ನಾವ ವೃತ್ತಿಯವರಿದ್ದರೋ ಬಲ್ಲವರಿಲ್ಲ.

ಪುಸ್ತಕ ಪರಿಚಯ




ಚಂದ್ರಶೇಖರ್ ಐಜೂರ್

ಅನಂತಮೂರ್ತಿ: ಒಂದು ಆಪ್ತ ಓದಿನ ಸುತ್ತ

ಈಗ ಕನ್ನಡ ಸಾಹಿತ್ಯಕ್ಕೆ ಪ್ರಶಸ್ತಿಗಳ ಸುಗ್ಗಿ. ಸರ್ಕಾರಿ - ಖಾಸಗಿ ಸಂಸ್ಥೆಗಳು ಜ್ಞಾನಪೀಠಿಗಳಿಗೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ ಪ್ರಶಸ್ತಿ ಹಂಚಲು ಮುಗಿಬಿದ್ದಿವೆ. ಈ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ 'ಜ್ಞಾನಪೀಠ ಪ್ರಶಸ್ತಿ ವಿಜೇತರು' ಮಾಲೆಯ ಪ್ರಕಟಣೆಯನ್ನು ಕೈಗೆತ್ತಿಕೊಂಡಿದೆ. ಈ ಮಾಲೆಯಲ್ಲಿ ಯು.ಆರ್.ಅನಂತಮೂರ್ತಿಯವರನ್ನು ಕುರಿತು ಶೂದ್ರ ಶ್ರೀನಿವಾಸ್ ಚೆಂದದೊಂದು ಪುಸ್ತಕ ರೂಪಿಸಿದ್ದಾರೆ. ಅನಂತಮೂರ್ತಿಯವರ ಕಥಾಲೋಕದ ಪರಿಚಯ, ಅವರ ಕಾದಂಬರಿಗಳ ಧ್ವನಿಪೂರ್ಣತೆ, ಸೃಜನೇತರ ಕೃತಿಗಳಲ್ಲಿ ಕಾಣುವ ಅನನ್ಯತೆ, ಮೂರು ಅನುವಾದಗಳ ಮಾದರಿ, ಅವರ ಹೋರಾಟದ ಪರಿಕಲ್ಪನೆಗಳ ಜೊತೆಗೆ ಅನಂತಮೂರ್ತಿಯವರು ಜ್ಞಾನಪೀಠ ಪ್ರಶಸ್ತಿ ಪಡೆದಾಗ ಹಾಗೂ ತುಮಕೂರಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣಗಳ ಆಯ್ದ ಭಾಗಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಇದರೊಟ್ಟಿಗೆ ಅನಂತಮೂರ್ತಿಯವರು ಮಾಡಿರುವ ರಾಜೀವ ತಾರಾನಾಥರ ಸಂದರ್ಶನ ಮತ್ತು ಅವರ ಬದುಕು ಬರಹಗಳ ನಡುವಿನ ಕೆಲವು ಮುಖ್ಯ ವಿವರಗಳನ್ನು ಶೂದ್ರ ಶ್ರೀನಿವಾಸರು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಕಟ್ ಅಂಡ್ ಪೇಸ್ಟ್ ಮಾದರಿಯ ಕೃತಿಯಂತೆ ಈ ಕೃತಿ ಕಂಡರೂ ಶೂದ್ರ ಶ್ರೀನಿವಾಸರು ತಮ್ಮ ನವಿರಾದ ನಿರೂಪಣೆಯಿಂದ ಅನಂತಮೂರ್ತಿಯವರ ಅನೇಕ ಬರಹಗಳ ನಡುವೆಯೇ ಇದನ್ನೊಂದು ಆಪ್ತ ಕೃತಿಯನ್ನಾಗಿಸಿದ್ದಾರೆ. ಅನಂತಮೂರ್ತಿಯವರ ಹೋರಾಟದ ಬದುಕನ್ನು ಚಿತ್ರಿಸುವಾಗ ಲೇಖಕರು ಅವರ ವ್ಯಕ್ತಿತ್ವವನ್ನು ಹೆಚ್ಚು ತೆರೆದಿಡದೆ ವಂದನಾರ್ಪಣಾ ಪಟ್ಟಿಕೊಟ್ಟು ಬಹುಬೇಗ ಆ ಅಧ್ಯಾಯವನ್ನು ಮುಗಿಸಿದ್ದಾರೆ. ಅವರ ಸಾಹಿತ್ಯ ಕೃತಿಗಳನ್ನು ಹೆಚ್ಚು ಚರ್ಚೆಗೆ ಎಳೆದುಕೊಂಡಂತೆ ಅವರ ಸಾಮಾಜಿಕ ಬದುಕಿನ ವಿವರಗಳನ್ನು ಹೆಚ್ಚು ದಾಖಲಿಸುವಲ್ಲಿ ಮಾತ್ರ ಲೇಖಕರು ಹಿಂದೆ ಬಿದ್ದಿರುವಂತೆ ಕಾಣುತ್ತದೆ. 'ಅನಂತಮೂರ್ತಿಯವರು ಎಂದೆಂದಿಗಿಂತ ಹೆಚ್ಚಾಗಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸಮಾಜಮುಖಿಯಾದಾಗ ಅತೃಪ್ತಿ, ವಿಷಾದ ಮತ್ತು ಸಿಟ್ಟನ್ನು ಒಬ್ಬ ಸಂತನಂತೆ ನುಂಗಿಕೊಂಡು ತಮ್ಮ ಒಟ್ಟು ಮಾತುಗಳಿಗೆ ಮತ್ತು ಲೇಖನಗಳಿಗೆ ಆತ್ಮೀಯತೆಯನ್ನು ಆರೋಪಿಸಿಕೊಳ್ಳುತ್ತಾರೆ. ಇದು ಅಗತ್ಯವೂ ಕೂಡ' ಎಂಬ ಲೇಖಕರ ಮಾತುಗಳು ಈ ಕೃತಿಯ ಒಟ್ಟಾರೆ ಆಶಯವನ್ನು ಬಿಡಿಸಿ ಹೇಳಿದಂತಿವೆ. ಲೇಖಕರ ಮಾತುಗಳಿಗಿಂತ ಅನಂತಮೂರ್ತಿಯವರ ಬರಹಗಳಿಂದಾಗಿಯೇ ಈ ಕೃತಿ ಆಪ್ತವಾಗಿದೆ.




ಯು.ಆರ್.ಅನಂತಮೂರ್ತಿ
'ಜ್ಞಾನಪೀಠ ಪ್ರಶಸ್ತಿ ವಿಜೇತರು' ಮಾಲೆ
ಲೇಖಕರು: ಶೂದ್ರ ಶ್ರೀನಿವಾಸ್
ಪ್ರಕಾಶಕರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು-02
ಪುಟಗಳು: 140, ಬೆಲೆ: ರೂ.50, ಪ್ರಕಟಣೆ: 2011

ಬೆಳಕು ಚೆಲ್ಲುವ ಮೂರು ಸಾಲು

'ಮೂರು ಸಾಲು ಮರ'ದ ನಂತರ ಕವಿ ಡಾ.ಸಿ.ರವೀಂದ್ರನಾಥರ 'ಒಂದು ಹನಿ ಬೆಳಕು' ಹಾಯ್ಕುಗಳ ಸಂಕಲನ ಪ್ರಕಟಗೊಂಡಿದೆ. ಮೊದಲನೆಯದು ಅವರ ಸ್ವಂತ ರಚನೆಯದ್ದಾದರೆ ಎರಡನೆಯದು ಜಪಾನಿನ ವಿವಿಧ ಕವಿಗಳ ಹಾಯ್ಕುಗಳ ಅನುವಾದ. ತಮ್ಮ ಮೊದಲ ಸಂಕಲನಕ್ಕಿಂತಲೂ 'ಒಂದು ಹನಿ ಬೆಳಕು'ವಿನಲ್ಲಿ ರವೀಂದ್ರನಾಥರು ಸಾಕಷ್ಟು ಮಾಗಿರುವ, ಪಕ್ವಗೊಂಡಿರುವ ಕುರುಹುಗಳು ಯಥೇಚ್ಛವಾಗಿ ಕಾಣಸಿಗುತ್ತವೆ:

ಕುಕ್ಕರಗಾಲಲ್ಲಿ ಕುಳಿತ
ಕಪ್ಪೆಯ ಕಣ್ಣುಗಳಲ್ಲಿ
ಮೋಡ
******
ಈ ರಾತ್ರಿ
ನಕ್ಷತ್ರಗಳ ಸಭೆ
ಮೊದಲ ಮಾತು ಯಾರದು?
******
ಭಿಕ್ಷುಕನೊಬ್ಬ
ಹೊದ್ದು ನಡೆದಿದ್ದಾನೆ
ಭೂಮಿ ಆಕಾಶ
******
ಉದುರಿದ ಹೂವೊಂದು
ಕೊಂಬೆಗೆ ಮರಳುತ್ತಿದೆ
ಅಲ್ಲ! ಚಿಟ್ಟೆ



ಸುಮಾರು 58 ಜಪಾನಿ ಕವಿಗಳ ಹಾಯ್ಕುಗಳು ಈ ಸಂಕಲನದಲ್ಲಿವೆ. ಒಂದೇ ಕೊರತೆಯೆಂದರೆ ಹಾಯ್ಕು ಕಾಯ್ನೆಲದಿಂದ ಇಷ್ಟೊಂದು ಕವಿಗಳ ಹಾಯ್ಕುಗಳು ಕನ್ನಡಕ್ಕೆ ಬರುವಾಗ ಅದಕ್ಕೊಂದು ಸುದೀರ್ಘ ಪ್ರಸ್ತಾವನೆ ನೀಡುವಲ್ಲಿ ಲೇಖಕರ ಗೈರುಹಾಜರಿ ಎದ್ದು ಕಾಣುತ್ತದೆ. ಹಾಯ್ಕು ಪರಂಪರೆಯನ್ನು ಅರಿಯುವ ತುರ್ತು ಇವತ್ತಿನ ಕನ್ನಡ ಸಾಹಿತ್ಯಕ್ಕೆ ಬೇಕಿದೆ. ಡಾ.ಸುಮಾ ಎಂಬಾರರ ಮುನ್ನುಡಿ, ವಿದ್ಯಾರಶ್ಮಿ ಪೆಲತ್ತಡ್ಕ ಅವರ ಬೆನ್ನುಡಿ ಈ ಸಂಕಲನವನ್ನು ವಸ್ತುನಿಷ್ಠವಾಗಿ ನೋಡುವ ಯಾವ ಗೋಜಿಗೂ ಹೋಗಿಲ್ಲ. ಹೆಚ್ಚು ಶ್ರಮವಿಲ್ಲದೆ ಬರೆದಿರುವ ಎಮ್.ಎಸ್.ಮೂರ್ತಿಯವರ ರೇಖಾಚಿತ್ರಗಳು ಹಾಯ್ಕು ನಡಿಗೆಯೊಂದಿಗೆ ಅಲ್ಲಲ್ಲಿ ಕಾಣಿಸಿಕೊಂಡಿವೆ. ಹಾಯ್ಕು ಪ್ರಿಯರಿಗೆ ಈ ಕೃತಿ ಖಂಡಿತವಾಗಿಯೂ ರುಚಿಸುತ್ತದೆ.

ಒಂದು ಹನಿ ಬೆಳಕು
ವಿವಿಧ ಕವಿಗಳ ಜಪಾನಿ ಹಾಯ್ಕುಗಳು
ಕನ್ನಡಕ್ಕೆ: ಡಾ.ಸಿ.ರವೀಂದ್ರನಾಥ್
ಪ್ರಕಾಶಕರು: ಅಂಕಿತ ಪುಸ್ತಕ, 53, ಶ್ಯಾಮ್‌ಸಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ ಬಸವನಗುಡಿ, ಬೆಂಗಳೂರು-04.
ಪುಟಗಳು: 72, ಬೆಲೆ: ರೂ.70, ಪ್ರಕಟಣೆ: 2011







ಬಂಗಾರಪ್ಪನವರು ರಂಗಸಂಸ್ಥೆಗೆ ಮಂಜೂರು ಮಾಡಿದ ಭೂಮಿಯಲ್ಲಿನ ಕಟ್ಟಡಗಳು

'ಬಂ' ಅವರ ವ್ಯಕ್ತಿತ್ವಕ್ಕೆ ಒಂದು ಸಾಕ್ಷಿ

ಒಂದು ಪತ್ರ

ಸೊರಬದ ಕುಬಟೂರಿನ ಸಾರೆಕೊಪ್ಪದ ಬಂಗಾರಪ್ಪ ವಿಧಿವಶರಾಗಿದ್ದಾರೆ. ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಇತಿಹಾಸದಲ್ಲಿ ಅವರು ಖಂಡಿತವಾಗಿಯೂ ಚಿರಸ್ಥಾಯಿಯಾಗಿದ್ದಾರೆ. ಅವರ ಸಾಮಾಜಿಕ ಕಾಳಜಿಯ ಒಂದು ಕಿರು ಪರಿಚಯ ಇಲ್ಲಿದೆ.

'ಜೈ ಕರ್ನಾಟಕ ಸಂಘ' ಆ ವೇಳೆಗಾಗಲೇ ಹಾಸನ ಜಿಲ್ಲೆಯಲ್ಲಿ ಸ್ವಲ್ಪಮಟ್ಟಿಗೆ ಪರಿಚಿತ ಸಂಸ್ಥೆಯಾಗಿತ್ತು. ನೀನಾಸಂ ತಿರುಗಾಟದ ಪರಿಚಯ ಪತ್ರದಲ್ಲಿ ಪ್ರಕಟಿಸುವ ಕರ್ನಾಟಕದ ನಕ್ಷೆಯಲ್ಲಿ ನಮ್ಮೂರಿನ ಹೆಸರು ಪದೇಪದೇ ಕಾಣಿಸಿಕೊಳ್ಳುತ್ತಿತ್ತು. ಇದರಿಂದಾಗಿ ನಮ್ಮ ಸಣ್ಣ ಹಳ್ಳಿಯ ಹೆಸರು ರಾಜ್ಯಮಟ್ಟದಲ್ಲೂ ನಾಟಕ ವಲಯದ ಕೆಲವರಿಗೆ ಗೊತ್ತಿತ್ತು.

ನಮ್ಮ ಕಾರ್ಯಕ್ರಮಗಳೆಲ್ಲಾ 'ಪ್ರಕೃತಿ ರಂಗ ಮಂಚ ರಕ್ಷಿದಿ' ಎಂದರೆ, ರಕ್ಷಿದಿ ಶಾಲಾ ಆವರಣದಲ್ಲಿ ನಡೆಯುತ್ತಿದ್ದುದರಿಂದ ನಾವು ಶಾಲೆಗೆ ತೊಂದರೆ ಯಾಗದಂತೆ ಕಾರ್ಯಕ್ರಮಗಳನ್ನು ಮಾಡಬೇಕಿತ್ತು. ನಾವೇ ಕಟ್ಟಿ ಬೆಳೆಸಿದ ಶಾಲೆಯಾದರೂ ಅನೇಕ ಸಾರಿ ನಾವು ಅಲ್ಲಿ ಕಾರ್ಯಕ್ರಮಗಳನ್ನು ನಡೆಸಲು, ಶಿಕ್ಷಣ ಇಲಾಖೆಯ ಅನುಮತಿ ಪಡೆಯಬೇಕಾಗಿತ್ತು, ಇದು ಕಾನೂನಿನಂತೆ ಅನಿವಾರ್ಯ ವಿತ್ತು. ಇದರಿಂದ ಕೆಲವು ಸಾರಿ ನಮಗೆ ಕಿರಿಕಿರಿಯಾಗತೊಡಗಿತು. ನಮ್ಮದೇ ಆದ ಸ್ಥಳವಿದ್ದರೆ ಒಳ್ಳೆಯದು ಅನ್ನಿಸತೊಡಗಿತು.

ಆಗ ಬಂಗಾರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರ ರಾಜಕೀಯ ನಿಲುವುಗಳೇನೇ ಇರಲಿ, ಅವರ ಸಮಾಜವಾದಿ ಹಿನ್ನೆಲೆ, ಸಂಸ್ಕೃತಿಯ ವಿಷಯಗಳಲ್ಲಿ ಅವರಿಗಿರುವ ನಿಲುವುಗಳು ನಮಗೆ ತಿಳಿದಿತ್ತು. ಆದ್ದರಿಂದ ನಮ್ಮ ಕಾರ್ಯಕ್ರಮಗಳ ಪತ್ರಿಕಾವರದಿಗಳು, ಕರಪತ್ರಗಳು ಇನ್ನಿತರ ವಿವರಗಳ ಪ್ರತಿಗಳನ್ನಿಟ್ಟು - ನಮಗೆ ರಂಗಮಂದಿರ ನಿರ್ಮಾಣಕ್ಕೆ ಸ್ಥಳ ನೀಡುವಂತೆ ಕೇಳಿ, ನಮಗೆ ಅನು ಕೂಲವಾದ ಖಾಲಿ ಇರುವ ಸರ್ಕಾರಿ ಸ್ಥಳವನ್ನು ಸೂಚಿಸಿ, ಬಂಗಾರಪ್ಪ ನವರಿಗೆ ಒಂದು ಅರ್ಜಿಯನ್ನು ಬರೆದು, ನೇರವಾಗಿ ಅವರ ವೈಯಕ್ತಿಕ ವಿಳಾಸಕ್ಕೆ ಕಳುಹಿಸಿಕೊಟ್ಟೆವು. ನಮಗ್ಯಾರಿಗೂ ಬಂಗಾರಪ್ಪನವರ ಸಂಪರ್ಕವಾಗಲೀ ಪರಿಚಯವಾಗಲೀ ಇರಲಿಲ್ಲ, ಆದರೂ ಏನೋ ಮನಸ್ಸಿಗೆ ಬಂದ ಕೆಲಸವನ್ನು ಮಾಡಿದ್ದೆವು ಅಷ್ಟೆ.

ಅರ್ಜಿ ಕಳುಹಿಸಿ ಎರಡು ವರ್ಷ ಕಳೆದಿರಬೇಕು. ನಮಗೆ ನಮ್ಮ ಅರ್ಜಿಯ ವಿಷಯ ಕೆಲವು ಸಾರಿ ನೆನಪಾದರೂ ಅದೀಗ ಕಸದಬುಟ್ಟಿ ಸೇರಿರಬೇಕೆಂದು ಸುಮ್ಮನಾಗಿದ್ದೆವು. ಸಕಲೇಶಪುರದ ತಹಸೀಲ್ದಾರ್ ರನ್ನು ಒಮ್ಮೆ ವಿಚಾರಿಸಿದಾಗ ಅವರು "ಹಾಗೆಲ್ಲ ಕಂಡಕಂಡವರಿಗೆಲ್ಲ ಸ್ಥಳ ಕೊಡಲು ಬರುವುದಿಲ್ಲ"ವೆಂದು ತಿಳಿಸಿದರು. ಆಗ ಇದ್ದ ಶಾಸಕರೂ ನಮ್ಮ ಪಕ್ಷದವರಲ್ಲವೆಂದು ಅವರನ್ನು ಮಾತಾಡಿಸ[illegible] ಸುಮ್ಮನೆ ಕೂತಿದ್ದೆವು!

ಒಂದು ದಿನ ನಾವೊಂದಷ್ಟು ಜನ ಬೆಳ್ಳೇಕೆರೆಯ ಪಂಚಾಯ[illegible] ಆಫೀಸಿನಲ್ಲಿ ಹರಟೆ ಹೊಡೆಯುತ್ತ ಕೂತಿದ್ದೆವು. ಹಾನುಬಾ[illegible] ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಹೊರಗೆ ಯಾರಲ್ಲೋ "[illegible] ಕರ್ನಾಟಕ ಸಂಘ ಎಲ್ಲಿದೆ?" ಎಂದು ವಿಚಾರಿಸುತ್ತಿದ್ದರು. ಅವ[illegible] ಹೊಸದಾಗಿ ವರ್ಗವಾಗಿ ಬಂದವರಾದ್ದರಿಂದ ಅವರಿ[illegible] ನಮ್ಮ ಪರಿಚಯ ಇರಲಿಲ್ಲ. ನಂತರ ಒಳಗೆ ಬಂ[illegible] ನಮ್ಮ ಪರಿಚಯ ಮಾಡಿಕೊಂಡರು.

ನಮಗೆ ಆಶ್ಚರ್ಯವಾಗುವಂಥ ಸುದ್ದಿಯಿ[illegible] ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗಲೇ ನವ[illegible] ನಾವು ಬಯಸಿದ ಜಾಗದಲ್ಲಿ ಒಂದು ಎ[illegible] ಸ್ಥಳವನ್ನು ಮಂಜೂರು ಮಾಡುವಂತೆ ಜಿಲ್ಲಾಧಿ[illegible] ಗಳಿಗೆ ಆದೇಶ ನೀಡಿದ್ದರು. ಆ ಆದೇಶ ಸರ್ಕಾ[illegible] ಯಂತ್ರದೊಳಗೆ ಹಾದು ಇಲ್ಲಿಗೆ ತಲುಪಿದಾಗ ಇ[illegible] ಸಮಯವಾಗಿತ್ತು. ಆ ವೇಳೆಗಾಗಲೇ ಬಂಗಾರಪ್ಪನವರು ಅಧಿ[illegible] ಕಳೆದುಕೊಂಡಿದ್ದರು. ಬಂಗಾರಪ್ಪನವರು ನಮ್ಮಲ್ಲಿ ಯಾರನ[illegible] ನೋಡದೇ ಇದ್ದರೂ ಸಹ ನಮ್ಮ ಅರ್ಜಿಯ ವಿವರಗಳನ್ನು ನೋ[illegible] ಅದರ ಆಧಾರದ ಮೇಲೆ ನಮಗೆ ಸ್ಥಳ ಮಂಜೂರು ಮಾಡಲು ಆದ[illegible] ಕೊಟ್ಟಿದ್ದರು.

ಕೇವಲ ಇಪ್ಪತ್ತೆರಡು ರೂಪಾಯಿ ಖರ್ಚಿನಲ್ಲಿ ನಮಗೆ ಜ[illegible] ಸಿಕ್ಕಿತ್ತು. ರಕ್ಷಿದಿಯಲ್ಲಿ, ಸಕಲೇಶಪುರ ಹಾನುಬಾಳು ರಸ್ತೆಯ ಪಕ್ಕದ[illegible] ಗುಡ್ಡದ ಇಳಿಜಾರಿನಲ್ಲಿ ಒಂದು ಎಕರೆ ಜಾಗ ನಮ್ಮ ರಂಗಮಂ[illegible] ಯೋಜನೆಗೆ ದೊರೆತಿತ್ತು.

(ಈ ಸ್ಥಳದಲ್ಲೀಗ 'ಪೂರ್ಣಚಂದ್ರ ತೇಜಸ್ವಿ ರಂಗಮಂದಿರ' ಮ[illegible] 'ರಂಗಜಂಗಮ' ಬಯಲುರಂಗಮಂದಿರ ನಿರ್ಮಾಣವಾಗುತ್ತಿ[illegible] 'ರಂಗಧಾಮ' ಅತಿಥಿಗೃಹ ಪೂರ್ಣಗೊಂಡಿದೆ. ಗ್ರಂಥಾಲಯ ಮ[illegible] ಕಚೇರಿಗಳೂ ನಿರ್ಮಾಣವಾಗುತ್ತಿವೆ.)

ಈ ಏಪ್ರಿಲ್ ತಿಂಗಳಿನಲ್ಲಿ ಬಯಲುರಂಗಮಂದಿರ[illegible] ಉದ್ಘಾಟನೆಗೆ ಬಂಗಾರಪ್ಪನವರನ್ನು ಆಹ್ವಾನಿಸಿ ಚಕಿತಗೊಳಿಸಬೇಕೆ[illegible] ದ್ದೆವು. ಅದೀಗ ಅಸಾಧ್ಯವಾಗಿದೆ. ಜೈ ಕರ್ನಾಟಕ ಸಂಘ ಬೆಳ್ಳೇಕೆರೆ[illegible] ಎಲ್ಲ ಗೆಳೆಯರು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದಾರೆ.

- ಪ್ರಕಾಶ್ ರಕ್ಷಿ[illegible]
ಜೈ ಕರ್ನಾಟಕ ಸಂಘ, ಬೆಳ್ಳೇ[illegible]

ನಾಗಬಂಧದ ಬಂಧನ ನಂಬಿಕೆ ಮತ್ತು ಕೇಳಿಕೊಳ್ಳಬೇಕಾದ ಪ್ರಶ್ನೆಗಳು

> "ನಾಗಾರಾಧನೆಯ ಸಂಪ್ರದಾಯ ಮೂಲತಃ ಅವೈದಿಕನೆಲೆಯದಾಗಿದ್ದು, ಪ್ರಾಚೀನವಾಗಿ ಅಲ್ಲಿ ಆರಾಧನೆಯ ಮುಖ್ಯ ಸಂಗತಿಯಾಗಿ ಬಳಕೆಯಾಗುತ್ತಿದ್ದುದು ಮಣ್ಣಿನ ಕಳಶಗಳು. ಕತ್ತಿ ಹಾಕುವುದಕ್ಕೇ ನಮ್ಮ ಪೂರ್ವಿಕರು ಹಾಕಿಕೊಂಡಿದ್ದ ಸ್ವಯಂ ನಿಷೇಧದಿಂದಾಗಿ ಸಂದಣಿಸಿಕೊಂಡಿದ್ದ ಬನದೊಳಗೆ ನಿರಾಯಾಸವಾಗಿ ಹೋಮ ಹವನಾದಿ ಅಗ್ನಿಕುಂಡದ ಜ್ವಾಲೆ ಬೆಳಗುತ್ತಿದೆ. ಜಲಪರಂಪರೆಗೆ ಸೇರಿದ ಈ ನಾಗಪರಂಪರೆ ಸಂಪೂರ್ಣವಾಗಿ ಅಗ್ನಿಪರಂಪರೆಯವರ ಹಿಡಿತಕ್ಕೆ ಸಂದು ಹೋಗಿದೆ."

• ಹೆಚ್.ಜಯಪ್ರಕಾಶ್ ಶೆಟ್ಟಿ
ಕುಂದಾಪುರ

...ಳಿಯ ಯಾವುದೇ ಹಳ್ಳಿ ಮೂಲೆಗೆ ಹೋದರೂ ...ದಾದರೂ ನಾಗಬನ ಸಿಗದ ಹಳ್ಳಿಗಳು ಇರಲಾರ ...ಮನೆ(ಒಂದೊಂದು ಅವಿಭಕ್ತ ಕುಟುಂಬ)ಗೊಂದ ...ಸಿಗುವ ನಾಗಬನಗಳು ಮೂಲತಃ ದೇವರಕಾಡು ...ಗಳನ್ನು ಕರೆಯುತ್ತಿದ್ದುದೇ ನಾಗಬನ ಇಲ್ಲವೇ ನಾಗ ...ೀ. ದೇವರ ಹೆಸರನ್ನು ಸ್ಥಳವಾಚಕಗಳ ಮೂಲಕ ...ಗ್ವಾಚಕಗಳ ಮೂಲಕ ಸೂಚಿಸುವ ಪರಿಪಾಠ ...ಮ್ಮೂರ ಕಡೆ ಇದೆ. ಅದರಂತೆ ಧರ್ಮಸ್ಥಳವನ್ನು ...ಗಳಲ್ಲಿ ಮುಗ್ಧವಾಗಿ ತೆಂಕಲಾಯ್ ಎಂದು ಕರೆದಂತೆ ...ರೆಯುತ್ತಿದ್ದುದು ಬನದ ದೇವು ಎಂದು. ಕಾರಣಿಕ ...ವನ್ನಾದರಿಸಿ ಅದನ್ನು ಸತ್ಯ ದೇವತೆ ಎಂದೂ ...ರೂಢಿ ನಮ್ಮೂರ ಕಡೆಯಿದೆ. ಗಂಡನ ಹೆಸರೊ, ...ನ ಹೆಸರೋ ನಾಗನಿಂದ ಆರಂಭವಾಗುವಂತಿದ್ದರೆ ...ಹೆಂಗಸರು ಅವರ ಹೆಸರಿರುವ ಜಾಗದಲ್ಲಿ ಬನದ ...ವೇ ಸೇರಿಸಿ ಗೌರವ ತೋರುವುದನ್ನು ಇನ್ನೂ ...ಬಹುದು. ಹೀಗೆ ಬಲ್ಲೆಗಳೆಂದು ಕರೆಯಲ್ಪಡುತ್ತಿದ್ದ ...ಮತ್ತ ಬಾಗಾಳು ಇಲ್ಲವೆ ನೆಲ್ಲಿ ಇತ್ಯಾದಿ ಮರಗಳು ...ಮಾನ್ಯ. ಅಮೂಲ್ಯವಾದ ಅನೇಕ ಗಿಡಮೂಲಿಕೆ ...ಬನಗಳಲ್ಲಿ ಲಭ್ಯವಿರುತ್ತಿದ್ದುವು. ಈ ಮರಗಳಿಗಾ ...ದಿಸಿಕೊಂಡ ಬನದ ಯಾವುದೇ ಭಾಗಕ್ಕಾಗಲೀ ...ಹಾಕದೆ ಆ ಬನಗಳನ್ನು ಸ್ವಚ್ಛಂಧವಾಗಿ ಬೆಳೆಯಲು ...ರು. ಸ್ಥಳೀಯವಾಗಿ ಸಿಗುವ ಕಪ್ಪು ಬಣ್ಣದ ...ಯೋ ಅಥವಾ ಮೆದು ಜಾತಿಯ ಜಾಜಿ ...ೀ ಕೆತ್ತಿದ ನಾಲ್ಕಾರು ನಾಗಮಿಥುನದ ಶಿಲ್ಪಗಳು ...ಪೀಠದಂತಿರುವ ನಿಸರ್ಗ ಸಹಜ ಕಲ್ಲಿನ ದಿಬ್ಬಕ್ಕೋ ...ಂತೆ ಇವು ಬನದ ನೆರಳಿನಲ್ಲಿ ಮಳೆ, ಬಿಸಿಲು, ...ತೆರೆದೇ ಇರುತ್ತಿದ್ದವು. ಈ ಕಾರಣಕ್ಕಾಗಿಯೇ ...ಲ್ಲಿಗೆ ನಾಯಿ ಉಚ್ಚೆ ಹೊಯ್ಯುವುದು ಇಷ್ಟೆ ...ಗಿ" ಎಂಬ ವಾಗ್ರೂಢಿಯನ್ನು ಮಾತಿಗೊಮ್ಮೆ ...ಎಂಟು. ಮನೆಯ ಸಮೀಪವೇ ಇರುವ ಈ ...ನಾವು ಸಾಕಿದ ಕೋಳಿ ಗಂಟಿ(ಹಸು)ಗಳು ...ಭಿಡೆಯಿಲ್ಲದೆ ಹೋಗಿ ಮೇದು ಬರುತ್ತಿದ್ದವು. ...ತೂ ಅಷ್ಟೇ ನಿರ್ಭಿಡೆಯಿಂದ ನಾಗನ ಕಲ್ಲಿನ ...ನ್ನೆಲ್ಲ ಕೆದರಾಡಿ ಹುಳ ಹುಪ್ಪಡಿ ತಿಂದು ... . ಇದು ನಿನ್ನೆ ಮೊನ್ನೆಯವರೆಗೆ ಅನೇಕ ಕಡೆ ...ದೇ ಬಂದ ರೂಢಿ. ಇವುಗಳನ್ನು ಪೂಜಿಸುವ ...ಗಳಾದ ತನುಹಾಕುವ (ಬಾಳೆಗೊನೆ ಒಪ್ಪಿಸುವ), ...ವ (ಒಂದಿಷ್ಟು ಹಾಲು, ಬಿಳಿ ಅಕ್ಕಿ ಅರ್ಪಿಸುವ) ...ವರ್ಷದ ಯಾವುದೋ ಒಂದೆರಡು ದಿನಗಳಲ್ಲಿ

ಹಾವಿದ್ದರೂ ಅದು ಸರ್ಪವಾಗಿದ್ದರೆ ಅದನ್ನು ಪುರೋಹಿತರ ಮೂಲಕ ಹಲಸಿನ ಕಟ್ಟಿಗೆಯಲ್ಲಿಟ್ಟು ಸುಡುವುದಲ್ಲದೆ ಅದರ ಶ್ರಾದ್ಧವಿಧಿಯನ್ನು ಪುರೋಹಿತರ ಸಂತರ್ಪಣೆಯ ಮೂಲಕ ನಡೆಸಬೇಕಿತ್ತು. ಹೋಮ ಹವನದ ಜೊತೆಗೆ ನಿಗಧಿತ ಸಂಖ್ಯೆಯ ಬ್ರಾಹ್ಮಣರಿಗೆ ಊಟ ಹಾಕಲೇಬೇಕೆಂಬ ನಿಯಮ ಚಾಲ್ತಿಯಲ್ಲಿತ್ತು. ಮನುಷ್ಯರು ಸತ್ತು ಬಿದ್ದರೆ ಕೊಡದ ಪ್ರಾಮುಖ್ಯತೆ ಈ ಸತ್ತ ಹಾವುಗಳಿಗೆ ದಕ್ಕುತ್ತಿದ್ದುದಲ್ಲದೆ, ತನ್ಮೂಲಕವಾದ ಲಾಭಗಳು ನಿಶ್ಚಿತವಾಗಿ ಒಂದು ಸಮುದಾಯಕ್ಕೆ ದಕ್ಕುತ್ತಿತ್ತು. ದುಬಾರಿಯೆನಿಸಿದರೂ ಇದು ಒಂದು ಮಿತಿಯಲ್ಲಿಯೇ ನಡೆದುಕೊಂಡು ಬರುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ನಾಗಬನಗಳು ಬನಗಳಾಗಿಯೇ ಇದ್ದವು. ಈ ಬನಗಳ ಸ್ವರೂಪಕ್ಕೆ ಅಂದು ಈ ಅಕ್ರಮಕೂಟ ಕೈಯಿಕ್ಕಿರಲಿಲ್ಲ.

ಆದರೆ ಇತ್ತೀಚಿನ ದಿನಗಳಲ್ಲಿಯ ಸ್ಥಿತಿ ಆತಂಕಕಾರಿಯಾಗಿ ಬೆಳೆಯುತ್ತಿದೆ. ಈ ನಂಬುಗೆ ಅನ್ನುವುದಕ್ಕಿಂತ ಮುಖ್ಯವಾಗಿ ಭಯವನ್ನೇ ಬಂಡವಾಳ ಮಾಡಿಕೊಂಡು ನಾಗನ ಹೆಸರಿನಲ್ಲಿ ಅನಾರೋಗ್ಯಕರವಾದ ದಂಧೆಯೊಂದು ಅವ್ಯಾಹತವಾಗಿ ಊರ್ಜಿತವಾಗುತ್ತಿದೆ. ನಾಗದರ್ಶನಗಳು ನಡೆದಲ್ಲೆಲ್ಲಾ ಮೂಲಿಸ್ಥಳದಿಂದ ಮಣ್ಣಿನ ಪ್ರಸಾದ ತೆಗೆದಷ್ಟೇ ಸುಲಭವಾಗಿ ಹೊಸ ಹರಕೆಗಳನ್ನು ಕಾಲಗರ್ಭದಿಂದ ಅಗೆದು ತೆಗೆದು ಹುಟ್ಗತಿ (ಮರೆಯಾದುದನ್ನು ನೆನಕೆ ಮಾಡುವುದು) ಕೊಡಲಾಗುತ್ತಿದೆ. ನಾಗಬನಗಳ ಜಾಗದಲ್ಲಿ ಕಾಂಕ್ರೀಟು ಗೋಪುರಗಳನ್ನು ನಿರ್ಮಿಸುವಂತೆ ಆಜ್ಞಾಪಿಸಲಾಗುತ್ತಿದೆ. ಈ ಗೋಪುರಗಳಲ್ಲಿ ಹೊಸದಾಗಿ ಪ್ರತಿಷ್ಠಾಪನಾ ಕಾರ್ಯದ ನಂತರ ಸರಣಿಯಲ್ಲಿ ವರ್ಷಕ್ಕೊಂದರಂತೆ ಶುದ್ಧ ಕಳಶ ಎನ್ನುವ ರಿನೀವಲ್ ಕಾರ್ಯಕ್ರಮಗಳನ್ನು ಮಾಡಲೇಬೇಕಾದ ಹುಕುಂಗಳು ಈ ದರ್ಶನದ ಪಾತ್ರಿ ಮತ್ತು ಪುರೋಹಿತರ ಜಂಟಿಪಡೆ ಜಾರಿಗೊಳಿಸುತ್ತಿದೆ. ಆಶ್ಲೇಷಬಲಿ, ನಾಗಮಂಡಲಗಳು ನಿತ್ಯದ ಮಾತಾಗುವಷ್ಟು ಅತಿಸಂಖ್ಯೆ ಮತ್ತು ದುಬಾರಿಯಲ್ಲಿ ನಡೆಯುತ್ತಲೇ ಇವೆ. ಮುಖ್ಯವಾಗಿ ಇವು ಕುಟುಂಬದ ಬನಗಳಾಗಿಯೇ ಇರುವುದರಿಂದ ಉಳ್ಳವರು ಇಲ್ಲದವರು ಎಂಬ ಭೇದವಿರದೆ ಎಲ್ಲರೂ ವರಾಡ (ವಂತಿಗೆ) ಕೊಡಬೇಕಾಗುವ ಕಾರಣದಿಂದ, ಅನೇಕ ಬಡಕುಟುಂಬಗಳು ಬಲಿಷ್ಠರ ನಡುವೆ ನಲುಗಿಹೋಗುವ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿದೆ. ಯಾವ ಯಾವುದೋ ಧಾರಿಯಲ್ಲಿ ಹಣ ಮಾಡಿದ ಧನಿಕರು ತಮ್ಮ ಸಂಪಾದನೆಯ ಗಣಿತವನ್ನು ಈ ಮೂಲಕ ಲೋಕಕ್ಕೆ ಪ್ರದರ್ಶಿಸಲು ಅವಕಾಶವಾಗುತ್ತಿದೆ. ಈ ನೈತಿಕ ದಿವಾಳಿಶೂರರು ಧರ್ಮದುರಂಧರರಾಗಿ 'ನಾಗಮನ್ನಣೆ' ಪಡೆಯುತ್ತಿರುವ ಮೂಲಕ ಅನೈತಿಕವೆನ್ನುವುದು ಶುಚೀಕರಿಸಲ್ಪಟ್ಟ ನೈತಿಕ ನಾಣ್ಯವಾಗಿ ಚಲಾವಣೆಗೆ ಬರುತ್ತಿದೆ. ಈ ಪಾತ್ರಿಯೊಂದಿಗೆ ಉಣ್ಣುವ ಮತ್ತು ಅಡಿಗೆ ಮಾಡುವ ಫಲಾನುಭವಿಗಳೆಲ್ಲಾ ಹೀಗೆ ಒಂದೇ ಸಮುದಾಯಕ್ಕೆ ಸೇರಿದವರಾಗಿ ಇದೊಂದು ಧಾರ್ಮಿಕ ದಂದೆಯಾಗಿ ಮಾರ್ಪಟ್ಟಿರುವುದರ ಕುರಿತು ಕೊಡುವವರು ಗೊಣಗಿಕೊಂಡೇ ಕೊಡುತ್ತಿದ್ದಾರೆ. ಪಡೆಯುವವರು ಅಧಿಕಾಧಿಕ ಕಸಿಯುತ್ತಿದ್ದಾರೆ.

ನಂಬಿಕೆಯನ್ನು ಪ್ರಶ್ನಿಸಿದರೆ ಉರಿದೆದ್ದು ಬೀಳುವ ನೀತಿ ಮತ್ತು ನಂಬಿಗೆಯ ಕಾವಲುಗಾರರು ಗಟ್ಟಿಗೊಂಡು ಸಂಘಟಿತವಾಗುತ್ತಿರುವ ಈ ಕಾಲದಲ್ಲಿ ಮಡೆಸ್ನಾನವನ್ನು ನಂಬಿಗೆಯ ಪ್ರಶ್ನೆಯೆತ್ತಿ ಬಾಯಿಮುಚ್ಚಿಸಲು ಯತ್ನಿಸಲಾಗುತ್ತಿದೆ. ಈ ಯತ್ನ ಮಾಡುವವರು ಕೇಳಿಕೊಳ್ಳಬೇಕಾದ ಒಂದಿಷ್ಟು ಪ್ರಶ್ನೆಗಳನ್ನು ಎದುರು ತಂದುಕೊಳ್ಳುವುದು ಮುಖ್ಯವಾಗುತ್ತದೆ. ಯಾಕೆಂದರೆ ಎಂಜಲ ಮೇಲೆ ಉರುಳುವವರ ಆಳದಲ್ಲಿ ನೆಟ್ಟು ಬೆಳೆಯಿಸಲಾಗಿರುವ ದಯನೀಯ ಸ್ಥಿತಿಯ ಚರಿತ್ರೆಯೇ ಈ ಉರುಳಾಟದ ಹಿಂದಿದೆ. ಅದಲ್ಲದೆ ನಂಬಿಕೆಗಳೆಂದರೆ ಗೊಂಚಲಿದ್ದ ಹಾಗೆ. ಒಂದಕ್ಕೆ ಹೇಳಿದ ಮಾತು ಇನ್ನೊಂದಕ್ಕೂ ಅನ್ವಯಿಸುತ್ತದೆ. ಈ ನಂಬಿಕೆಗಳು ಯಾವ ತೆರನಾದ ಇರುವಿಕೆ ಮತ್ತು ವಿಕಾಸವನ್ನು ತೋರಿವೆ? ಹತ್ತಿಪ್ಪತ್ತು ವರ್ಷಗಳ ಹಿಂದಿದ್ದ ನಂಬಿಕೆ ಮತ್ತು ಆಚರಣೆಯ ಆವರಣಗಳು ಇಂದು ಯಾವ ಮಾರ್ಪಾಡಿಗೆ ಒಳಗಾಗಿವೆ? ಆರ್ಥಿಕವಾಗಿ ಮತ್ತು ಪರಿಸರಾತ್ಮಕವಾಗಿ ಈ ನಂಬುಗೆ ಮತ್ತು ಆಚರಣೆಗಳು ಬೀರುತ್ತಿರುವ ವಿಕೃತ ಪರಿಣಾಮಗಳೇನು? ಈ ಪ್ರಶ್ನೆಗಳನ್ನು ಕರಾವಳಿಯ ಸಾಕಷ್ಟು ಜನ ಸಹಜವಾಗಿಯೇ ಕೇಳಿಕೊಳ್ಳುತ್ತಿದ್ದಾರೆ.

ನಾಗಾರಾಧನೆಯನ್ನು ಸಮರ್ಥಿಸುವ ವೇಳೆ ಅದನ್ನೊಂದು ವೈಜ್ಞಾನಿಕ ತಳಹದಿಯುಳ್ಳ, ನೈಸರ್ಗಿಕ ಸಮತೋಲನವನ್ನು ಕಾಪಾಡಿಕೊಳ್ಳುವ ಆಲೋಚನೆಯನ್ನೂ ಒಳಗೊಂಡ ನಿಸರ್ಗಾರಾಧನೆಯ ಮಾದರಿಯೆಂದೇ ಪರಿಭಾವಿಸಲಾಗುತ್ತದೆ. ಕುಡುಗೋಲ ಪ್ರವೇಶಕ್ಕೇ ಸ್ವಯಂನಿಷೇಧ ಹೇರಿಕೊಂಡು ದೇವರಕಾಡುಗಳ ಮೂಲಕ ನಮ್ಮ ಪ್ರಾಚೀನರು ಕಾಯ್ದಿಟ್ಟುಕೊಂಡು ಬಂದ ಅಂತರ್ಜಲದ ಮರುಪೂರಣದಕ್ರಮ ಮತ್ತು ಔಷದೀಯ ಗಿಡಮೂಲಿಕೆಗಳ ಉಳಿವು-ಅಳಿವು ಸಂಸ್ಕೃತಿಯ ಒಳಗಿನ ಸಂಗತಿಯೇ ಅಲ್ಲವೆ? ಶತಮಾನ ಹೋಗಲಿ ದಶಮಾನದ ಹಿಂದಿನವರೆಗೆ ಕಣ್ಣೆದುರೇ ಈ ನಂಬುಗೆಯ ಕಾರಣದಿಂದಾಗಿಯೇ ಉಳಿದುಕೊಂಡಿದ್ದ ನಿಸರ್ಗರಚನೆಗಳು ಹೀಗೆ ದಂದೆಕೋರರ ಕೈಗೆ ಸಿಕ್ಕಿ ನೆಲೆಕಳೆದುಕೊಳ್ಳುವಾಗ ಯಾಕೆ ನಂಬುಗೆಯ ವಕಾಲತ್ತಿನ ಮನಸ್ಸುಗಳು ಎಚ್ಚರಾಗಲೇ ಇಲ್ಲ (ಇನ್ನೂ ಎಚ್ಚರಾಗುತ್ತಲೇ ಇಲ್ಲ)? ಈಗ ಕಟ್ಟಲಾಗುತ್ತಿರುವ ನಾಗಗೋಪುರಗಳೆಂಬ ಇಸ್ಲಾಮಿಕ್ ಶೈಲಿಗೆ ಹತ್ತಿರವಿರುವ ಸಿಮೆಂಟ್ ನಿರ್ಮಿತ ವಾಸ್ತುರಚನೆಯಲ್ಲಿ ನಾಗ ಬಂದು ನೆಲೆಗೊಳ್ಳಲು ಸಾಧ್ಯವೇ? ಇದಕ್ಕೆಲ್ಲಾ ಬಳಕೆಯಾಗುತ್ತಿರುವ ಹಣದ ಮೂಲಕ್ಕೂ ಒಂದು ಪಾವಿತ್ರ್ಯ ಇರಬೇಕಲ್ಲವೆ? ಅಡ್ಡದಾರಿಯ ಸಂಪಾದನೆ ಮಾಡಿದ ಕಳ್ಳ-ಸುಳ್ಳರ ಜೊತೆಗೆ ನಿಷ್ಪಾಪಿ ಬಡವರೂ ಈ ಹೊಸ ರೂಪಾಂತರಕ್ಕೆ ತೆರಿಗೆ ಕಟ್ಟಿ ಸೋಲುತ್ತಿರುವುದನ್ನು ಈ ನಂಬುಗೆಯ ವಕೀಲರುಗಳು ಹೇಗೆ ಸಮರ್ಥಿಸುತ್ತಾರೆ? ನಾಗನ ಸಂಸ್ಕಾರಕ್ಕೆಂದು ವಂತಿಗೆ ಕೊಡಲಾಗದವರು ಊರೆಲ್ಲ ಜೋಳಿಗೆ ಹಿಡಿದು ಭಿಕ್ಷೆ ಬೇಡಿದ್ದನ್ನು ಕಂಡಿದ್ದೇನೆ. ಈ ಭಿಕ್ಷೆಯನ್ನು ದೇಣಿಗೆಯಾಗಿ ಕಸಿಯಲಾಗುವುದನ್ನು ನಂಬುಗೆ ಎಂದು ಹೇಗೆ ಸಮರ್ಥಿಸಲು ಸಾಧ್ಯ? ಹೇಗಾದರೂ ಮಾಡು ನನ್ನ ಸೇವೆಯನ್ನು ಬಾಕಿ ಇರಿಸಿಕೊಳ್ಳಬಾರದು ಎಂದು ಹುಕುಂ ಕೊಡುವ ನಾಗಪಾತ್ರಿಗಳ 'ನುಡಿ' ಅನೈತಿಕತೆಯನ್ನೂ ಉತ್ತೇಜಿಸುತ್ತದೆಯಲ್ಲವೆ? ಸಂಸ್ಕೃತಿ, ನಂಬುಗೆ, ಧರ್ಮ ಇವೆಲ್ಲಕ್ಕೂ ಕಾರ್ಯರೂಪದ ಅನುಷ್ಠಾನದಷ್ಟೇ ಪ್ರಾಮುಖ್ಯತೆ ಅವುಗಳ ನಿಷ್ಕಳಂಕ/ಪಾರದರ್ಶಕ ಮುಂದುವರಿಕೆಗೂ ಇದೆಯಲ್ಲವೆ?

ಬೀದಿಯಲ್ಲಿ ಬಿದ್ದ ಮನುಷ್ಯರ ಹೆಣವನ್ನು ನೋಡಿಯೂ ಮುಂಬರಿದರೆ ಸೋಂಕದ ಪಾಪ, ಸತ್ತ ಹಾವಿನ ಹೆಣಕ್ಕಷ್ಟೇ ಸೀಮಿತ ಮಾಡಿಕೊಂಡಿರುವುದರಿಂದ ಕರಾವಳಿಯ ಸಹಕಾರಿ ಬ್ಯಾಂಕುಗಳಲ್ಲಿಯ ಸಾಲದ ದಪ್ತರುಗಳು ಎಷ್ಟು ಪ್ರಮಾಣದಲ್ಲಿ ಬೆಳೆದಿವೆ ಎಂಬುದನ್ನು ಇವರುಗಳೇನಾದರೂ ಗಮನಿಸಿದ್ದಿದೆಯೇ? ಓದುಬಿಡಿಸಿದ ಮಕ್ಕಳನ್ನು ಹೋಟೆಲು, ಅಂಗಡಿಗಳಲ್ಲಿ ಒತ್ತೆಯಿಟ್ಟು ದುಡಿಸಿದ ತಾಯ್ತಂದೆಗಳ ಗೋಳಿನ ಚೀಲದಿಂದಲೂ, ಈ ನಾಗ ಮತ್ತು ಸತ್ತ ನಾಗಗಳನ್ನು ನೆವದ ಮೂಲಕ ಮಾಡುತ್ತಿರುವ ಲೂಟಿಯನ್ನು, ಹೇಗೆ ನಂಬಿಕೆಯಿಂದಷ್ಟೇ ಭಾವಿಸಿ ತಣ್ಣಗೆ ಸಮರ್ಥಿಸಿಕೊಳ್ಳಲು ಸಾಧ್ಯವಾಗುತ್ತದೆ? ದರ್ಶನದ ಸಾಮಾನ್ಯ ನಿಯಮದಂತೆ ದಿನವೊಂದಕ್ಕೆ ಒಂದು ದರ್ಶನ ಮುಗಿಸಿದ ಪಾತ್ರಿಯ ಮೇಲೆ ಮತ್ತೊಂದು ಆಕರ್ಷಣೆಯಾಗಬೇಕೆಂದರೆ ಮುಂದಿನ ದಿನಕ್ಕಾಗಿ ಕಾಯಬೇಕು. ಅದಕ್ಕಾಗಿ ಆತ ಮತ್ತೊಂದು ದಿನದ ವ್ರತಾಚರಣೆ ಮಾಡಬೇಕೆಂದು ದೇವರು ಬರಿಸಿಕೊಂಡು ಅದನ್ನು ನಂಬಿಕೊಂಡು ಬಂದ ಭೂತಾ ರಾಧನಾ ಪರಂಪರೆಯವರ ನಂಬಿಕೆ. ಆದರೆ ಜಗತ್ತನ್ನು 21 ಬಾರಿ ಸುತ್ತಿ ಬಂದವನೆಂದು ಹೇಳಲಾಗುವ ಆ ಕೊಡಲಿರಾಮನನ್ನು ನೆನಪಿಸುವಂತೆ, ಬೆಳಗಿನಿಂದ ಸಂಜೆಯ ತನಕ ದರ್ಶನ ಕ್ಕೊಂದರಂತೆ ತಲಾ 2-3 ಸಾವಿರವನ್ನು ಪೀಕುತ್ತಾ, ಉಟ್ಟ ಬಟ್ಟೆಯಲ್ಲಿಯೇ ಹತ್ತಾರು ದರ್ಶನಗಳನ್ನು ಮಾಡಬಲ್ಲ ನಾಗಪಾತ್ರಿಗಳು ಹಾಕುತ್ತಿರುವ ದುಡಿ ಮೆಯ್ಸೆಚ್ಚು ಈ ನಂಬುಗೆಯ ಕಾವಲು ಗಾರರಿಗೆ ಯಾಕೆ ದಂದೆ ಎಂದು ಅರ್ಥವಾಗುವುದಿಲ್ಲ? ಈ ನಡುವೆ ಭಾರತ ದಾದ್ಯಂತ ದೇಶ ಮತ್ತು ಸಂಸ್ಕೃತಿ ಯನ್ನು ಅತಿಯಾಗಿ ಪ್ರೀತಿಸು ವವರ ಬಾಯಲ್ಲಿ ಈಗ ಕಪ್ಪು ಹಣ-ಭ್ರಷ್ಟಾಚಾರದ್ದೇ ಸುದ್ದಿ. ಈ ಧಾರ್ಮಿಕತೆ ಹೆಸರಿನ ಲೂಟಿ ಆ ಭ್ರಷ್ಟಚಾರದ ಚಿಂತನೆ ಯೊಳಗೆ ಬರುವುದಿಲ್ಲವೇ? ನಾಗಪಾತ್ರಿಯಾದವನ ಆದಾಯ ಮತ್ತು ಮಾಮೂಲಿ ದೈವದ ಪಾತ್ರಿಗಳ ಆದಾಯದಲ್ಲಿರುವ ಅಂತರವನ್ನೇನಾದರೂ ಇವರು ಗಮನಿಸಿದ್ದಾರೆಯೇ? 20-30 ವರ್ಷಗಳ ಹಿಂದೆ ನಾಗಪಾತ್ರಿಗಳಾದವರು ಹೀಗೆಯೇ ಸಿರಿವಂತರಾಗಿದ್ದರೇ?


www.mobshare.in

...ರು ಬರುತ್ತಿದ್ದರು, ತನು ಹಾಕಿದ ಬಾಳೆಗೊನೆಯ ...ನ್ನು, ತಂಪು ಕಾಕಿದ ಅಚ್ಚೇರು ಅಕ್ಕಿಯನ್ನು ...ಲಿ ಎಂಬಂತೆ ಒಯ್ಯುತ್ತಿದ್ದರು. ಆದರೆ ದಲಿತರು ...ಂಡು ಬರುತ್ತಿರುವ ನಾಗಾರಾಧನೆಯ ಮಾದರಿ ...ನಾಗನಿಗೆ ತಂಬಿಲ ಇಡುವ ಮತ್ತು ಆರಾಧಿಸುವ ...ನ್ನು ಇಂದಿಗೂ ಅನೇಕ ಕಡೆ ದಲಿತರೇ ನಡೆಸಿ ...ೀಗುತ್ತಿದ್ದಾರೆ. ...ಂದರಂತೆ ಸಿಗುವ ಈ ನಾಗಬನಗಳಿಗೆಲ್ಲಾ ಅದು ...ಬ್ರಹ್ಮಣ್ಯವನ್ನು ಮೂಲಬನವಾಗಿ ಎಂದಿ ...ನೋ ನಂಬಿಕೊಂಡು ಬರಲಾಗಿದೆ. ಹಾಗಾಗಿ ...ಲಿ ಸ್ಥಳವೆಂತಲೇ ನಂಬಿಕೊಂಡು ಕರೆಯಲಾಗು ... ನಾಗನ ಕಲ್ಲಿನ ಬುಡವನ್ನೂ ಮೂಲ ಎಂತಲೇ ...ರಿಂದ ಇದು ಭೂಸೂಚಕವಾದ ಪದವೂ ... ದರ್ಶನಗಳು ನಡೆದಾಗ ಮೂಲಿ ಪ್ರಸಾದ ...ಷ್ಟೇ ಕೊಡಲಾಗುತ್ತದೆ. ಈ ದರ್ಶನಗಳು ಹಲವು ...ರೋಹಿತ ವರ್ಗಕ್ಕೆ ಸೇರಿದವರ ಮೂಲಕವೇ ...ತ್ತಿದೆ. ಅಷ್ಟುವಾಗಿ ಏನಾದರೂ ಹಣ್ಣು-ಹಾಲಿನ ...ೀಡೆ ಬಿಟ್ಟರೆ ವಿರಳವಾಗಿ ನಾಗದರ್ಶನವೋ, ...ಗಿ ನಾಗಮಂಡಲವೋ ನಡೆಯುತ್ತಿದ್ದುದನ್ನು ...ಸ್ಬಹುದು. ಅದೇ ಸಂದರ್ಭದಲ್ಲಿ ಗದ್ದೆ ಬಯಲು ...ರೂ ಸತ್ತು ಬಿದ್ದ ಸರ್ಪ ಸಿಕ್ಕರೆ ಅವರ ಪಾಲಿ ...ಬ (ಭಿಧಿ) ಸಿಕ್ಕಿತೆಯೋ ಎಂದು ಭಯ ಬೀಳು ...ದಿದ್ದೇನೆ. ಯಾಕೆಂದರೆ ಈ ಹಾವುಗಳು ಹೇಗೇ ...ಳ ಬೊಜ್ಜ (ಸಂಸ್ಕಾರ) ಮಾಡಬೇಕಾದ ಹೊಣೆ ... ಮೇಲೆ ಬರುವಂತಹ ಭಯ ಅಂದೂ ಇದ್ದು ...ಕಂಡಿದ್ದೇನೆ. ಸತ್ತು ಕೊಳೆತು ಹೋದ

ಮೂಲಕ ನಾಗನನ್ನು ನಂಬಿದ ನಿರ್ಗತಿಕರು ನಿಜವಾಗಿಯೂ ಸಂಕಟೋತ್ಪಾದಕರ ನುಡಿಯೆಂಜಲಿನಲ್ಲಿ ಹೊರಳಾಡುತ್ತಾ ಬದುಕಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವ್ಯಕ್ತಿ ಗೌರವವನ್ನು ಮರೆತು ಎಂಜಲಲ್ಲಿ ಹೊರಳಿದಷ್ಟೇ ಕನಿಷ್ಠವಾಗಿ ತಮ್ಮ ಮಕ್ಕಳನ್ನು ಒತ್ತೆಯಿಟ್ಟು ಪಡೆದ ಹಣವನ್ನು ದೈನೇಸಿಯಾಗಿ ಈ ಲೂಟಕೋರರ ಕೈಗಿತ್ತು, ಮತ್ತವರದೇ ಕಾಲಿಗೆ ಬೀಳಬೇಕಾದ ಸ್ಥಿತಿ ನಿಜಕ್ಕೂ ಮಡೆಸ್ನಾನಕ್ಕಿಂತಲೂ ದಯನೀಯವಾದುದು.

ನಾಗಾರಾಧನೆಯ ಸಂಪ್ರದಾಯ ಮೂಲತಃ ಅವೈದಿಕನೆಲೆಯದಾಗಿದ್ದು ಪ್ರಾಚೀನವಾಗಿ ಅಲ್ಲಿ ಆರಾಧನೆಯ ಮುಖ್ಯ ಸಂಗತಿಯಾಗಿ ಬಳಕೆಯಾಗುತ್ತಿದ್ದುದು ಮಣ್ಣಿನ ಕಳಶಗಳು. ಕತ್ತಿ ಹಾಕುವುದಕ್ಕೇ ನಮ್ಮ ಪೂರ್ವಿಕರು ಹಾಕಿಕೊಂಡಿದ್ದ ಸ್ವಯಂ ನಿಷೇಧದಿಂದಾಗಿ ಸಂದಣಿಸಿಕೊಂಡಿದ್ದ ಬನದೊಳಗೆ ನಿರಾಯಾಸವಾಗಿ ಹೋಮಹವನಾದಿ ಅಗ್ನಿಕುಂಡದ ಜ್ವಾಲೆ ಬೆಳಗುತ್ತಿದೆ. ಜಲಪರಂಪರೆಗೆ ಸೇರಿದ ಈ ನಾಗಪರಂಪರೆ ಸಂಪೂರ್ಣವಾಗಿ ಅಗ್ನಿಪರಂಪರೆಯವರ ಹಿಡಿತಕ್ಕೆ ಸಂದು ಹೋಗಿದೆ. ನೀರಪೂರಣದ, ಸಸ್ಯಾವಳಿಯ ನಿಸರ್ಗದ ಈ ಪಾರಂಪರಿಕ ರಕ್ಷಿತ ತಾಣಗಳು ಜೆಸಿಬಿ ಯಂತ್ರಗಳ ದೈತ್ಯಾಕ್ರಮಣಕ್ಕೆ ಸಿಕ್ಕಿ ಬೋಳಾದ ಜಾಗಗಳಾಗಿ ಕಾಂಕ್ರೀಟಿನ ನವನಿರ್ಮಾಣಕ್ಕೆ ಹಾದಿ ಮಾಡಿಕೊಡುತ್ತಿವೆ. ಜೊತೆಗೆ ನಾಗನ ಹೆಸರಿನಲ್ಲಿ ಏನೇ ಕೆಲಸ ಇದ್ದರೂ ಅಲ್ಲೊಂದು ಅನ್ನ ಸಂತರ್ಪಣೆ ಆಗಲೇಬೇಕಾದ ಸ್ಥಿತಿ ನಿರ್ಮಾಣಗೊಳ್ಳುತ್ತಿದೆ. ಅನ್ನ ಸಂತರ್ಪಣೆ ಮಾಡಿ 'ಹಸಿವಿರದವರ ಹಸಿವನ್ನು ತಣಿಸಿ' ಅವರ ಕಾಲಿಗೇ ಬೀಳಬೇಕಾದ ದುಸ್ತರ ಸ್ಥಿತಿಯಿದೆ. ಯಾಕೆಂದರೆ ನಾಗಪಾತ್ರಿಯ ಬಾಯಿಂದ ಬಂದೇ ಬರುವುದು ಬ್ರಹ್ಮ ಕುಟುಂಬವನ್ನು ತೃಪ್ತಿಪಡಿಸಬೇಕು ಎಂಬ ಆಜ್ಞೆ, ಪುರೋಹಿತ,

ನಂಬುಗೆಯ ಹೆಸರಿನಲ್ಲಿ ಮರೆಮಾಚಿ ನಡೆಸುತ್ತಿರುವ ಲೂಟಿಗೂ, ಹಳೆಯದು ಹಾಗೆಯೇ ಉಳಿಯಬೇಕೆಂದು ಮಡೆಸ್ನಾನದಂತಹ ಆಯ್ದ ಕೆಲವನ್ನು ಉಳಿಸಿಕೊಳ್ಳಬೇಕೆಂದು ಒದ್ದಾಡುವುದು ಎರಡೂ ಪರಸ್ಪರ ಪೂರಕವಾದ ಕಸರತ್ತುಗಳಲ್ಲವೆ? ಉಂಡ ಎಂಜಲಲ್ಲಿ ದೇಹವನ್ನೂ, ಹುಟ್ಟುಗತಿಯ ಹೆಸರಿನ ನುಡಿಯೆಂಜಲಿನಲ್ಲಿ ಆರ್ಥಿಕವಾದ ಉರುಳಾಟವನ್ನೂ ಉತ್ಪಾದನೆ ಮಾಡಿಕೊಂಡು ಬರುವುದು ಬೇರೆ ಬೇರೆಯಾದವುಗಳಲ್ಲ, ಆ ಕಾರಣಕ್ಕಾಗಿಯೇ ನಂಬುಗೆಗಳು ಪ್ರಶ್ನಿಸಲ್ಪಟ್ಟರೆ ಸಂಸ್ಕೃತಿಯೆಂಬ ಹೆಸರಿನ ಆಕರ್ಷಕ ಬಟ್ಟೆಯಲ್ಲಿ ಅವಿತಿರಿಸಿಕೊಂಡ ನಿಮ್ಮ ಆಯುಧಗಳು ಮತ್ತು ಈಗ ನಿರಾತಂಕವಾಗಿ ನಡೆಸಲಾಗುತ್ತಿರುವ ತಳವರ್ಗದ ಮೇಲಿನ ದಾಳಿಯ ಯೋಜನೆಗಳು ನಗ್ನವಾಗಿ ಎಲ್ಲರಿಗೂ ಕಾಣಿಸಬಹುದೆಂಬ ಭಯ ನಿಮ್ಮೊಳಗೆ ಇರಬಹುದಲ್ಲವೆ? ನಂಬುಗೆ ಮತ್ತು ಸಂಸ್ಕೃತಿಯ ಬಗೆಗೆ ಮಾತನಾಡುವವರಿಗೆ ಇಂತಹ ಪ್ರಶ್ನೆಗಳನ್ನು ಎದುರಾಗಿ ಉತ್ತರಿಸಿಕೊಳ್ಳುವ ಅಥವಾ ಹಾಗೆ ಆಗುತ್ತಿರುವ ನಂಬುಗೆಯ ಹೆಸರಿನ ಅನಾಚಾರವನ್ನು ತಡೆಯುವ ಹೊಣೆಗಾರಿಕೆಯೂ ಇರಬೇಕಲ್ಲವೆ? ಶತಮಾನದ ನಂಬಿಕೆಯನ್ನು ಗೌರವಿಸಬೇಕೆನ್ನುವವರು ಹತ್ತಾರು ವರ್ಷಗಳ ಹಿಂದಿನ ಕನಿಷ್ಠ ಆರೋಗ್ಯಕರ ಸ್ಥಿತಿಯಾದರೂ ಉಳಿಯಬೇಕೆಂದು ಆಗ್ರಹಿಸಿಕೊಂಡು ಬರಬೇಕಾದುದು ಕರ್ತವ್ಯವಲ್ಲವೇ?



ಸ್ನೆಫಿಯೊಂದಿಗೆ ತೋಟದಲ್ಲಿ ಲಂಕೇಶ್

ಕಾರ್, ನಾಯಿ, ತೋಟದ ಸುತ್ತ

ಲಂಕೇಶರು ಪತ್ರಿಕೆ ಪ್ರಾರಂಭಿಸಿದ ನಂತರ ಒಂದು ಹಸಿರು ಬಣ್ಣದ ಅಂಬಾಸಿಡರ್ ಕಾರನ್ನು ಕೊಂಡಿದ್ದರು. ಅದನ್ನು ಅವರು ಯದ್ವಾತದ್ವಾ ಓಡಿಸುತ್ತಿದ್ದರಿಂದ, ಒಂದೆರಡು ಬಾರಿ ಆಕ್ಸಿಡೆಂಟ್‌ಗಳೂ ಆಗಿದ್ದರಿಂದ ಆ ಕಾರ್ ಬೇಗನೆ ಕೈಕೊಡಲಾರಂಭಿಸಿತು. ಆಗ ಲಂಕೇಶರು ಅದನ್ನು ಮಾರಿ ಒಂದು ಕೆಂಪು ಬಣ್ಣದ ಡಾಲ್ಫಿನ್ ಕಾರನ್ನು ಖರೀದಿಸಿದರು. ಒಂದು ವರ್ಷ ಆ ಕಾರನ್ನು ಓಡಿಸಿದ ನಂತರ ಅದನ್ನು ನನಗೆ ಕೊಟ್ಟು ತಮಗೆ ಒಂದು ಮಾರುತಿ 800 ಕಾರನ್ನು ಖರೀದಿಸಿದರು. ಮಾರುತಿ ಕಾರ್‌ನಲ್ಲಿ ನನ್ನ ಅಂಗಡಿಗೆ ಬಂದು ನನ್ನನ್ನು ಒಂದು ರೌಂಡ್ ಕರೆದುಕೊಂಡು ಹೋದರು.

ಆನಂತರ ಅವರು ಮಾರುತಿ ಎಸ್ಟೀಮ್ ಕಾರ್ ಖರೀದಿಸಿದರು. ಅದಕ್ಕೆ ಆಟೋಮ್ಯಾಟಿಕ್‌ಆಗಿ ತೆರೆದುಕೊಳ್ಳುವ ಮುಚ್ಚಿಕೊಳ್ಳುವ ಕಿಟಕಿ ವ್ಯವಸ್ಥೆ ಇತ್ತು. "ಏ ಇಂದಿರಾ ಬಾ ಇಲ್ಲಿ ನೋಡು" ಎಂದು ನನ್ನನ್ನು ಕರೆದ ಲಂಕೇಶರು "ಖುಲ್ ಜಾ ಸಿಂ ಸಿಂ" ಎನ್ನುತ್ತಾ ಪುಟ್ಟ ಹುಡುಗನಂತೆ ನಗುತ್ತಾ ಕಿಟಕಿಯನ್ನು ಹಲವು ಬಾರಿ ತೆಗೆದು ಮುಚ್ಚಿದರು. ಕೆಲವು ವಿಷಯಗಳಲ್ಲಿ ಲಂಕೇಶರು ಕೊನೆಯವರೆಗೂ ಚಿಕ್ಕಮಗುವಿನಂತೆ ಇದ್ದರು.

****

ಲಂಕೇಶರಿಗೆ ಮೊದಲು ನಾಯಿಗಳನ್ನು ಕಂಡರೆ ಆಗುತ್ತಿರಲಿಲ್ಲ. ಆದರೆ ಬೇಬಿ ಒಮ್ಮೆ ಮೂಡಿಗೆರೆಗೆ ಹೋಗಿದ್ದಾಗ ತೇಜಸ್ವಿ ಅವರ ಮನೆಯಿಂದ ಒಂದು ಕಾಕ್ಕರ್ ಸ್ಪೇನಿಯಲ್ ನಾಯಿಮರಿಯನ್ನು ತೆಗೆದುಕೊಂಡು ಬಂದಳು. ಅವಳಿಗೆ ಮೊದಲಿನಿಂದಲೂ ಪ್ರಾಣಿಗಳನ್ನು ಕಂಡರೆ ತುಂಬಾ ಪ್ರೀತಿ. ನಮ್ಮ ಬಸವನಗುಡಿ ಮನೆಯಲ್ಲಿನ ಆಸ್ಬೆಸ್ಟಾಸ್ ತಾರಸಿಯಲ್ಲಿ ಗುಬ್ಬಚ್ಚಿಗಳು ಗೂಡು ಕಟ್ಟಿಕೊಳ್ಳುತ್ತಿದ್ದವು. ಹಲವೊಮ್ಮೆ ಆ ಗೂಡುಗಳಿಂದ ಗುಬ್ಬಚ್ಚಿ ಮರಿಗಳು ನೆಲಕ್ಕೆ ಬೀಳುತ್ತಿದ್ದವು. ಆಗ ಬೇಬಿ ಆ ಮರಿಗಳಿಗೆ ಚಿಕಿತ್ಸೆ ಕೊಟ್ಟು ಅವುಗಳ ಜೀವ ಉಳಿಸಲು ಪ್ರಯತ್ನಿಸುತ್ತಿದ್ದಳು. ಆಕೆ ಚಿಕ್ಕವಳಾಗಿದ್ದಾಗ ಒಮ್ಮೆ ರಸ್ತೆಯಲ್ಲಿ ಸಿಕ್ಕ ಬೆಕ್ಕಿನ ಮರಿಯನ್ನು ತಂದಿದ್ದಳು. ಆದರೆ ಬೆಕ್ಕು ಸಾಕುವುದು ಬೇಡ ಎಂದಾಗ ಆಕೆ ಕಣ್ಣೀರಿಡುತ್ತಲೇ ಅದನ್ನು ಹೊರಗೆ ಬಿಟ್ಟು ಬಂದಿದ್ದಳು.



ಪಿಕಿಯನ್ನು ಹಿಡಿದಿರುವ ಕವಿತಾ

ಬೇಬಿ ತಂದಿದ್ದ ನಾಯಿಮರಿಗೆ ಪಿಕಿ (ಖ್ಯಾತ ಕಲಾವಿದ ಪಿಕಾಸೋನ ಹೆಸರಿನ ತುಂಡು ಭಾಗ) ಎಂದು ಲಂಕೇಶರೇ ಹೆಸರಿಟ್ಟಿದ್ದರು. ಆಗ ಅವರು ಪ್ರೆಸ್‌ಕ್ಲಬ್‌ಗೆ ಪ್ರತಿದಿನ ಹೋಗುತ್ತಿದ್ದರಿಂದ ಅಲ್ಲಿ ತಿಂದ ಚಿಕನ್ನಿನ ಮೂಳೆಗಳನ್ನು ಪಿಕಿಗೆಂದೇ ಕಟ್ಟಿಸಿಕೊಂಡು ಬರುತ್ತಿದ್ದರು.


ಪಿಕಿಯಿಂದಾಗಿಯೇ ಲಂಕೇಶರು ನಾಯಿಗಳನ್ನು ಇಷ್ಟಪಡಲು ಶುರುಮಾಡಿದರು. ಆದಾದನಂತರ ಅವರು ರಾಜ, ಸ್ನೆಫಿ ಮತ್ತು ಚೆನ್ನಿಯಂತಹ ನಾಯಿಗಳನ್ನು ಸಾಕಿದ್ದು ಅವುಗಳ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಬರೆದದ್ದು ಎಲ್ಲರಿಗೂ ಗೊತ್ತು. ರಾಜ ಮತ್ತು ಸ್ನೆಫಿ ಲಂಕೇಶರು ತಮ್ಮ ತೋಟದಲ್ಲಿ ಸಾಕಿದ್ದ ನಾಯಿಗಳಾದರೆ ಚೆನ್ನಿ ಅವರು ಮನೆಯಲ್ಲಿ ಸಾಕಿದ್ದ ನಾಯಿ ಆಗಿತ್ತು. ಆ ಚೆನ್ನಿ ಬಗ್ಗೆ ಲಂಕೇಶರಿಗೆ ಅದೆಷ್ಟು ಪ್ರೀತಿಯೆಂದರೆ, ಅವರು ಮನೆಯಲ್ಲಿದ್ದಾಗ ಆ ನಾಯಿ ಅವರೊಂದಿಗೇ ಇರುತ್ತಿತ್ತು. ಒಮ್ಮೆ ನಮ್ಮ ಊರಿನಿಂದ ನೆಂಟರು ಬಂದಿದ್ದಾಗ ಲಂಕೇಶರು ತಮ್ಮ ರೂಮಿನಲ್ಲಿ "ಏ ಚೆನ್ನಿ, ಬಾರೆ ಇಲ್ಲಿ ಬಾರೇ, ಯಾಕೆ ದೂರ ಇದ್ದೀಯ" ಅಂತ ಹೇಳುತ್ತಿದ್ದದ್ದನ್ನು ಕೇಳಿಸಿಕೊಂಡು "ಅವರು ಯಾರ ಜೊತೆ ಮಾತಾಡುತ್ತಿದ್ದಾರೆ?" ಎಂದು ನೆಂಟರು ಆಚ್ಚರಿಗೊಂಡಿದ್ದರು.

ಚೆನ್ನಿ ಕೂಡ ಲಂಕೇಶರನ್ನು ಎಷ್ಟು ಪ್ರೀತಿಸುತ್ತಿತ್ತೆಂದರೆ ಅವರ ಕಾರ್ ಇನ್ನೂ ದೂರದಲ್ಲಿರುವಾಗಲೇ ಅದರ ಸದ್ದನ್ನು ಗುರುತಿಸಿ "ಕುಂಯ್ ಕುಂಯ್" ಅಂತ ಬೊಗಳಲು ಶುರು ಮಾಡುತ್ತಿತ್ತು.

****

ಲಂಕೇಶರ ಅಣ್ಣ ಶಿವರುದ್ರಪ್ಪನವರು ಸುಮಾರು ಸಾಲ ಮಾಡಿಕೊಂಡಿದ್ದರು. ಲಂಕೇಶರೇ ಅದನ್ನು ತೀರಿಸಿದರು ಮತ್ತು ಅಣ್ಣ ಶಿವರುದ್ರಪ್ಪ ಹಾಗು ಇಬ್ಬರು ಅಕ್ಕಂದಿರಿಗೆ ಪ್ರತಿ ತಿಂಗಳೂ ಹಣ ಕಳುಹಿಸಲು ಪ್ರಾರಂಭಿಸಿದರು. ಅದರ ಬಗ್ಗೆ ನಾನು ಒಮ್ಮೆ "ಹೀಗೆ ಪ್ರತಿ ತಿಂಗಳು ಅವರಿಗೆಲ್ಲ ಹಣ ಕಳಿಸಿದರೆ ಅವರು ಸೋಮಾರಿಗಳಾಗುತ್ತಾರೆ. ಅದರ ಬದಲು ಒಮ್ಮೆಗೆ ಅವರಿಗೆ 10 ಹಸು ಕೊಡಿಸಿ. ಅದರಿಂದ ಅವರು ದುಡಿದುಕೊಂಡು ಬದುಕಲಿ" ಎಂದೆ. ಅದಕ್ಕೆ ಲಂಕೇಶರು "ಸುಮ್ಮನಿರು. ನಿನಗೆ ಗೊತ್ತಿಲ್ಲ ಅವರು ಎಂತಹ ಜನ ಅಂತ. ಅವರು ನಾನು ಕೊಡಿಸಿದ ಹಸುಗಳನ್ನು ಮಾರಿಕೊಂಡು ಮತ್ತೆ ಹಣ ಕೇಳುವುದಕ್ಕೆ ಬರುತ್ತಾರೆ" ಎಂದರು. ನನಗೂ ಅವರು ಹಾಗೆ ಮಾಡುವ ಜನವೇ ಎಂದು ಅನ್ನಿಸಿ ಸುಮ್ಮನಾದೆ. ಲಂಕೇಶರು ಬದುಕಿದ್ದಷ್ಟೂ ದಿನ ಪ್ರತಿ ತಿಂಗಳು ತಮ್ಮ ಊರಿಗೆ ಹಣ ಕಳುಹಿಸುತ್ತಲೇ ಇದ್ದರು.

ಲಂಕೇಶರಿಗೆ ಒಂದು ತೋಟ ಮಾಡಬೇಕೆನ್ನಿಸಿ ಜಮೀನಿಗೆ ಹುಡುಕಾಟ ನಡೆಸಿದರು. ಬನ್ನೇರುಘಟ್ಟ ರಸ್ತೆಯಲ್ಲಿ ಬರುವ ಪಿಳಗಾನಹಳ್ಳಿಯ ಹತ್ತಿರ ಒಂದು ಮಾವಿನತೋಟ ನೋಡಿದರು. ಅದರ ಮಾಲೀಕರು ಹನ್ನೊಂದು ಎಕರೆಗಳನ್ನು ಮಾರಲು ಸಿದ್ಧರಿದ್ದರು. ಲಂಕೇಶರೊಂದಿಗೆ ನಾನೂ ಆ ತೋಟವನ್ನು ನೋಡಲು ಹೋಗಿದ್ದೆ. ಅದು ತುಂಬಾ ಹಳೆಯ ಮಾವಿನ ತೋಟ. ತೋಟವನ್ನು ಸರಿಯಾಗಿ ನೋಡಿಕೊಳ್ಳುವವರು ಇಲ್ಲದೇ ಸ್ವಲ್ಪ ಹಾಳಾಗಿತ್ತು.



ಆಗ ಒಂದು ಸಮಸ್ಯೆ ಎದುರಾಯಿತು. ಅದೇನೆಂದರೆ ಲಂಕೇಶರು ಆ ತೋಟವನ್ನು ತಮ್ಮ ಹೆಸರಿನಲ್ಲಿ ಖರೀದಿಸುವಂತಿರಲಿಲ್ಲ, ಯಾಕೆಂದರೆ ಕಾನೂನಿನ ಪ್ರಕಾರ ವ್ಯವಸಾಯ ಮಾಡುತ್ತಿರುವವರು ಮತ್ತು ಪಹಣಿ ಹೊಂದಿದ್ದವರು ಮಾತ್ರ ಕೃಷಿ ಭೂಮಿಯನ್ನು ಖರೀದಿಸಬಹುದಿತ್ತು. ಆದರೆ ಲಂಕೇಶರು ತಮ್ಮ ಪಿತ್ರಾರ್ಜಿತ ಹೊಲವನ್ನು ತಮ್ಮ ಸಹೋದರನಿಗೆ ಬಿಟ್ಟುಕೊಟ್ಟಿದ್ದರಿಂದ ಅವರ ಹೆಸರಿನಲ್ಲಿ ಪಹಣಿ ಇರಲಿಲ್ಲ.

ನನ್ನ ಹೆಸರಿನಲ್ಲಿ ಸ್ವಲ್ಪ ಭೂಮಿ ಇತ್ತು. ಅದು ಹೇಗೆಂದರೆ ಭೂಮಿತಿ ಕಾಯ್ದೆ ಜಾರಿಗೆ ಬಂದಾಗ ನನ್ನ ಸೋದರ ಮಾವಂದಿರು ತಮ್ಮ ಪಿತ್ರಾರ್ಜಿತ ಭೂಮಿಯನ್ನು ಸಂಸಾರದಲ್ಲೇ ಉಳಿಸಿಕೊಳ್ಳಲು ಒಂದಿಷ್ಟು ಭೂಮಿಯನ್ನು ನನ್ನಂತಹ ವಿವಿಧ ಸಂಬಂಧಿಕರ ಹೆಸರಿಗೆ ದಾಖಲಿಸಿದ್ದರು. ಆ ಭೂಮಿಯಿಂದ ನಾನೆಂದೂ ಒಂದೇ ಒಂದು ನಯಾ ಪೈಸೆಯನ್ನು ಪಡೆಯದಿದ್ದರೂ, ಅದರ ಪಹಣಿ ನನ್ನ ಹೆಸರಿನಲ್ಲಿ ಇದ್ದದ್ದು ಈಗ ನಮ್ಮ ನೆರವಿಗೆ ಬಂತು. ಲಂಕೇಶರು ಆ ಮಾವಿನ ತೋಟವನ್ನು ನನ್ನ ಹೆಸರಿನಲ್ಲಿ ಖರೀದಿಸಿದರು.

ತೋಟವನ್ನು ನೋಡಿಕೊಳ್ಳಲು ಕೆಲಸಗಾರರನ್ನು ನೇಮಿಸಿದರು. ಪತ್ರಿಕೆಯ ಕೆಲಸದಿಂದ ಬಿಡುವು ಸಿಕ್ಕಾಗಲೆಲ್ಲ ಕಾರನ್ನೇರಿ ತೋಟ ನೋಡಲು ಹೋಗುತ್ತಿದ್ದರು. ಎರಡು ಬೋರ್‌ವೆಲ್ ತೋಡಿಸಿದರು. ಒಂದು ಬಾವಿಯಲ್ಲಿ ಸಮೃದ್ಧವಾಗಿ ನೀರು ಸಿಕ್ಕಿತು. ಇನ್ನೊಂದು ವಿಫಲಗೊಂಡಿತು. ಸೊರಗಿದ್ದ ಮರಗಳಿಗೆ ಸಾಕಷ್ಟು ಗೊಬ್ಬರ ಹಾಕಿ, ಔಷಧಿ ಹೊಡೆಸಿ, ಎಲ್ಲಾ ಮರಗಳಿಗೆ ಡ್ರಿಪ್ ನೀರಾವರಿ ವ್ಯವಸ್ಥೆ ಮಾಡಿಸಿದರು. ನೀರಿನ ಟ್ಯಾಂಕ್ ಕಟ್ಟಿ ಅದರಿಂದ ನೀರು ಹಾಯಿಸಲು ಪಂಪ್ ಹಾಕಿ ಅನುವು ಮಾಡಿದರು.

ಲಂಕೇಶರ ಆರೈಕೆಯಿಂದ ಒಂದೇ ವರ್ಷದಲ್ಲಿ ತೋಟದ ಎಲ್ಲಾ ಮಾವಿನ ಮರಗಳು ಹಸಿರಾಗಿ ನಳನಳಿಸಲಾರಂಭಿಸಿದವು. ಲಂಕೇಶರಿಗೆ ಆ ತೋಟ ಎಷ್ಟು ಪ್ರಿಯವಾಗಿತ್ತು ... ಯಾವುದೇ ಕೆಲಸಕ್ಕೆ 100 ರೂಪಾಯಿ ಖರ್ಚು ... ಜಾಗದಲ್ಲಿ 500 ರೂ. ಖರ್ಚು ಮಾಡುತ್ತಿದ್ದರು. ಅದ... ಕೆಲಸಗಾರರಂತೂ ಬಹಳ ಖುಷಿಯಾಗಿದ್ದರು.

ತೋಟ ನೋಡಿಕೊಳ್ಳುವುದು ಅಷ್ಟು ಸುಲಭ... 'ಬೇಸಾಯ ಎಂದರೆ ಮನೆಮಂದಿಯೆಲ್ಲಾ ಸಾಯ' ಎನ್ನು... ತಿಳಿದವರು. ಆದರೂ ಲಂಕೇಶರಿಗೆ ತೋಟದಲ್ಲಿ ಏನೇ... ಮಾಡಬೇಕು ಎನ್ನುವ ಚಪಲ. ಹಸು ಕಟ್ಟಬೇಕು, ... ಮಾರಬೇಕು ಎಂದೆಲ್ಲ ಯೋಜನೆಗಳನ್ನು ಹಾಕಿಕೊ... ವಿವಿಧ ಸಾಹಸಗಳಿಗೆ ಕೈ ಹಾಕುತ್ತಿದ್ದರು. ಗಂಧದ ಗಿಡ, ... ಬಿದಿರು, ಪನ್ನೀರುಹಣ್ಣು, ಸೀತಾಫಲ, ಹಲಸಿನಮರ, ... ಎಲ್ಲಾ ಹಾಕಿಸಿದರು. ಜೇನನ್ನೂ ಸಾಕಲು ನೋಡಿದರು.

ಒಮ್ಮೆ ತೋಟದಲ್ಲಿ ಹೂವು ಬೆಳೆಯಬೇಕು ... ತಮ್ಮ ಊರಿನಿಂದ ಜನರನ್ನು ಕರೆದುಕೊಂಡು ಬಂದ... ಆದರೆ ಅವರ ಸಂಬಂಧಿಕರೇ ಲಂಕೇಶರ ಧಾರಾಳತನ... ತಮ್ಮ ಉದ್ಧಾರಕ್ಕೆ ಬಳಸಿಕೊಂಡು ಲಂಕೇಶರಿಗೆ ... ಮಾಡಿದರು.

ಲಂಕೇಶರಿಗೆ ಹಣ್ಣುಗಳೆಂದರೆ ತುಂಬಾ ಇಷ್ಟ. ಯಾವುದೇ ಹಣ್ಣಾಗಲಿ ಅವರು ಹೊಟ್ಟೆ ತುಂಬುವವರೆ... ತಿನ್ನುತ್ತಿದ್ದರು. ಅದರಲ್ಲೂ ಮಾವಿನ ಹಣ್ಣು ಎಂದರೆ ಅವರಿಗೆ ಪಂಚಪ್ರಾಣ. ಮಾವಿನ ಸೀಜನ್ನು ಮುಗಿಯುವವರೆಗೆ ಅದನ್ನು ತಿನ್ನುತ್ತಿರಬೇಕು. ಬೆಳಗ್ಗೆಯೇ ಅವರು ಹಣ್ಣು ತಿನ್ನುತ್ತಿದ್ದರು. ಮಕ್ಕಳಿಗೂ ... ತಿನ್ನಲು ಹೇಳುತ್ತಿದ್ದರು. ಆದರೆ ಮಕ್ಕಳು "ಬೆಳಬೆಳ... ಯಾರು ಹಣ್ಣು ತಿನ್ನುತ್ತಾರೆ?" ಎಂದರೆ "ನಾನು ಚಿಕ್ಕವನಾಗಿದ್ದಾಗ ಬುಟ್ಟಿಗಟ್ಟಲೆ ಮಾವಿನ ಹಣ್ಣು ತಿನ್ನುತ್ತಿದ್ದೆ ಗೊತ್ತಾ?" ಎನ್ನುತ್ತಿದ್ದರು. ತೋಟದಲ್ಲಿ ಬೆಳೆದ ಹಣ್ಣುಗಳನ್ನು ಸಂತೋಷದಿಂ... ತಮ್ಮ ಎಲ್ಲ ಸ್ನೇಹಿತರ ಮನೆಗಳಿಗೆ ಕಳುಹಿಸುತ್ತಿದ್ದರು.

ತೋಟದಲ್ಲಿ ಒಂದು ಸುಂದರವಾ... ಮನೆ ಕಟ್ಟಿದರು. ಅದರ ವಿನ್ಯಾಸವನ್ನು ಮಾಡಿದ್ದು ಕಲಾವಿದ ಕೆ.ಟಿ.ಶಿವಪ್ರಸಾ... ಕಲ್ಲಿನ ಕಟ್ಟಡವಾಗಿದ್ದ ಆ ಮನೆಯ ... ದೊಡ್ಡ ಜಗಳಿ ಇತ್ತು. ದೊಡ್ಡ ಹಾಲ್ ರೂಮ್, ಎರಡು ಬೆಡ್‌ರೂಮ್, ಅಡುಗೆ ಮನೆ, ಡೈನಿಂಗ್ ರೂಮ್...... ಎಲ್ಲವೂ ... ಮನೆಯಲ್ಲಿತ್ತು. ಅದು ಎಷ್ಟು ವಿಸ್ತಾರವಾಗಿದ್ದ ಮನೆ ಎಂದರೆ ಆ ಮನೆಯ ತಾರಸಿಯ ಮೇಲೆ ಲಂಕೇಶರು ಪ್ರತಿವರ್ಷ ತಮ್ಮ ಹುಟ್ಟುಹಬ್ಬ ಮತ್ತು ಹೊಸ ವರ್ಷಾಚರಣೆಯ ಅಂಗವಾಗಿ ಕಲಾವಿದರನ್ನು ಕರೆಸಿ ಪ್ರೋಗ್ರಾಂ ಮಾಡಿಸುತ್ತಿದ್ದರು.

ಪತ್ರಿಕೆ ಪ್ರಾರಂಭವಾಗುವ ಮುನ್ನ ಲಂಕೇಶರು ... ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರಲಿಲ್ಲ. ಆದರೆ ... ಪ್ರತಿ ವರ್ಷ ಅವರಿಗೆ ಹೊಸ ಬಟ್ಟೆಗಳನ್ನು ಹೊಲಿಸಿ ... ಕಪಾಟಿನಲ್ಲಿ ಹಿಂದಿನ ದಿನವೇ ಇಟ್ಟಿರುತ್ತಿದ್ದೆ. ಬೆಳಗ್ಗೆ ... ಅವರಿಗೆ ಒಂದು ಮಾತನ್ನೂ ಹೇಳುತ್ತಿರಲಿಲ್ಲ, ಅ... ಏನನ್ನೂ ಕೇಳುತ್ತಿರಲಿಲ್ಲ. ತಪ್ಪದೇ ನಾನು ಹೊಲಿ... ಬಟ್ಟೆಗಳನ್ನು ತೊಟ್ಟು ಕಾಲೇಜಿಗೆ ಹೋಗುತ್ತಿದ್ದರು.

ಆದರೆ ಪತ್ರಿಕೆ ಪ್ರಾರಂಭವಾದ ಮೇಲೆ ಪತ್ರಿಕೆಯ ... ಸ್ನೇಹಿತರು, ಇತರರು ಸೇರುವುದಕ್ಕೆ ಅದೊಂದು ಸಬೂ... ಹುಟ್ಟುಹಬ್ಬವನ್ನು ಮತ್ತು ಹೊಸ ವರ್ಷ... ಆಚರಿಸಲಾರಂಭಿಸಿದರು. ಆಗ ತೋಟದಲ್ಲಿ ಯಕ್ಷ... ಸಂಗ್ಯಾಬಾಳ್ಯ, ಸುಗಮ ಸಂಗೀತ, ನಾಟಕ ಇತ್ಯಾದಿ ಏರ್ಪಡುತ್ತಿದ್ದವು. ಆ ಕಾರ್ಯಕ್ರಮಗಳಿಗೆ ನಾನು ಮತ್ತು ... ಮಕ್ಕಳು ಹೋಗುತ್ತಿದ್ದೆವು.

ತೋಟದಲ್ಲಿ ಲಂಕೇಶರಿಗೆ ಪ್ರಿಯವಾದ ಒಂದು ಮಾ... ಮರ ಇತ್ತು. ಅವರು ತೋಟಕ್ಕೆ ಹೋದಾಗಲೆಲ್ಲಾ ಆ ಮಾ... ಕೆಳಗೆ ಕುರ್ಚಿ ಹಾಕಿಕೊಂಡು ಕೂರುತ್ತಿದ್ದರು. ಆ ಮಾ... ರೆಂಬೆಗಳು ತುಂಬಾ ಅಗಲವಾಗಿ ಚಾಚಿಕೊಂಡು ತಣ್ಣ... ಗಾಳಿ, ನೆರಳನ್ನು ಕೊಡುತ್ತಿತ್ತು. ಇವತ್ತೂ ಲಂಕೇಶ... ಮರದಡಿ ಮಲಗಿದ್ದಾರೆ.

(ಮುಂದುವರೆಯು...


ಕನಸುಗಳ್ಳರು

ಬಿಯಕೆಗಳ ಬಯಲ ಬಜಾರಿನಲಿ
ಕನಸುಗಳ ಸಗಟು ಖರೀದಿ.
ಬಲಹೀನ ಅಂತಸ್ಥ ಬಿಲದಲಿ
ಚಿಲ್ಲರೆ ವ್ಯಾಪಾರ.
ಬಟ್ಟಲಲಿ ಕಲಸಿಟ್ಟ ಬಣ್ಣಕೆ
ಬಟ್ಟೆಯ ಸಹವಾಸ ಬೇಡವಾಗಿದೆ.
ನವಿಲು ನಯನಗಳ ನಯವಂಚಕ ಲೆಕ್ಕಾಚಾರ
ಓಗ್ಗಾ ಮುಗ್ಗಾಗಿದೆ.

ಬಟಾಬಯಲಲಿ ಒಣಹಾಕಿದ ಬಟ್ಟೆಗಳ ಬಣ್ಣ
ಬಡವಾಗಿದೆ, ಬಡಬಗ್ಗರು ತೊಟ್ಟುದ್ದಕ್ಕೆ.
ಕೈದಿಗಳಾಗಿವೆ ಕನಸುಗಳೂ, ಇಲ್ಲಿ,
ಕಣ್ಣ ಮುಂದಣ ಕಿರುಕಂಬಿಗಳಲಿ
ಪಾರಾಗಲಾರದೇ ಸಾಯುವ ರಂಗುಗಳ,
ಲಾಕಪ್‌ಡೆತ್ ಪ್ರಕರಣ ದಾಖಲಿಸುವುದಾದರೂ
ಯಾವ ಕಚೇರಿಯಲಿ?
ಕಾಮನ ಬಿಲ್ಲನು ಕಾಣಲು ಬೇಕಾದ ಕಣ್ಣು
ಕನಸುಗಳ ಕಾಣಲು ಬೇಕಿಲ್ಲದಿದ್ದುದೇ
ಸಮಾಧಾನ ಸಂಗತಿ.
ಚೆಲ್ಲಾಪಿಲ್ಲಿಯಾದ ಕನಸುಗಳ ಆಯ್ದು

ಹೊಂದಿಸಿದ ಚಿತ್ರ ಚಾತುರ್ಯ
ಜತನವಾಗಿದೆ ಚಂದ್ರನಲಿ.
ಬಣ್ಣ ಕಳೆದುಕೊಂಡು.
ಯಾವುದಕ್ಕೂ ಹುಷಾರಾಗಿರಿ,
ಪಕ್ಕದಲಿ ಮಲಗಿದವನ
ಕನಸುಗಳ ಕದಿಯುವ
ತಂತ್ರಜ್ಞಾನ ತರುವುದು
ಇನ್ನೇನು ದೂರವಿಲ್ಲ.

-ಜಿ.ವಿ.ಶಿವಕುಮಾರ ಅಮ್ಮಾಪುರ



...ಡೂರಪ್ಪನ್ನ ಜೈಲಿಗೆ ಕಳಿಸಿದ್ದು ಯಾರು ಸಾರ್?

ರೂರಿನ ಪೊಲೀಸ್ ಪೇದೆ ಎನ್.ಸಿ.ಪಿ. ಸೇರಲಿದ್ದಾನಂತಲ್ಲಾ, ಪೊಲೀಸ್
ವ್ವಾಗ ಕಳ್ಳರು, ಸುಳ್ಳರು ಮತ್ತು ದಗಾಕೋರರ ಪಾಲಿಗೆ ಸಿಂಹಸ್ವಪ್ನವಾಗಿ
ಹಿಸುವುದು ಬಿಟ್ಟು ಸಿನಿಮಾ ನಟನಾಗುವ ಸ್ವಪ್ನ ಕಾಣುತ್ತ, ಅದಕ್ಕಾಗಿ
ಸುತ್ತಾ ಕಾಲ ಕಳೆದನಂತಲ್ಲಾ, ಕೊನೆಗೂ ನಮ್ಮ ಮನೆಯಲ್ಲಿ ದುಡ್ಡಿದ್ದರೆ
ೀ ಎಂಬ ಕನ್ನಡ ಸಿನಿಮಾದ ನಾಣ್ನುಡಿಯಂತೆ ಹೀರೋ ಆಗಿಯೇ
. ಈ ಸಸ್ಪೆಂಡ್ ಪ್ಯಾದೆ ಮುಖದ ಗೆಟಪ್ಪನ್ನು ನೋಡಿದ ಕನ್ನಡ ಪ್ರೇಕ್ಷಕರು
ಪ್ಯಾದೆ ಕೆಲಸಕ್ಕೂ ಲಾಯಕ್ಕಲ್ಲಾ, ಇತ್ತ ಸಿನಿಮಾ ನಟನಾಗುವುದಕ್ಕೂ
ಎಂದು ಹೇಳಿದರಂತಲ್ಲಾ, ಇದನ್ನು ಕೇಳಿಸಿಕೊಂಡ ಪ್ಯಾದೆ ಇದ್ದ ಕೆಲಸಕ್ಕೆ
ರೆದು, ಕುಮಾರಸ್ವಾಮಿ ಬಾಡಿಗಾರ್ಡಿನಂತೆ ಹೋಗಿ ನಿಂತನಂತಲ್ಲಾ,
ಲ್ಲಿ ಎಷ್ಟು ದಿನವಿದ್ದರೂ ನನ್ನನ್ನು ದೇವ್ರೂ ಕುಟುಂಬದ ಸೆಕ್ಯುರಿಟಿ
ಬಳಸಿಕೊಳ್ಳುತ್ತಾರೆಯೇ ವಿನಃ ನಾನೊಬ್ಬ ಮಂತ್ರಿಯಾಗಲು ಸಾಧ್ಯವೇ
ು ಅರಿತ ಸದರಿ ಪೊಲೀಸಪ್ಪ ಹುಟ್ಟು ಸೋಮಾರಿಗಳ ಪಕ್ಷವಾದ
ರಿ ತಾನೂ ಸೋಮಾರಿಯಾದನಂತಲ್ಲಾ, ಥೂತ್ತೇರಿ!

**

ಬಾರಿ ಪೊಲೀಸಪ್ಪನನ್ನು ಸೋಲಿಸಿದ ಕ್ಯಾಂಡೇಟು ಶಾನೆ
ಬಿಜೆಪಿಯಲ್ಲಿ ಕಾಸುಕಿತ್ತು ಈ ಬಾರಿ ಪೊಲೀಸಪ್ಪನನ್ನು ಮನೆಗೆ
ಎಂದು ಶಪಥ ಮಾಡಿ
ತ್ತಿದ್ದಾನಂತಲ್ಲಾ, ಇದನ್ನು ನೋಡಿದ ಪೊಲೀಸ್
ಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಾರ್ಟಿಯಲ್ಲಿ
ರ ಲೀಡರ್ ಕುರ್ಚಿ ಖಾಲಿಯಿದೆ. ಅದರ ಮೇಲೆ
ರೋಣವೆಂದರೆ, ಕಾಂಗ್ರೆಸ್‌ನ ಕಾಡುಮೃಗಗಳು
ತ್ತವೆ. ಆದ್ದರಿಂದ ಕೇಳಿದ ಕೂಡಲೇ ಲಕ್ಷಲಕ್ಷ
ಾಂಬೆ ಕುಬೇರ ಶರದ್ ಪವಾರನ ಪಾರ್ಟಿಗೆ
ನಾನೇ ಲೀಡರಾಗಿ ನಾನೇ ಟಿಕೆಟ್ ಹಂಚಬಹುದು.
ವನ್ನು ಹಂಚಬಹುದು. ಬಾಂಬೆಯ ಹಣ
ಿನ ಮುಖಾಂತರ ಹರಿಯುವಂತೆ ಮಾಡಿದರೆ
ಮ್ಮ ಕುಮಾರಸ್ವಾಮಿಯಂತೆ ಇಪ್ಪತ್ತು ತಿಂಗಳು
ಹನ್ನೊಂದು ತಿಂಗಳಾದರೂ
ಹುದು" ಎಂದು ಕನಸು ಕಂಡಿರುವುದು ಶುದ್ಧ
ಥೂತ್ತೇರಿ!!

**

ಟಕದ ರಾಜಕಾರಣ ಹೀನಾಯಸ್ಥಿತಿ ತಲುಪಿದೆಯಂತಲ್ಲಾ,
ಪಾಟೀಲನೆಂಬ ಹುಂಬ ಹಲವು ಜನ ಶಾಸಕರಿಗೆ ಬಾಂಬೆ
ತ್ತಿರುವಾಗಲೇ, ಅತ್ತ ಎಡೂರಪ್ಪನ ಪಟಾಲಂ "ನಿಮ್ಮನ್ನು
ಲ್ಲಿ ನಾವು ನೋಡಲಾಗುತ್ತಿಲ್ಲ" ಎಂದು ಹುಚ್ಚು ಕೆರಳಿಸುತ್ತಿದ್ದಾರಂತಲ್ಲಾ,
ೂರಪ್ಪನ ಚಿತಾಭಸ್ಮದ ಪಾಲುದಾರಿಕೆಯಲ್ಲಿ ಮಾರಾಮಾರಿಯೇ
ಂತಲ್ಲಾ, ಇದೆಲ್ಲದರ ಮಧ್ಯೆ ರಾಮುಲು ಎಂಬ ದೊಂಗನನ್ನು ಮೆರೆಸಲು
ಕೆಲವು ಖ್ಯಾತ ಬುದ್ಧಿಜೀವಿಗಳೇ ತಯಾರಾಗಿ, ತಮ್ಮ ಮೊದಲ ಕಂತಿನ
ಚ್ಚಿದ್ದಾರಂತಲ್ಲಾ, ಇದೆಲ್ಲವನ್ನು ಒಪ್ಪಿಕೊಂಡ ರಾಮುಲು "ನನಗೆ ಪಾರ್ಟಿ
ದು ಹೇಗೆಂಬುದು ಗೊತ್ತಿಲ್ಲ, ನೀವೇ ಮಾಡಿಕೊಡಿ" ಎಂದು
ತಲ್ಲಾ, ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಎಂದು
ಮಾಡಿ ಬೋರ್ಡ್ ಬರೆದು ಕೊಟ್ಟವರೇ ಈಗ ರಾಮುಲುಗೂ ಬಡವ,
ತ ಅಂದರೆ ಬಿ.ಎಸ್.ಆರ್. ಎಂದು ಹೆಸರು ಕೊಟ್ಟು, ಬಿಲ್ಲನ್ನು
ಸ್ಲಾ, ಇದರಿಂದ ಥ್ರಿಲ್ ಆದ ರಾಮುಲು, ಹೇಗಾದರಾಗಲಿ ಬಿಎಸ್‌ಆರ್
ಂಗ್ರೆಸ್ಸೂ ಇರಲೆಂದು ಬಿಎಸ್ಸಾರ್ ಕಾಂಗ್ರೆಸ್ ಎಂದು ನಾಮಕರಣ
ತಲ್ಲಾ, ಅದನ್ನು ಜೈಲಿನಲ್ಲಿರುವ ಜನಾರ್ದನ ರೆಡ್ಡಿಗೆ ಹೇಳಿ, ಗುಟ್ಟಾಗಿ
ಕೈದಿಗಳಿಗೆ ಸ್ವೀಟನ್ನು ಹಂಚಲು ಹೇಳುವುದನ್ನು ಮರೆಯಲಿಲ್ಲವಂತಲ್ಲಾ, ಥೂತ್ತೇರಿ!!

******

ಎಲ್ಲಾ ಮುಗಿಯಿತು ಎನ್ನುವಷ್ಟರಲ್ಲಿ, ನಮ್ಮ ಎಚ್.ಡಿ. ಕುಮಾರಣ್ಣ ತಮ್ಮದೇ ಟಿ.ವಿ. ಚಾನಲ್ ಎದುರು ಗಂಟೆಗಟ್ಟಲೆ ಕೂತು ಎಷ್ಟು ಮಾತನಾಡಿದರೂ ಏನೊಂದೂ ಅರ್ಥವಾಗದ ಕಾರಣ, ಅವರನ್ನೇ ಕೇಳಿದರೆ ಹೇಗೆ ಎನ್ನಿಸಿ ಫೋನ್ ಮಾಡಲಾಯಿತು.

ಥೂತ್ತೇರಿ

ರಿಂಗ್ ಟೋನ್: 'ರಾಧಿಕೆ ನಿನ್ನ ಸರಸ ಇದೇನೆ.... ರಾಧಿಕೆ....


"ಹಲೋ ಯಾರು?"

"ನಾನು ಸಾರ್, ಯಾಹೂ."

"ಏನ್ರಿ ಯಾಹೂ, ಇತ್ತೀಚೆಗೆ ಸಿಕ್ಕಲೇಯಿಲ್ಲ?"

"ಸಿಗಕ್ಕಾಗಲಿಲ್ಲ ಸಾರ್. ಹೊಸ ವರ್ಷದ ಶುಭಾಶಯ ಸಾರ್."

"ಏನು ಸುಬಾಸಯನೊ ಏನೊ. ಈ ಹಾಳು ರಾಜಕಾರಣ ತುಂಬಾ ಬೇಜಾರಾಗಿದೆ ಕಂದ್ರಿ."



"ಇಷ್ಟು ಬೇಗ ರಾಜಕಾರಣ ಬೇಜಾರಾಯ್ತು ಸಾರ್? ನಿಮ್ಮ ತಂದೆಯವರನ್ನ ನೋಡಿ, ಈ ಕ್ಷಣಕ್ಕೂ ಅವರಿಗೆ ಬೇಜಾರಿಗಿಲ್ಲ."

"ಅವ್ರುರು ಬಿಡಿ. ನಾವು ಬೇಜಾರಾದ್ರೆ ಬೇರೆ ಏನನ್ನಾದ್ರು ಮಾಡೊ ಒಂದು ಇದನ್ನಾದ್ರು ಮಾಡ್ತಿವಿ. ಅವ್ರುರಾಗಲ್ಲ, ರಾಜಕಾರಣದಿಂದ ಬೇಜಾರಾದ್ರೆ ರಾಜಕಾರಣವನ್ನೆ ಮಾಡ್ತರೆ. ಅಂತ ಶಕ್ತಿವಂತರು ನಮ್ಮ ತಂದೆಯವರು."

"ಹೊಸ ವರ್ಷದಲ್ಲಿ ಹೊಸ ಸೊಸೆಯನ್ನು ಮನೆ ತುಂಬಿಸಿಕೊಳ್ತರಂತೆ ನಿಜವೆ?"

"ಆ ತರದ ಒಂದು ಸಂತೋಷದ ಸಮಾರಂಭ ಏರ್ಪಡಿಸತಕ್ಕಂತ ಒಂದು ಒಳ್ಳೆ ಕಾರ್ಯಕ್ರಮನ ನಮ್ಮ ಕುಟುಂಬ ಹಮ್ಮಿಕೊಳ್ತಕಂತ ಸಮಯದಲ್ಲಿ ಯಾವನೊ ತಿರುಬೋಕಿ ಡಿನೋಟಿಫಿಕೇಷನ್ ಹಗರಣನ ಬಯಲಿಗೆ ತಂದು ನಮ್ಮ ಸಂತೋಷವನ್ನು ಹಾಳು ಮಾಡಿದ್ದಾನಲ್ರಿ."

"ಯಾರ್ ಸಾರ್ ಅವ್ನು?"

"ಹಿಂದೆ ಎಡೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತ ಕಾಲದಲ್ಲಿ ನಮ್ಮ ಕುಟುಂಬದ ಸದಸ್ಯರು ಮಾಡಿರತಕ್ಕಂತ ಆಸ್ತಿಪಾಸ್ತಿ ವಿವರವನ್ನೆಲ್ಲಾ ಕಲೆಹಾಕಿ ಮಾಧ್ಯಮಗಳಿಗೆ ಬಿಡುಗಡೆ ಮಾಡ್ತಕ್ಕಂತ ಒಂದು ಕುತಂತ್ರದ ಫಲವಾಗಿ ಆರು ಕೋಟಿ ಜನರಿಗೆ ಏನು ದೇವೇಗೌಡರ ಮಕ್ಕಳು ಮಾಡಿರತಕ್ಕಂತ ಆಸ್ತಿ ವಿವರವನ್ನು ಮಾಧ್ಯಮಗಳಿಗೆ ಇರಬವುದು ಅಥವಾ ಲೋಕಾಯುಕ್ತರಿಗೆ ಕೊಡತಕ್ಕಂತ ಒಂದು ಸಂಚಿಗಾಗಿ ರಾಜು ಹೆಗಡೆ ಅನ್ನೊ ಅಧಿಕಾರಿನ ನೇಮಿಸಿಕೊಂಡಿದ್ರು."

"ಸರ್ಕಾರದ ಮಟ್ಟದಲ್ಲಿ ಇಂತ ಕಸುಬಿಗೆ ಅಂತ್ಲೆ ಅಧಿಕಾರಿಗಳಿರ್ತರಾ ಸಾರ್."

"ಇರಲ್ಲ ಕಂದ್ರಿ. ಆದ್ರೆ ಇವ್ರುರು ಬಳಸಿಕೊಳ್ತರೆ. ಆ ರಾಜು ಹೆಗ್ಡೆ ಅನ್ನೋ ಅಧಿಕಾರಿ ಕೊಟ್ಟ ಮಾಹಿತಿಗಳೇನಿವೆ ಅವೆಲ್ಲಾ ಬೋಗಸ್, ಸುಳ್ಳು ಮಾಹಿತಿಗಳು. ಅವನ್ನ ಒಬ್ಬ ನಿರುದ್ಯೋಗಿ ಇದ್ದಾನೆ, ಬಿ.ಜೆ. ಪುಟ್ಟಸ್ವಾಮಿ ಅಂತ. ಆತನ ಕೆಲಸ ಏನು ಅಂದ್ರೆ ಸದಾ ನಮ್ಮ ಕುಟುಂಬದ ಆಸ್ತಿ ವಿವರವನ್ನು ಕಲೆ ಹಾಕಿ, ಅದನ್ನ ಮಾಧ್ಯಮಗಳಿಗೆ ಬಿಡುಗಡೆ ಮಾಡೋದು, ಲೋಕಾಯುಕ್ತರಿಗೆ ಕೊಡೋದು. ಬರೀ ಇಂತ ಕೆಲಸಗಳನ್ನೇ ಮಾಡಿಕೊಂಡು, ಗನಕಾರ್ಯ ಮಾಡಿದೋರತರ ಮಾಧ್ಯಮಗಳಿಗೆ ಪೋಸ್ ಕೊಡ್ತರೆ. ಬರೀ ಇಷ್ಟೇ ಅವರ ಕೆಲಸ."

"ನಿಜವಾಗ್ಲು ನಡದಿರೊದೇನು ಸಾರ್?"

"ನಾನು ಇಪ್ಪತ್ತು ತಿಂಗಳು ಮುಖ್ಯಮಂತ್ರಿಯಾಗಿದ್ದ ಅವದಿಲಿ, ಏನೂ ನಡೆದಿಲ್ಲ ಕಂದ್ರಿ. ಡಿನೋಟಿಫಿಕೇಷನ್ ಕೂಡ ಕಾನೂನುಬಾಹಿರವಾಗಿ ನಡೆದಿಲ್ಲ, ಎಲ್ಲಾ ಕಾನೂನು ಪ್ರಕಾರವಾಗಿ ಯಾರಿಗೂ ಅನ್ಯಾಯ ಆಗದ ರೀತಿಲಿ ನಡೆದಿದೆ. ಆದ್ರು ಜೈಲಿಗೋಗಿ ಬಂದ ವ್ಯಕ್ತಿ ನಮ್ಮ ಮೇಲೆ ಸೇಡು ತೀರಿಸಿಕೊಳ್ಳೋದಕ್ಕೆ ಇಲ್ಲಸಲ್ಲದ ಆಪಾದನೆಗಳನ್ನು ಸೃಷ್ಟಿ ಮಾಡಿ, ಈ ತರ ಮಾಡ್ತಯಿದಾರೆ. ಆದ್ರು ನಮ್ಮನ್ನ ಜೈಲಿಗೆ ಕಳಸಕ್ಕಾಗಲ್ಲ ತಿಳಕೊಳಿ."

"ಈ ಎಡೂರಪ್ಪನ್ನ ಜೈಲಿಗೆ ಕಳಿಸಿದ್ಯಾರು ನಿಜ ಹೇಳಿ ಸಾರ್?"

"ಅವರನ್ನ ಜೈಲಿಗೆ ಕಳಿಸಿದ್ದು ಕಾನೂನು."

"ಅದು ಸರಿ ಸಾರ್. ಆ ಕಾನೂನನ್ನು ಕೆದಕಿ ಕೆಲಸ ಮಾಡಂಗೆ ಮಾಡಿದ್ನಾರು?"

"ನೋಡಿ, ಎಡೂರಪ್ಪ ಜೈಲಿಗೋದದ್ದು ಡಿನೋಟಿಫಿಕೇಶನ್ ಹಗರಣದಿಂದ. ಅದೇ ಹಗರಣ ಸೃಷ್ಟಿ ಮಾಡಿ ನನ್ನನ್ನ ಜೈಲಿಗೆ ಕಳಸೊ ಸಂಚು ಮಾಡ್ತಾಯಿದಾರೆ. ಹಿಂಗೆ ಆದ್ರೆ ನಾವು ಪುನಃ ಅವರಿಗೆ ಜೈಲು ದಾರಿ ತೋರಬೇಕಾಯ್ತದೆ. ನಮ್ಮ ಕುಟುಂಬನ ಎದುರಾಯ್ಕಂಡೋರು ಏನಾದ್ರು ಅಂತ ಬಿಡಿಸಿ ಹೇಳಬೇಕಾಗಿಲ್ಲ."

"ನಿಜ ಸಾರ್. ನಿಮ್ಮ ಕುಟುಂಬ ಎದುರಾಯ್ಕಂಡೋರು ಯಾರೂ ಉಳಿದಿಲ್ಲ, ಆ ಪುಟ್ಟಸ್ವಾಮಿಗೌಡ, ಬಚ್ಚೇಗೌಡ, ಭೈರೇಗೌಡ, ನಾಗೇಗೌಡ, ವೈ.ಕೆ. ರಾಮಯ್ಯ ಎ.ಕೆ. ಸುಬ್ಬಯ್ಯ ಸಿದ್ಧರಾಮಯ್ಯ ಸೋಮಣ್ಣ ಎಚ್.ಟಿ. ಕೃಷ್ಣಪ್ಪ ಟಿ.ವಿ. ಶಿವಶಂಕರಪ್ಪ ಬಿ.ಎಲ್. ಶಂಕರ್, ಡಿ.ಬಿ. ಚಂದ್ರೇಗೌಡ, ಬಿ.ಬಿ. ನಿಂಗಯ್ಯ ವಸಂತ ಬಂಗೇರ, ಗೋವಿಂದೇಗೌಡ.... ಹೀಗೆ ಹೇಳ್ತಾ ಹೋದ್ರೆ, ಒಂದೂರಿನ ಓಟರ್ ಲಿಸ್ಟಾಯ್ತದೆ ಸಾರ್. ಆದ್ರೆ ಇವರ‍್ಯಾರೂ ನಿಮ್ಮ ಕುಟುಂಬಕ್ಕೆ ದ್ರೋಹ ಬಗದೋರಲ್ಲ, ಸ್ವಾಭಿಮಾನಿಗಳಾಗಿದ್ರು ಅಷ್ಟೆ."

"ಬಿ.ಎಲ್. ಶಂಕರ್ ದ್ರೋಹ ಬಗಿಲಿಲವೇನ್ರಿ?"

"ಅದಿರಬವುದು. ಆದ್ರೆ ತಮ್ಮ ಜೀವನದಲ್ಲಿ ಕಾಂಗ್ರೆಸ್ಸನ್ನು ವಿರೋಧಿಸಿಕೊಂಡು ಬಂದ ಎಂ.ಪಿ. ಪ್ರಕಾಶ್ ಕಾಂಗ್ರೆಸ್ಸಿಗೆ ಹೊರಟೋಗೊ ತರ ಮಾಡಿದ್ರಿ. ಇದಂತೂ ದುರಂತ ಸಾರ್."

"ಅವ್ರುರನ್ಯಾರ‍್ರಿ ಹೋಗಿ ಅಂದಿದ್ದು, ನಮ್ಮ ತಂದೆ ಹೇಳಿದಂಗೆ ಕೇಳಿಕೊಂಡು ಅವ್ರುರ ಜೊತೆ ಇರಬವುದಿತ್ತಲ್ರೀ?"


"ಥೂತ್ತೇರಿ!!!"

—ಬಿ.ಚಂದ್ರೇಗೌಡ

...ವ್ವನನ್ನು ಕುರಿತ ಅಳುಕು


ಅವ್ವನ ಬಗ್ಗೆ ಅದೇಕೋ ನೆನಪಾಗಿ ಈ ಕೆಳಗಿನ ಸಾಲುಗಳನ್ನು ಬರೆಯುತ್ತಿದ್ದೇನೆ. ಈಕೆ ಅಂಥ 'ಆದರ್ಶ
...ನಾಗಿರದಿದ್ದರೂ ನೆನಪಾಗಿ ನನ್ನನ್ನು ಕಾಡುತ್ತಿರುವುದು ವಿಚಿತ್ರ.....

...ರೊಬ್ಬನಿಗೂ ಹೀಗೆ ಅನ್ನಿಸುತ್ತೆ ಎಂದು ನನ್ನ ಊಹೆ. ತಂದೆ ಅಥವಾ ತಾಯಿ ಸತ್ತಾಗ ದುಃಖವಾಗುವುದು ಸಹಜ.
...ಗೆ ನನ್ನ ಅವ್ವ ಸತ್ತಾಗ ದುಃಖದ ಜೊತೆಗೆ ಅಳುಕು ಶುರುವಾಯಿತು; ಆಕೆಯ ಸಾವು ಬಹುಪಾಲು ನನ್ನಿಂದಲೇ
ಅನ್ನಿಸಿತು. ನನ್ನನ್ನು ಹಡೆಯುವಾಗ ಶುರುವಾದ ಕಾಯಿಲೆ ಆಕೆ ಸಾಯುವವರೆಗೆ
...ತೆ ಮಾಡಿದ್ದು ಅಷ್ಟು ಕಾಡುವುದಿಲ್ಲ; ನಾನು ಬೆಳೆದಂತೆ ಆಕೆಯ ಬಗ್ಗೆ ಅಷ್ಟು ಗಮನ
...ಲ್ಲವೇನೋ ಅನ್ನಿಸತೊಡಗಿತು. ಆಕೆ ತೀರಿಕೊಂಡಾಗಲಂತೂ ದುಗಡದಲ್ಲಿ
...ಹೋಗಿದ್ದೆ, ಆದರೆ ನಾನೆಂದೂ ತಾಯಿಗೆ ಅಂಟಿಕೊಂಡ ಅಜ್ಞಾತೆಯಾಗಿರಲಿಲ್ಲ;
...ಟ್ಟು, ಸೋಗು, ಕಿರಿಕಿರಿ ಎಲ್ಲವನ್ನೂ ಟೀಕಿಸುತ್ತಿದ್ದವನು. ಆಕೆಯ ಜಿಪುಣತನ, ಅಪ್ಪ
...ದರೂ ಮನೆಗೆ ಕರೆತಂದಾಗ ಸಜ್ಜನಿಕೆಗೆ ಬದಲು, ಕೆಟ್ಟದಾಗಿ ವರ್ತಿಸಿ 'ಊರಿಗೆ
...ಕಿ ಹಾಳಾಗ್ಲೀಯ' ಅನ್ನುವಂತೆ ಎಗರಾಡುತ್ತಿದ್ದುದು, ಅಪ್ಪನ ಪ್ರೇಮಪ್ರಕರಣಗಳ
...ಕೊಂಡು ಅಥವಾ ಅರೆಬರೆ ಮಾಹಿತಿ ದೊರಕಿಸಿಕೊಂಡು ಜಗಳ ಕಾಯುತ್ತಿದ್ದುದು,
...ನ ಗೆಳತಿಯರನೇಕರು ನಮ್ಮ ಒಕ್ಕಲಿನ ಭಾಗವಾಗಿ ಹೋಗಿರುವುದಕ್ಕೆ ಆಕೆಯೇ
...ಗಿದ್ದುದು—ಎಲ್ಲ ವಿಚಿತ್ರ ಮಾತ್ರ. ಹಾಗೆಯೇ ಬದುಕಿನ ಜಟಿಲ ಪರಿಸ್ಥಿತಿ.
...ಅ ಅವ್ವ ಸತ್ತಾಗ **guilty** ಆಗಿದ್ದುದು ಮತ್ತೆಮತ್ತೆ ನನ್ನ ಮನಸ್ಸಿಗೆ ಬಂದು ಅಲ್ಲಿ
...ೇ ಮಸುಕುಲಿದ ಕತೆ ಅಡಗಿರುವುದಾಗಿ ಅನ್ನಿಸುತ್ತದೆ. ಚಿಕ್ಕವರಿಗೆ ಭಾಷೆ ಬರುವುದು
...ಇರಬಹುದು, ಚಿಕ್ಕವರಿಗೆ ಜಗತ್ತಿನ ಮೊದಲ ಪರಿಚಯವಾಗುವುದೇ
...ಂದ. ಊಟ ಅವಳ ಎದೆಯಿಂದ ಹಾಲಿನ ರೂಪದಲ್ಲಿ ಬರುತ್ತದೆ. ಲೈಂಗಿಕ ಪ್ರಜ್ಞೆ
...ಲೆಯ, ಕೆನ್ನೆಯ, ತೊಡೆಯ, ಧ್ವನಿಯ ಸಂಪರ್ಕದಿಂದ ಬರುತ್ತದೆ. ತಾಯಿ, ಅಕ್ಕ
...ಲ್ಲ ಆಗಿ ಹೆಣ್ಣು ಅನ್ನಿಸುವುದು ಹಾಗೆ. ನನಗೆ ಇವತ್ತಿಗೂ ಮರೆಯದ ವಸ್ತು ನನ್ನವ್ವನ
...ಲೆಯುಡಿಕೆ, ಉಸಿರು, ಎಂಜಲು ಇವುಗಳು ನೀಡುತ್ತಿದ್ದ ಖುಷಿ. ನನ್ನವ್ವ ನನಗೆ
...ದ ಎದೆ ಹಾಲು ಕುಡಿಸಲಿಲ್ಲ; ಸುಮಾರು ಮೂರು ನಾಲ್ಕು ತಿಂಗಳಿಗೆ ಆಕೆಯ


ದೇವೀರಮ್ಮ

ಕಾಯಿಲೆ ಶುರುವಾಯಿತು. ನನ್ನ ಎಡಮೊಲೆಯ ಹತ್ತಿರ ಹುಣ್ಣು ಆಯಿತು. ತೂಕ ತೀರಾ ಕಮ್ಮಿ ಇದ್ದ ಈ ಎದೆ-ಕುರದ ಮಗುವನ್ನು ಎದೆಯಮೇಲೆ ಮಲಗಿಸಿಕೊಂಡು ಮೊಲೆ ಕೊಡುವಂತಿರಲಿಲ್ಲ. ಹೀಗಾಗಿ ಆಕಳ ಹಾಲು ಕೊಡತೊಡಗಿದಳು. ಇದರಿಂದ ಮಗುವಿನ ಕಾಯಿಲೆಗಳು ಜಾಸ್ತಿಯಾದವಂತೆ. ಹಾಗೆಯೇ ಈ ಮಗುವನ್ನು ಉಳಿಸಿಕೊಳ್ಳುವ ಹಟ, ಕಾಯಿಲೆಯ ಅವ್ವನಿಗೆ ತೀರಾ ನಿಕಟವಾಗಿ ಬೆಳೆದದ್ದರಿಂದ ಆಕೆಯೊಂದಿಗೇ ಇದ್ದು ಹಿತ್ತಲಲ್ಲಿ ನೆಲ ಕೊಚ್ಚಿ ಕಾಯಿಪಲ್ಯೆ ಬೆಳೆಯುತ್ತಿದ್ದರೆ, ಮಲ್ಲಿಗೆ ಬಳ್ಳಿಗೆ ಚಪ್ಪರ ಹಾಕಿ ಹಬ್ಬಿಸುತ್ತಿದ್ದರೆ, ಆಕಳು, ಎಮ್ಮೆಯ ಹಾಲು ಕರೆದುಕೊಳ್ಳುತ್ತಿದ್ದರೆ 'ಮನುಷ್ಯರ ಲೋಕ ಹೀಗೆಲ್ಲ ಇರುತ್ತದಲ್ಲ' ಎಂಬ ಸೋಜಿಗವಾಗಿರಬೇಕು. ಆದೆಲ್ಲ ಈಗ ಬರೆಯುವುದಿಲ್ಲ. ಈ ಅವ್ವ ಎಂಬ ವ್ಯಕ್ತಿ ತೀರಿಕೊಂಡಾಗ ಆಗುವ ಪಾಪಪ್ರಜ್ಞೆ ಕುರಿತು ಮಾತ್ರ ಹೇಳುತ್ತೇನೆ; ಇದನ್ನು ಪಾಪಪ್ರಜ್ಞೆ ಎಂದು ಕರೆದು ಸೀಮಿತಗೊಳಿಸಲು ನನಗೆ ಇಷ್ಟವಿಲ್ಲ. ಇದು ಭಯ ಕೂಡ ಏಕಿರಬಾರದು? ಒಂದು ಅನುಭವಗಳ ಹೊರೆಯನ್ನೇ ನನ್ನಲ್ಲಿ ಬಿಟ್ಟುಹೋದ ವ್ಯಕ್ತಿಯ ಸಾವು ಹಲವಾರು ಬಗೆಯ ಸಾವಿನ ಸಂಕೇತವಾಗಿ ಆತಂಕವಿರಬಹುದಲ್ಲವೆ? ನಾನು ಚಿಕ್ಕವನಾಗಿದ್ದಾಗಿನಿಂದ ಗೆಳೆಯರು ತೀರಿಕೊಳ್ಳುತ್ತಲೇ ಇದ್ದರು. ಅಗಸರ ಪರಮೇಶಿ ಎನ್ನುವವನು ತೀರಿಕೊಂಡ. ಜಂಗಮರ ಚೆನ್ನಯ್ಯ ಅನ್ನುವವನು ಹೋದ. ಆಮೇಲೆ ನಮ್ಮ ಚಿಕ್ಕಪ್ಪನ ಮಗ ಪರಮೇಶಿ ಟೈಫಾಯ್ಡ್ ಆಗಿ ಕಣ್ಮರೆಯಾದ. ಕಾಲೇಜಿನಲ್ಲಿ ನನ್ನ ಜೊತೆಗೆ ಓದುತ್ತಿದ್ದ ರಾಮಚಂದ್ರ ಎಂಬ ನಾಗಪ್ಪಶೆಟ್ಟರ ಮಗ, ಪ್ರಸನ್ನ ಎಂಬ ಗೆಳೆಯ ಹೊರಟುಹೋಗಿದ್ದಾರೆ. ಎಲ್ಲ ವ್ಯಸನ ಹೆಚ್ಚಿಸಿದೆ, ಆದರೆ ಅವ್ವ ನನ್ನಲ್ಲಿ ಅಳುಕು ಮತ್ತು ಭಯ ಬಿಟ್ಟಿದ್ದಾಳೆ. ಇದಕ್ಕೆ ಕಾರಣ ಹುಡುಕುತ್ತಲೇ ಒಂದು ಕತೆ ಬರೆದುಬಿಡಬಹುದಿತ್ತು—ಬೇಡ, ಅಷ್ಟು ಸ್ವಾರ್ಥ ಬೇಡ ಎಂದುಕೊಳ್ಳುತ್ತೇನೆ.... ಬರೆಯದೇ ಇದ್ದುಬಿಡುವ ನೆಮ್ಮದಿ ಒಳ್ಳೆಯದು ಎಂದುಕೊಳ್ಳುತ್ತೇನೆ.

—ಏಪ್ರಿಲ್ 24, 1996



ತೀಟಿದ್ರೆ ಅವ್ರುನೇ ಬರಲಿ ಸಾ

'ನೆಂಸ್ಕಾರ ಸಾ' ಎನ್ನುತ್ತಲೇ ಒಳಕ್ಕೆ ನುಗ್ಗಿದ ಕ್ಯಾತ.

'ಬಾಲಾ ಕ್ಯಾತ. ಎಲ್ಲಿ ಹಾಳಾಗಿ ಹೋಗಿದ್ಯೊ' ಅಂದೆ.

'ಊರಿಗೆ ಹೋಗಿದ್ದೆ ಸಾ' ಎನ್ನುತ್ತಾ ಕುರ್ಚಿಯಲ್ಲಿ ಕುಳಿತ.

'ಊರಲ್ಲಿ ಏನು ಸಮಾಚಾರ? ಎಲ್ಲ ಚೆನ್ನಾಗಿದ್ದಾರಾ?'

'ಜನ ಏನು ಮಾಮೂಲಿನ ಹಂಗೇ ಅವ್ರೆ ಸಾ. ಆದ್ರೆ ದೇವರು ಮಾತ್ರ ಕಳಕಳಿಯಾಗದೆ.'

'ಏನ್ಲಾ ಹಂಗಂದ್ರೆ?'

'ಎಲ್ಲಾ ಸತ್ಯನಾರಾಯಣ ದಲಿತರ ಸೇವೆ ಫಲ ಸಾ' ಅಂದ.

ನಾನು ಕೇಳಿದ್ದೇ ಒಂದು. ಅವನು ಹೇಳಿದ್ದೇ ಇನ್ನೊಂದು. ಅವನ ಮಾತಿನ ವರಸೆಯೇ ಹೀಗೆ. ಸತ್ಯನಾರಾಯಣ ದಲಿತರು ಎಂದರೆ ಯಾರು? ಅವರ ಸೇವೆ ಯಾವುದು? ಆದರಿಂದ ದೇವರು ಯಾಕೆ ಕಳಕಳಿಯಾಗಿರ್ತಾನೆ ಒಂದೂ ಅರ್ಥವಾಗಲಿಲ್ಲ. ಅವನನ್ನೇ ಕೇಳಿದೆ. ಹಳ್ಳಿಬಿಟ್ಟು ಪಟ್ಟಣ ಸೇರುವುದು ಮಾಮೂಲಿಯಾಗಿದೆ. ಹಾಗೇನೇ ನನ್ನೂರಿನ ಕೆಲವು ದಲಿತರೂ ಆಗಿದ್ದರು. ಅದರಲ್ಲಿ ಕೆಲವರು ದಿಂಡಾದ ಕುಳವೂ ಆಗಿದ್ದರು. ಅಂತಹವರಲ್ಲಿ ಕೆಲವರಿಗೆ ಕಾಲದಿಂದಲೂ ಇಲ್ಲದಿದ್ದ ದೇವರ ಕಂಡರೆ ಬಲೇ ಪ್ರೀತಿ. ಹೀಗಾಗಿ ಅವರೆಲ್ಲ ಚಲಾವಣೆಯಲ್ಲಿರುವ ಸತ್ಯನಾರಾಯಣನ್ನ ಹಿಡಿದುಕೊಂಡಿದ್ದಾರೆ. ಗೃಹಪ್ರವೇಶದ ದಿವಸವಂತೂ ಅವನ ಪೂಜೆ ನೆರವೇರಿಸಲೇಬೇಕು ಅನ್ನುವ ಹಟಕ್ಕೆ ಬಿದ್ದಿದ್ದಾರೆ. ಅಲ್ಲದೆ ಸತ್ಯನಾರಾಯಣ ವ್ರತವನ್ನು ಪ್ರತೀ ವರ್ಷ ತಪ್ಪದೆ ಆಚರಿಸುತ್ತಾ ಬಂದಿದ್ದಾರೆ. ಅಂತಹವರು 'ಸತ್ಯನಾರಾಯಣ ದಲಿತರು' ಅಂತೆ! ಹೊಸ ದೇವರು ಸಿಕ್ಕಿದ್ದಾನೆ ಎಂದು ಊರಿನ ವೀರಭದ್ರೇಶ್ವರ ಸ್ವಾಮಿಯನ್ನೇನೂ ಮರೆತಿಲ್ಲ. ಅವನನ್ನೂ ಭಯಭಕ್ತಿಯಿಂದ ಆರಾಧಿಸುತ್ತಾ ಬಂದಿದ್ದಾರೆ.

'ಅವರೇನು ಮಾಡಿದರ್ಲ ದೇವರಿಗೆ?'

'ಇಷ್ಟು ಎತ್ತರ, ಇಷ್ಟು ಉದ್ದದ ಬೆಳ್ಳಿ ಬಸವಣ್ಣನ್ನ ಮಾಡಿಸಿ ಕೊಟ್ಟವ್ರೆ' ಎಂದು ಕೈನಲ್ಲಿಯೇ ಅಂದಾಜು ಗಾತ್ರದ ಚಿತ್ರ ಕಟ್ಟಿದ.

'ಹೋಗಲೋ ಬಡ್ಡೆತ್ತದೆ. ದಲಿತರು ಕೊಟ್ಟರೆ ಗುಡಿಯೋರು ಹೆಂಗೆ ತಗಾತ್ತಾರಲ? ಗುಡಿ ಒಳಕ್ಕೆ ತಗಂಡರೆ ಮೈಲಿಗೆ ಆಗೋಲ್ಲವೆ?'

'ನೀವೂ ಚೆನ್ನಾಗಿ ಕೇಳಿದಿರಿ ಸಾ. ಹೊಲೇರ ದುಡ್ಡು ಹೊಲೇರ ಚಿನ್ನ, ಹೊಲೇರ ಬೆಳ್ಳಿ ಅಂತ ಇದ್ದತಾ ಸಾ. ಇವೆಲ್ಲ ಜಾತ್ಯತೀತ ಸಾ. ಯಾವಕ್ಕೂ ದೋಷ ಇಲ್ಲ, ಗುಡಿ ಒಳಕ್ಕೆ ತಗಂಡ್ರೂ ಮೈಲಿಗೆ ಆಗಕ್ಕಿಲ್ಲ' ಎಂದು ತೀರ್ಮಾನ ಹೇಳಿದ.



****

ಗುಡಿ ಇಲ್ಲದ ಊರು ಇಲ್ಲ, ತಲೆಯ ಮೇಲೆ ಸೂರು ಎಲ್ಲರಿಗೂ ಇಲ್ಲದಿದ್ದರೂ ದೇವರಿಗೆ ಮಾತ್ರ ಸೊಗಸಾದ ಆಲಯ ಇರಲೇಬೇಕು. ಅದರ ಪ್ರವೇಶಕ್ಕೂ ಒಂದು ಅಲಿಖಿತ ಸಂವಿಧಾನವೇ ಇದೆ. ಗರ್ಭಗುಡಿ ಪ್ರವೇಶ ಲಿಂಗಾಯತ ಪೂಜಾರಿಗೆ ಸೀಮಿತ. ಅವನಿಂದಲೇ ಪೂಜೆ ಸಾಂಗವಾಗಿ ನೆರವೇರಬೇಕು. ಒಕ್ಕಲಿಗರು ರಾಜಕೀಯವಾಗಿ ಪ್ರಬಲರು ನಿಜ. ಪೂಜಾರಿಗಿಂತಲೂ ಶುಭ್ರವಾಗಿ ಕೆಲವರು ಇದ್ದಿರಲೂಬಹುದು. ಆದರೂ ಅವರಿಗೆ ಗರ್ಭಗುಡಿ ಪ್ರವೇಶ ನಿಷಿದ್ಧ. ದಲಿತರು ಗುಡಿ ಒಳಕ್ಕೆ ಇರಲಿ, ಹತ್ತಿರವೂ ಸುಳಿಯುವಂತಿಲ್ಲ. ಏನಿದ್ದರೂ ಗುಡಿಯ ಮುಂದಿನ ಗರುಡಗಂಬದ ಆಚೆ ನಿಂತು ದೇವರ ದರ್ಶನ ಮಾಡಿ ಪುನೀತರಾಗಬೇಕು! ಅನೂಚಾನವಾಗಿ ನಡೆದು ಬಂದಿರುವ ಪದ್ಧತಿ ಇದು.

ಹಳ್ಳಿಯ ಬದುಕೇ ಹೀಗೆ. ಬಿಡುವಿಲ್ಲದ ಕೆಲಸ. ವೀರಭದ್ರೇಶ್ವರ ಸತ್ತಿರುವನೊ, ಬದುಕಿರುವನೊ ಯೋಚಿಸಲು ಪುರುಸತ್ತೇ ಇರುವುದಿಲ್ಲ. ಸುಗ್ಗಿ ಬಂದು ಕಳೆದರೆ ಸಾಕು. ಬಿಡುವಾಗುತ್ತಾರೆ. ಯಾವಾಗಲೂ ನೆನಪಾಗದ ದೇವರು ಜ್ಞಾಪಕಕ್ಕೆ ಬರುತ್ತಾನೆ... ಹಬ್ಬಗಳ ಸಾಲೇ ಬರುತ್ತವೆ. ಇದರ ಜೊತೆಜೊತೆಯಲ್ಲೇ ದೇವರಿಗಾಗಿ ಜಾತಿ ಜಗಳವು ಕುಡಿಯೊಡೆಯುತ್ತದೆ.


ನನ್ನ ಊರಿನಲ್ಲೂ ಇದೇ ಆಯಿತು.

'ನಾವೂ ಮನುಷ್ಯರು. ನಮಗೂ ದೇವಸ್ಥಾನ ಪ್ರವೇಶದ ಹಕ್ಕು ಇದೆ' ಎಂದರು ಕೆಲವು ದಲಿತ ಯುವಕರು.

ಕನಲಿ ಕೆಂಡ ಆದರು ಒಕ್ಕಲಿಗರು.

ಅವರ ಒತ್ತಾಯವೇ ವಿಚಿತ್ರ ಅನ್ನಿಸಿತು. ಹಿಟ್ಟು ಬೂದಿ ಎರಡನ್ನೂ ಒಂದು ಮಾಡಲು ಸಾಧ್ಯವೇ? ದೇವರು ಮೇಲುಜಾತಿ, ಕೀಳುಜಾತಿ ಎಂದು ಮಾಡಿರುವುದಾದರೂ ಯಾತಕ್ಕೆ? ಊರಿಗೆಲ್ಲೋ ಕೇಡುಗಾಲ ಬಂದಿದೆ. ಅದಕ್ಕೇ 'ಹೊಲೇರ ಹೈಕಳು' ಹೀಗೆ ಕುಣಿಯುತ್ತಾ ಬಿದ್ದವೆ ಎಂಬ ತೀರ್ಮಾನ ಅವರದ್ದು. ಹೊಲೇರ ಹಿರಿಯರನ್ನು ಕರೆಸಿ ವಿಚಾರವಿನಿಮಯ ಮಾಡಿದರು. 'ಇದೆಲ್ಲ ಆಗೋ ಹೋಗೋ ಮಾತ ಬುದಿಗೌಡ್ರೆ. ಆ ಹೈಕಳದ್ದೂ ಒಂದು ಮಾತು ಅಂತೀರಾ? ತಗದು ಬಿಸಾಕಿ ಅತ್ಲಾಗಿ. ಕಾಲದಿಂದ ಬಂದಿರೋದ ಬುಟ್ರೆ ಆ ಸಿವ ಮೆಚ್ತಾನಾ' ಅಂದ್ರು ಹಿರೀಕರು. 'ನಿಮ್ಮಟ್ಟ ಹೈಕಳಿಗೆ ಒದ್ದು ಬುದ್ಧಿ ಹೇಳಿ' ಎಂದರು ಗೌಡಗೋಳು.

ಹೊಲೇರ ಹಿರಿಯರು ಒದೆಯಲೇನೋ ಸಿದ್ಧ ಇದ್ದರು. ಆದರೆ ಒದೆಸಿಕೊಳ್ಳಲು ಯಾರೂ ಸಿದ್ಧ ಇರಲಿಲ್ಲ!



ಎಚ್.ಎಲ್. ಕೇಶವಮೂರ್ತಿ

ಅಣಕ

'ಯಾರ್ಲಾ ಅದು ಗುಡಿ ಒಳಕ್ಕೆ ಹೋಯ್ತೀನಿ ಅಂದೋನು?'

'ನಾನೇ ಕನಯ್ಯ ಅಂದದ್ದು', 'ನಾನೇ ಕನಯ್ಯ ಅಂದದ' ಅಂತ ಹೇಳುತ್ತಾ ಹತ್ತಾರು ಯುವಕರು ಮುಂದೆ ಬಂದರು

'ಲೇ ಧರ್ಮಕರ್ಮ ನೋಡುರ್ಲ, ಗುಡಿ ಒಳಕ್ಕೆ ಹೋ ಕರ್ಮ ಸುತ್ಕಂತದೆ ಕರ್ಮ.'

'ಅದೇನು ಸುತ್ಕತ್ತದೊ ಸುತ್ತುಕಳ್ಳಲಿ. ನಾವು ಹೋ ಹೋಯ್ತೀವಿ' ಅಂದರು ಯುವಕರು.

ತಲೆತಲೆ ಚಚ್ಚಿಕೊಂಡರು ಹಿರೀಕರು. ಇಂತಹ ನಿ ಬಾಹಿರ ಕೆಲಸ ಮಾಡಿದರೆ ಪ್ರಳಯ ಏನೂ ದೂರ ಇ ಅನ್ನಿಸಿತು ಅವರಿಗೆ.


ಸುದ್ದಿ ಒಕ್ಕಲಿಗ ಕೇರಿಯನ್ನು ಬಿರುಗಾಳಿಯಂತೆ ಬಂ ಅಪ್ಪಳಿಸಿತು. ಅಲ್ಲಿನ ಯುವಕರೂ ಸೆಟೆದು ನಿಂತರು. 'ಗು ಒಳಕ್ಕೆ ಅದು ಹೆಂಗೆ ಬರುತ್ತಾರೋ ನೋಡೇಬಿಡುತ್ತೀ ಎಂದು ಹಾರಾಡಿದರು.

ಅಲ್ಲಿಗೆ ರಣರಂಗ ಸಿದ್ಧ ಆಯಿತು.

ವೀರಭದ್ರ ಸ್ವಾಮಿಯ ಜಾತ್ರೆ ಬಂದಿತು. ಊರಿನ ಪ್ರಸ್ಥಿತಿ ಅರಿತು ಪೊಲೀಸರೂ ಬಂದರು. ಅವರ ಕಣ್ಗಾವ ನಲ್ಲಿಯೇ ಸ್ವಾಮಿಯ ಉತ್ಸವ ಹೊರಟಿತು. ಒಕ್ಕಲಿಗ ಕೇರಿ ದೇವರು ಬಂದಾಗ ಮನೆಮಂದಿಯೆಲ್ಲರೂ ಭಯಭಕ್ತಿಗಳಿಂ ಪೂಜೆ ಮಾಡಿಸಿ ದೇವರ ಪ್ರೀತಿಗೆ ಪಾತ್ರರಾದೆವೆಂದು ಧ ಮೆರೆದರು. ಕೇರಿಯ ಕೊನೆಗೆ ಮೆರವಣಿಗೆ ಬಂದಿತು. ಅ ದಲಿತರ ದಂಡೇ ಇದ್ದಿತು. ದೇವರ ದರ್ಶನಕ್ಕೆ ಅವಕಾ ದೊರೆಯಿತು. ಆದರೆ ಅವರಿಗೆ ಅದು ಬೇಕಿರಲಿಲ್ಲ, ತ ಹಟ್ಟಿಯಲ್ಲಿಯೇ ದರ್ಶನ ಪಡೆಯುವ ಆಕಾಂ ವ್ಯಕ್ತಪಡಿಸಿದರು. 'ನಮ್ಮ ಕೇರಿಗೂ ಮೆರವಣಿಗೆ ಬರಬೇ ಅಂದ ಒಬ್ಬ ದಲಿತ ಯುವಕ.

ಧರೆಗುರುಳಿದ ದೊಡ್ಡಾಲದ ಮರ 'ಬಂ'

ಊರ ಹೊರಗಿನ ಬಯಲಿನಲ್ಲಿ ದೇವರ ಗುಡಿ ಮುಂದೆ ಇರುವ ದೊಡ್ಡಾಲದ ಮರದ ಬುಡದಲ್ಲಿ ಕುಂತು ದಣಿವಾರಿಸಿಕೊಂಡವರೆಷ್ಟೋ? ಹಗಲು ರಾತ್ರಿಗಳನ್ನು ಕಳೆದವರೆಷ್ಟೋ? ಆಲದಮರದ ಹಣ್ಣುಗಳನ್ನು ತಿಂದು ಅಲ್ಲಿಯೇ ಸಂತಾನ ಭಾಗ್ಯವನ್ನು ಪಡೆದುಕೊಂಡು ರೆಕ್ಕೆ ಬಲಿಸಿಕೊಂಡು ಹಾರಿಹೋದ ಪಕ್ಷಿಗಳೆಷ್ಟೋ? ಇಳಿಬಿದ್ದ ಬಿಳಿಲುಗಳ ಬಳಸಿಕೊಂಡು ಉಯ್ಯಾಲೆ ಆಡಿ ಆನಂದ ಪಟ್ಟವರೆಷ್ಟೋ?



ಆದರೇನಂತೆ, ತಾನು ಸಾವಿರಾರು ವರ್ಷಗಳ ಕಾಲ ಚಿರಸ್ಥಾಯಿಯಾಗಿರುತ್ತೇನೆ ಎಂಬ ಹಮ್ಮಿನಲ್ಲಿದ್ದ ಮರ ಬೀಸಿದ ಬಿರುಗಾಳಿಗೆ ಎದೆಗೊಟ್ಟು ನಿಲ್ಲಲಾಗದೆ ಮಕಾಡೆ ಮಲಗಿದೆ.

ನಾನು ಹೇಳುತ್ತಿರುವುದು ಬೇರಾರನ್ನು ಕುರಿತು ಅಲ್ಲ, ಸಾರೆಕೊಪ್ಪದ ಬಂಗಾರಪ್ಪನವರನ್ನು ಕುರಿತು. 1932ರಲ್ಲಿ ಕಲ್ಲಪ್ಪ ಮತ್ತು ಕಲ್ಲವ್ವರ ಮಗನಾಗಿ ಜನಿಸಿದ ಬಂಗಾರಪ್ಪ ಸಹಜವಾಗಿಯೇ ಬಡತನವನ್ನು ಮೈಗೆ ಮೆತ್ತಿಕೊಂಡು ಬೆಳೆದರಾದರೂ ಅದರಿಂದ ಮಟಿದೆದ್ದು ಸಮಾಜದ ಮುಖ್ಯವಾಹಿನಿಗೆ ಬಂದ ರೀತಿ ಮಾತ್ರ ಯಾರೂ ಊಹಿಸಲಾಗದು.

'ಉಳುವವನೇ ಹೊಲದೊಡೆಯ' ಎಂಬ ಕಾನೂನನ್ನು ಅನೂಚಾನವಾಗಿ ಚಲಾವಣೆಗೆ ತರುವ ಮೂಲಕ ಹೊಸ ಸಮಾಜವಾದಕ್ಕೆ ಮುನ್ನುಡಿ ಬರೆದ ಬಂಗಾರಪ್ಪನವರು ನಂತರ ಹಿಂದಿರುಗಿ ನೋಡಿದ್ದು ಬಹಳ ಕಡಿಮೆಯೇ. ಒಂದೆಡೆ ದೀವರ ಸಮುದಾಯದಲ್ಲಿ ಅನಕ್ಷರತೆ, ಅಜ್ಞಾನ, ಅಂಧಕಾರಗಳು ತಾಂಡವವಾಡುತ್ತಿದ್ದರೆ ಇನ್ನೊಂದೆಡೆ ಭೂಮಾಲಿಕರ ದೌರ್ಜನ್ಯದಲ್ಲಿ ಆ ಸಮುದಾಯ ನಲುಗುತ್ತಿತ್ತು, ಆಗ ಆ ಜನತೆಗೆ ಬಂಗಾರಪ್ಪ ಹೊಳೆಯುವ ಸೂರ್ಯನಂತೆ ಗೋಚರಿಸತೊಡಗಿದರು.

ಕಾಗೋಡು ತಿಮ್ಮಪ್ಪನವರೊಂದಿಗೆ ಸೇರಿಕೊಂಡ 'ಬಂ' ತನ್ನ ಅನುಯಾಯಿಗಳೊಂದಿಗೆ ಪ್ರತಿಯೊಂದು ಹಳ್ಳಿಹಳ್ಳಿಯಲ್ಲಿರುವ ಗೇಣಿದಾರ ಕುಟುಂಬಗಳಿಗೆ ಅರ್ಜಿ ತುಂಬುವುದಕ್ಕೆ ಸಹಕರಿಸಿದ್ದರಲ್ಲದೆ ಯಾರೊಬ್ಬರೂ ಇದರಿಂದ ವಂಚಿತರಾಗದಂತೆ ನೋಡಿಕೊಂಡರು. ಇಂದು ಬಂಗಾರಪ್ಪನವರನ್ನು ದೇವರಂತೆ ಆರಾಧಿಸುವುದಕ್ಕೆ ಇದೊಂದು ಮಹತ್ವದ ಕಾರಣವೇ ಆಗಿದೆ.

ಉಳುವವನೇ ಹೊಲದೊಡೆಯ ಎಂಬ ಕಾನೂನಿನಷ್ಟೇ ಬಗರ್ ಹುಕುಂ ಭೂಮಿಯ ಮೇಲೆ ರೈತರಿಗೆ ಸ್ವಾಧೀನಪತ್ರ ನೀಡುವುದೂ ಬಂಗಾರಪ್ಪನವರಿಗೆ ಮುಖ್ಯವಾಗಿತ್ತು, ಆದ್ದರಿಂದಲೆ ಯಾವುದೇ ರೈತ ಕಾಡು ಕಡಿದು ಸಾಗುವಳಿ ಮಾಡುವವರಿಗೆ ಆಶ್ರಯ ನೀಡತೊಡಗಿದರು. ಇಂದೇನಾದರೂ ಗ್ರಾಮೀಣ ಪ್ರದೇಶದಲ್ಲಿ ಜನರ ಬದುಕು ತುಸು ಮೇಲ್ಮಟ್ಟದಲ್ಲಿದೆ ಎಂದರೆ ಅದಕ್ಕೆ ಬಂಗಾರಪ್ಪನವರೇ ಕಾರಣ.

ಸ್ವಾಭಿಮಾನ, ಹಠವಾದಿತನ, ಹೃದಯ ವೈಶಾಲ್ಯತೆ, ಸಂಕುಚಿತತೆ, ಜೀವನ ಪ್ರೇಮ, ಸುದೀರ್ಘ ರಾಜಕಾರಣ, ಪಕ್ಷಾಂತರ ಹೀಗೆ ಹತ್ತು ಹಲವು ವಿಷಯಗಳಲ್ಲಿ ಮಿಂಚಿ ಮರೆಯಾದವರು ಬಂಗಾರಪ್ಪ, ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿದ್ದ 'ಬಂ' ಅಧಿಕಾರಕ್ಕಾಗಿ ಹಪಾಹಪಿಸಿ ತಾವು ನಂಬಿದ್ದ ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಂಡರು. ಆ ಮೂಲಕ ಕೋಮುವಾದಿಗಳು ಇವತ್ತು ವಿಧಾನಸೌಧದಲ್ಲಿ ಕೂತು, ಹೊಟ್ಟೆ ತುಂಬಾ ಮೇಯುವುದಕ್ಕೆ ಸಹಕಾರ ಕೊಟ್ಟರು. ಈ ವಿಷಯದಲ್ಲಿ ಬಂಗಾರಪ್ಪನವರು ಕ್ಷಮೆಗೆ ಅರ್ಹರಲ್ಲ.

- ಮಂಜಣ್ಣ, ಸೊರಬ


ಬ್ರಾಹ್ಮಣಶಾಹಿ, ಗೌಡಶಾಹಿಗಳ ತೊಡರುಗಾಲಿನ ನಡುವೆ ತಳ ಸಮುದಾಯದ ಬಂಗಾರಪ್ಪ ನಾಡಿನ ಮುಖ್ಯಮಂತ್ರಿಯಾಗಿ ಬೆಳೆದುಬಂದ ಪರಿ ಪವಾಡಸದೃಶವೇ ಸರಿ. ಹಿಂದುಳಿದ ವರ್ಗದ ನಾಯಕರು ಹೆಚ್ಚೆಂದರೆ ಶಾಸಕ ಇಲ್ಲವೇ ಸಪ್ಪೆ ಇಲಾಖೆಯ ಸಚಿವ ಸ್ಥಾನ ಗಿಟ್ಟಿಸಿಕೊಂಡರೆ ಅದುವೇ ದೊಡ್ಡದು. ಅದೆಲ್ಲವನ್ನೂ ಮೀರಿ ಆನೆ ನಡೆದದ್ದೇ ದಾರಿ ಎನ್ನುವಂತೆ ಬಂಗಾರಪ್ಪ ಸೆಟೆದು ನಿಂತಿದ್ದು ಹಿಂದುಳಿದ, ಅಲ್ಪಸಂಖ್ಯಾತರ ಯುವ ರಾಜಕಾರಣಿಗಳಿಗೆ ಒಂದು ಪಾಠ. ತನ್ನ ಅಸ್ತಿತ್ವ ಮತ್ತು ಸ್ವಾಭಿಮಾನಕ್ಕೆ ಧಕ್ಕೆ ಬಂದಾಗಲೆಲ್ಲಾ ಅವರು ಯಾರಿಗೂ ಕಿಮ್ಮತ್ತು ಕೊಡದೇ ಧಿಕ್ಕರಿಸಿದ್ದಾರೆ. ಅದಕ್ಕೆ ಹಲವು ಸಾಕ್ಷಿಗಳು ನಮ್ಮ ಕಣ್ಣ ಮುಂದಿವೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಬಂಗಾರಪ್ಪ ತೀರಿದ ಸುದ್ದಿ ತಿಳಿಯುತ್ತಲೇ ಉತ್ತರ ಕರ್ನಾಟಕ ಭಾಗದ ಹಿಂದುಳಿದ ವರ್ಗದ ಸಾವಿರಾರು ಅಭಿಮಾನಿಗಳ ದಂಡೇ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿತ್ತು, ಇದು ಅವರ ಜನಪರ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಯಾವುದೇ ಸಭೆ, ಸಮಾರಂಭಗಳಲ್ಲಿ ತಮ್ಮ ಅಭಿಮಾನಿಗಳನ್ನು ಬಂಗಾರಪ್ಪ ಅತ್ಯಂತ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಮೊದಲು ಜಿಲ್ಲೆಯ ರೈತರ, ಕೂಲಿಕಾರರ ಪರಿಸ್ಥಿತಿಯನ್ನು ವಿಚಾರಿಸಿ ನಂತರ ರಾಜಕೀಯಕ್ಕೆ ಬರುತ್ತಿದ್ದರು. ಅಭಿಮಾನಿಗಳ ಹೆಸರು ಮರೆತಿದ್ದರೂ ತಮ್ಮ ಪ್ರದೇಶದ ಹೆಸರಿಡಿದು ಕೂಗಿ ಮಾತನಾಡಿಸುತ್ತಿದ್ದರು. ಅವರ ಜ್ಞಾಪಕಶಕ್ತಿ ಮತ್ತು ಔದಾರ್ಯಗುಣ ದೊಡ್ಡದು ಎಂದು ಅಭಿಮಾನಿಯೊಬ್ಬರು ಮನದುಂಬಿ ಹೇಳುತ್ತಾರೆ.

ಹಿಂದುಳಿದ ವರ್ಗದವರು ತಲೆ ಎತ್ತಿ ನಡೆಯುವಂತೆ ದಾರಿಹಾಕಿಕೊಟ್ಟ ಕೀರ್ತಿ ಬಂಗಾರಪ್ಪರಿಗೆ ಸಲ್ಲುತ್ತದೆ ಎಂದರೆ ಅತಿಶಯೋಕ್ತಿ ಅಲ್ಲ. ಪತ್ರಿಕೆಯಲ್ಲಿ ಬಂಗಾರಪ್ಪ ಅವರ ಕುರಿತ ಪ್ರಕಟವಾದ ಲೇಖನಗಳು ಬಹಳ ಹಿಡಿಸಿದವು. ಈ ಮೂಲಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದು ಬಹು ಅರ್ಥಪೂರ್ಣವಾಗಿದೆ.

- ಬಸವರಾಜ ಹಳ್ಳಿ, ಹಸಮಕಲ್ (ಸಿಂಧನೂರು)



'ಗುಡ್ ಬೈ ಬಂ' ಅಕ್ಷರ ನಮನ ಚೆನ್ನಾಗಿತ್ತು, ಆದರೂ 'ಬಂ' ಬಗ್ಗೆ ಬೇಜಾರೆಂದರೆ ನಮ್ಮ ಕರಾವಳಿಯನ್ನು ರಾಜಕೀಯವಾಗಿ ಅಲ್ಲೋಲಕಲ್ಲೋಲ ಮಾಡಿ ಕೋಮುವಾದಿಗಳ ತವರಾಗೋದಕ್ಕೆ ವೇದಿಕೆ ಒದಗಿಸಿಕೊಟ್ಟಿದ್ದು. ನಮ್ಮೂರಲ್ಲಿ 'ಬಂ' ಬಗ್ಗೆ ಬಹಳ ಅಭಿಮಾನ ಇತ್ತು, ನಾನು ಕೂಡ ಹಿಂದೆ ಕೆಸಿಪಿ ಪ್ರಚಾರದಲ್ಲಿ ಭಾಗವಹಿಸಿದ್ದೆ.

- ಸಂತೋಷ್ ಗುಡ್ಡಿಯಂಗಡಿ, ಕುಂದಾಪುರ


ಪಿ. ಲಂಕೇಶರು ಹಿಂದೆ ಬರೆದ 'ಬಂಗಾರಪ್ಪ ಮತ್ತು ನಾವು' ಲೇಖನ ಚೆನ್ನಾಗಿತ್ತು, ಮುಂದಿನ ಸಂಚಿಕೆಯಲ್ಲಿ ಅವರು ಬರೆದ ಬೇರೆ ಬೇರೆ ಲೇಖನಗಳನ್ನು ಪ್ರಕಟಿಸಿ. (ಈಗಾಗಲೇ ಮರೆಯುವ ಮುನ್ನ ಪ್ರಕಟವಾಗುತ್ತಿದೆ.)

- ಎಸ್‌ಎಂಎಸ್ ಮೂಲಕ

ಸುಲಭ ತೀರ್ಮಾನಗಳಿಗೆ ಸಿಗದ ಬಂಗಾರಪ್ಪ ಅವರ ಬದುಕಿನ ಬಗೆಗಳನ್ನು ಎಲ್ಲರಿಗಿಂತ ಚೆನ್ನಾಗಿ ನಿಮ್ಮ ತಂಡ ಬರೆದಿದೆ. ಓದುತ್ತಲೇ ಹಲವು ಟ್ರ್ಯಾಕ್ ಬದಲಿಸಿ ಫೌಲ್ ಆದ ಶಕ್ತಿವಂತ ನಾಯಕರಂತೆ 'ಬಂ' ಕಾಣುತ್ತಾರೆ.

- ಎಸ್‌ಎಂಎಸ್ ಮೂಲಕ

ದಲಿತನಾದ ಚಿತ್ರ ನಿರ್ದೇಶಕ ಮಹೇಂದರ್ ಅವರನ್ನು ಸಿಕ್ಕಾಪಟ್ಟೆ ತೆಗಳಿದ್ದೀರಿ. ಮಾಧ್ಯಮಗಳಿಗೆ ದಲಿತರು ಮಿಕವಾಗಿ ಸಿಕ್ಕಿದರೆ ಅವರ ಕತೆ ಗೋವಿಂದ. ಅಂದಹಾಗೆ, ಅಂತಹ ದಲಿತರನ್ನು 'ಬೇಟೆಯಾಡುವ' ಕ್ರಿಯೆಯಿಂದ ನೀವೂ ಕೂಡ ಹೊರತಾಗಿಲ್ಲವ ಎಂಬುದು ನಿಜಕ್ಕೂ ಬೇಸರದ ವಿಷಯ.



- ರಘೋತ್ತಮ. ಹೊ.ಬ, ಬೆಂಗಳೂರು

ಲಂಕೇಶ್ ಬಳಗದ ಎಲ್ಲರಿಗೂ ಹೊಸವರ್ಷದ ಹಾರ್ದಿಕ ಶುಭಾಶಯಗಳು ಹಾಗು ವಿಶೇಷವಾಗಿ ಗೌರಿ ಲಂಕೇಶ್ ತಂಡ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು-2011 ಪ್ರಶಸ್ತಿಗಾಗಿ ಆಯ್ಕೆಯಾದುದಕ್ಕೆ ಅಭಿನಂದನೆಗಳು.

- ರವಿ ಪುತ್ತೂರ, ಬೆಂಗಳೂರು

...ಬದಿದಂತಾಯಿತು ಒಕ್ಕಲಿಗರಿಗೆ. ಹೊಲೆಯರ ...ದೇವರು ಹೋಗುವುದೆಂದರೇನು? ಅವನಿಗೆ ...ಆಗುವುದಿಲ್ಲವೆ? ಎಂಬ ಪ್ರಶ್ನೆ ಪೀಡಿಸಿತು. ಆದರೆ ...ವಾಗಿ ವ್ಯಕ್ತಪಡಿಸಲು ಸಾಧ್ಯವಿರಲಿಲ್ಲ, ಪೊಲೀಸರು ...ಜಾತಿ ನಿಂದನೆ ಕೇಸು ಆಗಬಹುದು! ಅವರ ...ವೇ ಇದನ್ನು ವ್ಯಕ್ತಪಡಿಸಲು ಸಾಕಾಯಿತು.

...ಕೆ? ಮೈಲಿಗೆ ಆಗುತ್ತದೆ ಅಂತಾನ್ಯಾ?' ಒಬ್ಬ ಕೆಣಕಿದ. ...ವ್ಯಂಗ್ಯ ತುಂಬಿತ್ತು.

...ಕನಲೇ ಆದಕೇಯ' ಎಂದು ಕನಲಿದ ಎದುರು ...ರ್ಯ ಕುವರ.

...ರು ಕೊಟ್ಟ ಬೆಳ್ಳಿ ಬಸವಣ್ಣನ್ನ ಆ ಗುಡಿ ಒಳಗೆ ...ಬಿಡಿದೀರಲ್ಲ? ಅದು ಮೈಲಿಗೆ ಅಲ್ವ?'

...ಮು ಅಂತ ಯಾವ್ನೋನು ಕೇಳಿದ್ದೋನು?'

...ಕ್ಕೋಕನೊ. ಒಳೀಕೆ ಹೆಂಗೆ ಇಟ್ಕಂಡ್ರಿ?'

...ಗ ಯುವಕರ ಗುಂಪು ಕೋಪದಿಂದ ...ತ್ತು, ಆ ಸಮಯದಲ್ಲಿ ಅಂತಹ ಮಾತೆ?

...ವ್ವುನ್ ಬಸವಣ್ಣನ್ಯಾ ಅಡ' ಎಂದವನೇ ...ರ್ತಿ ವೀರಭದ್ರೇಶ್ವರನ ಮುಂದೆ ಗಂಭೀರವಾಗಿ ...ಹೊಲೇರ ಬೆಳ್ಳಿ ಬಸವಣ್ಣನನ್ನ ತೆಗೆದು ಪಲ್ಲಕ್ಕಿಯಿಂದ ...ಸಾಕಿದ!

...ಯಾವ ಮಾಯದಲ್ಲೋ ವೀರಭದ್ರಸ್ವಾಮಿಗೆ ...ಕೈಮುಗಿಯುತ್ತಿದ್ದ ಎರಡೂ ಕೋಮಿನ ಭಕ್ತರ ...ಡಲಿ, ಮಚ್ಚು, ದೊಣ್ಣೆಗಳಿಂದ ವಿಜೃಂಭಿಸುತ್ತಿದ್ದವು! ...

*****

...ಜಿನ ಬಳಿ ನನ್ನೂರ ಯುವಕರು ಸಿಕ್ಕಿದರು. ...ಒಕ್ಕಲಿಗರು ಜೊತೆ ಜೊತೆಯಲ್ಲೇ ಇದ್ದರು.

...ಮ್ಮ ಹೇಗಿದೆ ಊರು?' ಕೇಳಿದೆ.

...ೀ ಆದೆ ಸಾ' ಅಂದರು.

...ಒಳಕ್ಕೆ ಹೋಗಿದ್ರಾ?'

...ನು ಕೆಲ್ಸ ಸಾ ನಮ್ಗೆ?'

...ರದರ್ಶನಕ್ಕೆ ಕಣ್ರಯ್ಯ.'

...ಯಾಕೆ ಹೋಗಾನ ಸಾ. ಆ ಬಡ್ಡಿ ಹೈದನಿಗೆ ...ಮ್ಮತಾವ್ಕೆ ಅವುನೇ ಬರಲಿ ಸಾ' ಅಂದರು ಅವರು!

...ಕ್ಲಬ್ ಪ್ರಶಸ್ತಿಯೊಂದಿಗೆ 2012ಅನ್ನು ...ವಂತಾದದ್ದು ಅತೀವ ಸಂತಸ ನೀಡಿದೆ. ಪತ್ರಿಕೆ ...ರ್ದಿಕ ಅಭಿನಂದನೆಗಳು. ಇದು ಪತ್ರಿಕೆಯ ...ಕ ಹಾಗು ಜನಪರ ನಿಲುವಿಗೆ ಸಂದ ...ದೆ.

... ಖಿ.ಒಕ್ಕುಂದ, ಧಾರವಾಡ

...ಲಂಕೇಶ ಬಳಗಕ್ಕೆ ಹೊಸ ವರ್ಷದ ...ಗಳು. ನಿಮ್ಮ ಪತ್ರಿಕೆ ಬರೀ ಓದುವುದು ..., ನಿಮ್ಮ ಹಲವು

...ಂಕೇಶ್

...ನಿಲುವುಗಳನ್ನು ನಾನು ಕನಸಿನಲ್ಲೂ ...ಳ್ಳುತ್ತೇನೆ. ಕಳೆದ ಐದು ವರ್ಷಗಳಿಂದ ...ನ್ನು ಓದುತ್ತಿದ್ದೇನೆ. ಜಗತ್ತಿನಲ್ಲಿ ಎಲ್ಲಿ ಏನೇ ತಪ್ಪು ...ದರ ನೋವನ್ನು ಮರೆಯಬೇಕೆಂದರೆ ನಿಮ್ಮ ...ದ ಮಾತ್ರ ಸಾಧ್ಯ. ಹೊಸ ವರ್ಷದಲ್ಲಿ ನಿಮ್ಮ ...ಳ್ಳೆಯದಾಗಲಿ ಎಂದು ಆಶಿಸುತ್ತೇನೆ. ...ೂ ನಿಮ್ಮ ತಂಡ ಅದ್ಭುತ.

- ಅಖಿಲ್, ಬೆಳ್ತಂಗಡಿ

...ಹಜಾರೆ ಅವರ ತಂಡ ಆರೆಸ್ಸೆಸ್ ಮತ್ತು ...ಮುಖವಾಡವಷ್ಟೇ. ಅವರ ತಂಡ ಪ್ರಜಾತಂತ್ರ ...ಆಗಿದ್ದು ಅದನ್ನು ಎನ್‌ಜಿಓಗಳು ಮತ್ತು ...ಟ್ ಕಂಪನಿಗಳು ಹಿಂದಿನಿಂದ ನಡೆಸುತ್ತಿವೆ. ...ಗಿ ನಮ್ಮ ಸಮಾಜದಲ್ಲಿ ಧರ್ಮ ಮತ್ತು ...ಡುವೆ ಬಿರುಕು ಮೂಡಲಿದೆ. ಇದರ ಬಗ್ಗೆ ...ಜಾಗೃತಗೊಳ್ಳಬೇಕು.


- ಕೆ.ಎಸ್.ರವಿಕುಮಾರ್, ಹಾಸನ

ನಮ್ಮ ಕಚೇರಿ ...ಳಾಸಕ್ಕೆ ಮತ್ತು ಈ-ಮೇಲ್ ...ಜೊತೆಗೆ ಇನ್ನು ಮುಂದೆ ನಿಮ್ಮ ಪ್ರತಿಕ್ರಿಯೆಗಳನ್ನು ...080331427 ನಂಬರ್‌ಗೂ ...ಕ್ಷವಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಅಣ್ಣಾ ವಿರುದ್ಧ ಬೋಸ್ ಬಾಂಬ್!

ಬಾಲಿವುಡ್ ನಟ ರಾಹುಲ್ ಬೋಸ್ ತನ್ನ ನಟನಾ ಸಾಮರ್ಥ್ಯಕ್ಕೆ ಮಾತ್ರವಲ್ಲದೆ ಸಮಾಜ ಕಲ್ಯಾಣ ಕೆಲಸಕ್ಕೂ ಖ್ಯಾತಿ ಪಡೆದಿರುವವರು. ಕೋಮು ಸೌಹಾರ್ದದ ಬಗ್ಗೆ, ಬಡಮಕ್ಕಳ ಏಳ್ಗೆಯ ಬಗ್ಗೆ ಬೋಸ್ ತುಂಬಾ ಕಾಳಜಿ ಹೊಂದಿದ್ದಾರೆ ಮತ್ತು ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಅವರ ಆಂದೋಲನವನ್ನು ಬಾಲಿವುಡ್‌ನ ಇತರೆ ನಟನಟಿಯರು ಅಂಧರಾಗಿ ಬೆಂಬಲಿಸಿದಾಗ ಅದನ್ನು ಟೀಕೆ ಮಾಡಿದ ಏಕೈಕ ಬಾಲಿವುಡ್ ನಟ ರಾಹುಲ್ ಬೋಸ್.



ಮೊನ್ನೆ ರಾಹುಲ್ ಬೋಸ್ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ:

"ನಾನು ಅಣ್ಣಾ ಹಜಾರೆ ಅವರ ಸಿದ್ಧಾಂತ ಮತ್ತು ಅವರ ಕಾರ್ಯ ನಿರ್ವಹಿಸುವ ಶೈಲಿಯನ್ನು ವಿರೋಧಿಸುತ್ತೇನೆ. ಯಾಕೆಂದರೆ ಅವರ ಸಿದ್ಧಾಂತ ಪ್ರಜಾಸತ್ತಾತ್ಮಕವಾದುದ್ದಲ್ಲ ಮತ್ತು ಅಂತರಾಳದಲ್ಲಿ ಅದು ಅಸಹನೆಯನ್ನು ಹೊಂದಿದೆ. ನನ್ನ ಪ್ರಕಾರ ಬದುಕಿನಲ್ಲಿ ಮುಖ್ಯವಾದ ಮೂರು ಅಂಶಗಳು ಸಮಾನತೆ, ಅನುಕಂಪ ಮತ್ತು ಸಹಿಷ್ಣುತೆ. ಇವುಗಳಲ್ಲಿ ನಾನು ಎಂದೂ ಒಂದನ್ನೂ ಬಿಟ್ಟುಕೊಡುವುದಿಲ್ಲ. ಯಾವ ಲೋಕದಲ್ಲಿ ಜನರು ಪರಸ್ಪರ ಸಹಿಷ್ಣುತೆ ಹೊಂದಿಲ್ಲವೋ ಅದು ಲೋಕವೇ ಅಲ್ಲ. ಎಲ್ಲಿ ಜನರು ಇತರರತ್ತ ನೆರವಿನ ಕೈ ಚಾಚುವುದಿಲ್ಲವೋ ಆ ಲೋಕ ಉಳಿಯುವುದಿಲ್ಲ. ಈ ಹಿನ್ನೆಲೆಯಲ್ಲಿ ಅಣ್ಣಾ ಹಜಾರೆ ಅವರ ಹೋರಾಟವಾಗಲಿ, ಛತ್ತೀಸ್‌ಗಢದ ಆದಿವಾಸಿಗಳ ಹೋರಾಟವಾಗಲಿ, ಮತ್ತಿನ್ಯಾವುದೇ ಹೋರಾಟವಾಗಲಿ ನಾವು ಮೊದಲು ಕೇಳಿಕೊಳ್ಳಬೇಕಾದ ಪ್ರಶ್ನೆಗಳು ಆ ಹೋರಾಟಗಳು ತಮ್ಮ ಅಂತರಾಳದಲ್ಲಿ ಸಮಾನತೆ, ಅನುಕಂಪ ಮತ್ತು ಸಹಿಷ್ಣುತೆಯನ್ನು ಹೊಂದಿದ್ದಾವೆಯೇ ಎಂದು. ಅಣ್ಣಾ ಹಜಾರೆ ಅವರ ಆಂದೋಲನದಲ್ಲಿ ಈ ಮೂರು ಅಂಶಗಳು ನನಗೆ ಕಂಡು ಬರಲಿಲ್ಲವಾದ್ದರಿಂದ ನಾನು ಅವರ ಹೋರಾಟವನ್ನು ಬೆಂಬಲಿಸುವುದಿಲ್ಲ."

ಕೊಲವೆರಿಗಾಗಿ ಟೈಂ ವೇಸ್ಟ್ ಮಾಡ್ಬೇಡಿ!





'ವೈ ದಿಸ್ ಕೊಲವೆರಿ ಡಿ' ಹಾಡು ಜಗತ್ತಿನಾದ್ಯಂತ ಜನಪ್ರಿಯವಾದ ಹಿನ್ನೆಲೆಯಲ್ಲೇ ಅದರ ವಿರುದ್ಧ ಟೀಕೆಗಳೂ ಕೇಳಿಬರುತ್ತಿವೆ. ಅದೊಂದು ಬಂಡಲ್ ಹಾಡು, ಅದರ ಸಾಹಿತ್ಯ ಬರಿ ಓಳು, ಧನುಶ್ ದನಿ ಕೆಟ್ಟದಾಗಿದೆ ಎಂದು ಕೆಲವರು ಟೀಕಾ ಪ್ರಹಾರವನ್ನೇ ಮಾಡಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಧನುಶ್ "ದಯವಿಟ್ಟು ಈ ಹಾಡನ್ನು ಕುರಿತು ಇಷ್ಟೊಂದು ಅಧ್ಯಯನ ಮಾಡಬೇಡಿ. ಇದು ಅಷ್ಟು ಮುಖ್ಯವಾದ ಹಾಡಲ್ಲ, ಇದು ದೇಶಭಕ್ತಿಯ ಹಾಡಲ್ಲ, ತಾಯಿಯ ಪ್ರೀತಿ ಕುರಿತ ಹಾಡಲ್ಲ, ಮಕ್ಕಳನ್ನು ರಕ್ಷಿಸುವ ಹಾಡಲ್ಲ, ಈ ಹಾಡಿನ ಮೇಲೆ ತಮ್ಮ ಸಮಯವನ್ನು ವೇಸ್ಟ್ ಮಾಡಬೇಡಿ..." ಎಂದಿದ್ದಾನೆ.

ಆತನ ಮಾತು ಸರಿಯಾಗಿದೆಯಲ್ಲವೇ?

ಗೀವ್ ಅಂಡ್ ಟೇ(ಲೋ)ಕ್ ಪಾಲಿಸಿ

ಇತ್ತೀಚೆಗೆ ಮುಂಬೈಯಲ್ಲಿ ಅಣ್ಣಾ ಹಜಾರೆ ಅವರು ಲೋಕಪಾಲ್ ಮಸೂದೆಗೆ ಆಗ್ರಹಿಸಿ ಉಪವಾಸ ನಿರಶನ ಕೂತಾಗ ಅವರನ್ನು ಬೆಂಬಲಿಸಿ ತಾವೂ ಉಪವಾಸ ಕೂರುವುದಕ್ಕೆ ಹಲವು ತಮಿಳರು ಚೆನ್ನೈನಲ್ಲಿ ಸಜ್ಜಾದರು. ಆಗ ಅವರು ಸೂಪರ್ ಸ್ಟಾರ್ ರಜನೀಕಾಂತ್ ಅವರ ಪತ್ನಿ ಲತಾ ಅವರನ್ನು ಸಂಪರ್ಕಿಸಿದರು. ಅವರ ಅಹವಾಲನ್ನು ಕೇಳಿದ ಲತಾ ಅವರು ರಜನೀಕಾಂತ್ ಚೆನ್ನೈಯ ಪ್ರತಿಷ್ಠಿತ ಕೂಡಂಬಕ್ಕಂ ಪ್ರದೇಶದಲ್ಲಿ ನಿರ್ಮಿಸಿರುವ ರಾಘವೇಂದ್ರ ಕಲ್ಯಾಣಮಂಟಪವನ್ನೇ ಅಣ್ಣಾ ಬೆಂಬಲಿಗರಿಗೆ ಪುಕ್ಕಟೆಯಾಗಿ ಕೊಟ್ಟರು. ಪರಿಣಾಮವಾಗಿ ಮತ್ತೊಂದು 'ರಜನೀ ಜೋಕ್' ಹುಟ್ಟಿಕೊಂಡಿತು. ಆ ಜೋಕ್ ಹೀಗಿದೆ:





"ಉಪವಾಸ ನಿರಶನಕ್ಕೆ ರಜನೀ ಕಲ್ಯಾಣಮಂಟಪವನ್ನು ನೀಡಿದರು. ಪ್ರತಿಫಲವಾಗಿ ಲೋಕಪಾಲ್ ಮಸೂದೆಯು ರಜನೀ ಅವರಿಗೆ ಬೆಂಬಲವನ್ನು ಸೂಚಿಸಿತು!"


ಒನ್ ಲೈನ್ ಸ್ಟೋರಿ!




* ಇತ್ತೀಚೆಗೆ ನಿಧನ ಹೊಂದಿದ ತುಷಾರ್ ರಂಗನಾಥ್ ಬಗ್ಗೆ ಅನೇಕ ಹೊಸ ಹೀರೋಗಳು, ನಿರ್ದೇಶಕರು 'ಪ್ರಾಣಮಿತ್ರ... ಜೀವದ ಗೆಳೆಯ...' ಎಂದೆಲ್ಲಾ ಹೇಳಿಕೊಳ್ಳುತ್ತಿದ್ದಾರೆ. ರಂಗನಾಥರ ಅಂತಿಮ ಸಂಸ್ಕಾರ ನಡೆದಾಗ ದುನಿಯಾ ವಿಜಿ ಮತ್ತು ನಿರ್ದೇಶಕ ಪ್ರೇಮ್ ನಡುವೆ 'ಅಮ್ಮ-ಅಕ್ಕ' ಲೆವೆಲ್ಲಿನಲ್ಲಿ ಗಲಾಟೆ ಪ್ರಾರಂಭವಾಗಿ ಅದು ಕೈಕೈ ಮಿಲಾಯಿಸುವ ತನಕವೂ ಹೋಯಿತು.



ಅದೇನೇ ಇರಲಿ, ರಂಗನಾಥ್ ಅವರ ತಾಯಿಗೆ ನೆರವು ನೀಡುವ ವಿಚಾರದಲ್ಲಿ ಪ್ರಚಾರಪ್ರಿಯ ಪ್ರೇಮ್ ಎಲ್ಲರಿಗಿಂತ ಒಂದಿಷ್ಟು ಮಾನವೀಯವಾಗಿ ನಡೆದುಕೊಂಡಿದ್ದಾರೆ. ರಂಗಣ್ಣ ಚಿಕಿತ್ಸೆ ಪಡೆಯುತ್ತಿದ್ದ ಫೋರ್ಟಿಸ್ ಆಸ್ಪತ್ರೆಯ ಅರವತ್ತು ಸಾವಿರ ರೂಪಾಯಿಯ ಬಿಲ್‌ಅನ್ನು ಕಟ್ಟಿದರು ಪ್ರೇಮ್. ಜೊತೆಗೆ 'ಪ್ರೇಮ್ ಅಡ್ಡ' ಚಿತ್ರಕ್ಕಾಗಿ ರಂಗನಾಥ್ ಬರೆದಿರುವ ಹಾಡುಗಳ ಸಂಭಾವನೆಯ ಬಾಬ್ತು ಒಂದು ಲಕ್ಷ ರೂಪಾಯಿಗಳನ್ನು ಆತನ ತಾಯಿಗೆ ಕೊಟ್ಟರು. ಹೀಗಾಗಿ ಈ ಬಾರಿ ಈ ಗಿಮಿಕ್ ರಾಜನನ್ನು ಗ್ರೇಟ್ ಎನ್ನಲೇ ಬೇಕು!



* "ಹಾಡುಗಳನ್ನು ಸಮಯಕ್ಕೆ ಸರಿಯಾಗಿ ಕೊಡದೇ ಪರದಾಡಿಸುವ ಗುರುಕಿರಣ್‌ಗೆ ನಾಳೆ ಆಡಿಯೋ ರಿಲೀಸ್ ಎಂದರೂ ಸ್ವಲ್ಪವೂ ಟೆನ್ಷನ್ ಆಗೋದಿಲ್ಲ, ತಾವು ಮಾತ್ರ ಕೂಲ್ ಆಗಿದ್ದು ಮಿಕ್ಕೆಲ್ಲರಿಗೂ ಟೆನ್ಷನ್ ಕೊಡೋದು ಗುರೂ ಜಾಯಮಾನ" ಎಂಬುದು 'ವಿಲನ್' ಚಿತ್ರದ ನಿರ್ಮಾಪಕ ಯೋಗೇಶ್ ಹುಣಸೂರು ಅಭಿಪ್ರಾಯ.



* ನಿರ್ದೇಶಕರ ಸಂಘದ ಅಧ್ಯಕ್ಷರಾಗಿರುವ ಎಂ.ಎಸ್.ರಮೇಶ್ 'ವಿಲನ್' ಸಿನಿಮಾದೊಂದಿಗೆ ಹತ್ತು ಚಿತ್ರಗಳ ನಿರ್ದೇಶನವನ್ನು ಪೂರೈಸಿದ್ದಾರೆ. ಈ ಹತ್ತೂ ಚಿತ್ರಕ್ಕೂ ಗುರುಕಿರಣ್ ಅವರೇ ಸಂಗೀತ ನಿರ್ದೇಶನ ಮಾಡಿ ದಾಖಲೆ ಮಾಡಿದ್ದಾರೆ. ಗುರುವಿನ ಕಾರ್ಯವೈಖರಿ ಕಂಡು ಒಂದು ಚಿತ್ರಕ್ಕೇ ಸುಸ್ತೆದ್ದುಹೋಗುವವರ ಮಧ್ಯೆ ರಮೇಶ್ ಹತ್ತು ಚಿತ್ರಗಳಲ್ಲಿ ಗುರುವನ್ನು ಹೇಗೆ ಸಹಿಸಿಕೊಂಡಿದ್ದಾರೋ? ಗುರುಭ್ಯೋನಮಃ!

* ಸುದೀಪ್, ಗಣೇಶನಂತೆ ಈಗ ಹಲವು ಹೀರೋಗಳು ನಿರ್ಮಾಪಕರಾಗುತ್ತಿದ್ದಾರೆ. ಈಗ ಆ ಪಟ್ಟಿಗೆ ಶ್ರೀನಗರ ಕಿಟ್ಟಿ ಕೂಡಾ ಸೇರಿಕೊಂಡಿದ್ದಾರೆ. ಎಲ್ಲ ಹೀರೋಗಳು ತಮ್ಮ ಚಿತ್ರಗಳನ್ನು ತಾವೇ ನಿರ್ಮಿಸುತ್ತಿದ್ದರೆ ಕಿಟ್ಟಿ ಮಾತ್ರ ಕಮರ್ಷಿಯಲ್ ಚಿತ್ರದ ಬದಲಾಗಿ ಮಕ್ಕಳ ಚಿತ್ರಕ್ಕೆ ಕೈಯಿಟ್ಟಿದ್ದಾರೆ. 'ಬಾಲ್‌ಪೆನ್' ಹೆಸರಿನ ಈ ಚಿತ್ರವನ್ನು ಶಶಿಕಾಂತ್ ನಿರ್ದೇಶಿಸುತ್ತಿದ್ದಾರೆ.

* "ವಿದ್ಯಾರ್ಥಿಗಳ ಕೊರತೆಯ ಕಾರಣದಿಂದ ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚುತ್ತಿದೆ. ಪೋಷಕರೇ ತಮ್ಮ ಮಕ್ಕಳನ್ನು ಕನ್ನಡಶಾಲೆಗಳಿಗೆ ಕಳುಹಿಸಲು ತಯಾರಿಲ್ಲ ಎಂದಮೇಲೆ ಅಂತಹ ಶಾಲೆಗಳ ಅವಶ್ಯಕತೆಯಾದರೂ ಏಕೆ? ಮುಚ್ಚಲಿ ಬಿಡಿ. ಬಿಸಿಯೂಟದಂತಹ ಮಹತ್ವದ ಯೋಜನೆಗಳು ಕೂಡ ಮಕ್ಕಳನ್ನು ಸರ್ಕಾರಿ ಶಾಲೆಯೆಡೆಗೆ ಸೆಳೆಯಲು ವಿಫಲವಾಗಿವೆ ಎಂದಮೇಲೆ ಕನ್ನಡ ಶಾಲೆಗಳನ್ನು ಮುಚ್ಚುವುದರಲ್ಲಿ ತಪ್ಪೇನಿದೆ" - ಇದು ಮಂಡ್ಯದ ಗಂಡು ಅಂಬರೀಷ ಅವರ ಮುತ್ತಿನಂಥಾ ಮಾತುಗಳು! ನಂಬಲೇಬೇಕು!!

ಕೈ ಎತ್ತಿದಳು ಸ್ವಾತಿ!

ಡಬ್ಬಿಂಗ್‌ಗೆ ಕೊನೇಕ್ಷಣದಲ್ಲಿ ಕೈ ಕೊಡುವ ನಟನಟಿಯರು ನಮ್ಮಲ್ಲಿ ಸಾಕಷ್ಟು ಮಂದಿ ಇದ್ದಾರೆ. ಅಂಥವರಿಗೆ ಕಾದುಕಾದು ಕೊನೆಗೆ ಅವರ ದನಿಯನ್ನು ಹೋಲುವ ಡಬ್ಬಿಂಗ್ ಆರ್ಟಿಸ್ಟ್‌ಗಳಿಂದ ನಿರ್ಮಾಪಕರು, ನಿರ್ದೇಶಕರು ಡಬ್ ಮಾಡಿಸುತ್ತಾರೆ. ಹೀಗೆ ಕೈಕೊಡುವವರ ಪಟ್ಟಿಯಲ್ಲಿ ಸಾಧುಕೋಕಿಲಾ ಮತ್ತು ಅನಂತನಾಗ್ ಅಗ್ರ ಸ್ಥಾನ ಪಡೆದಿದ್ದಾರೆ.

ಇಂತಹ ಕೈಕೊಡುವ ಖಯಾಲಿಗೆ ಈಗ ಚಿಲ್ಟು ಪಿಲ್ಟು ನಾಯಕಿಯರೂ ಬೀಳುತ್ತಿದ್ದಾರೆ. ಸಿನಿಮಾ ನಟನೆಗಿಂತ 'ಪ್ಯಾಕೇಜ್ ಟ್ರಿಪ್ಪು'ಗಳಲ್ಲೇ ಬ್ಯುಸಿಯಾಗಿರುವ ಸ್ವಾತಿ ಎಂಬ ನಟಿ ಈವರೆಗೆ ನಟಿಸಿರುವುದು 'ಹುಂಜ', 'ರಾಜಿ' ತರಹದ 'ಎ' ಕ್ಲಾಸ್ ಚಿತ್ರಗಳಲ್ಲಷ್ಟೇ. ಆದರೂ ಈ ಅಭಿನವ ಸತಿ ಸಾವಿತ್ರಿ ಸ್ವಾತಿ ಡಬ್ಬಿಂಗ್‌ಗೆ ಕೈ ಎತ್ತುವ ಚಾಳಿ ಬೆಳೆಸಿಕೊಂಡಿದ್ದಾಳೆ!

ಉಮೇಶ್ ಬಾದರದಿನ್ನಿ ನಿರ್ದೇಶನದ 'ಬಿಡಲಾರೆ ಎಂದೂ ನಿನ್ನಾ' ಚಿತ್ರದಲ್ಲಿ ಸ್ವಾತಿ ನವೀನ್ ಕೃಷ್ಣನ ಜೋಡಿ. ಒಂದು ರೀತಿಯಲ್ಲಿ ಎರಡನೇ ನಾಯಕಿ. ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡು ಈಗ ಡಬ್ಬಿಂಗ್ ಹಂತದಲ್ಲಿದೆ. ಆಗ ನಿರ್ದೇಶಕ ಬಾದರದಿನ್ನಿ ಸ್ವಾತಿಗೆ ಫೋನ್ ಮಾಡಿದ್ದಾರೆ. ಒಂದಲ್ಲ, ಎರಡು ಬಾರಿಯಲ್ಲ, ಬರೋಬ್ಬರಿ ಹತ್ತು ಬಾರಿ ಆಕೆಗೆ ಕಾಲ್ ಮಾಡಿದರೂ ಸ್ವಾತಿ ಅವನ್ನು ರಿಸೀವ್ ಮಾಡಿಲ್ಲ, ಕೊನೆಗೆ ಬಾದರದಿನ್ನಿ "ನಿಮಗಾಗಿ ನಾನು ಸ್ಟೂಡಿಯೋದಲ್ಲಿ ಬೆಳಗ್ಗೆಯಿಂದ ಕಾಯುತ್ತಿದ್ದೇನೆ. ಹೀಗೆ ಕೈಕೊಟ್ಟರೆ ಹೇಗೆ" ಎಂದು ಎಸ್ ಎಂ ಎಸ್ ಕಳುಹಿಸಿದ್ದಾರೆ. ಅಷ್ಟೇ ಅಲ್ಲ, ಬಾಲಾಜಿ ಸ್ಟೂಡಿಯೋದ ಓನರ್ ಕರಿಸುಬ್ಬು ಅವರೂ ಸ್ವಾತಿಗೆ ಫೋನ್ ಮಾಡಲು ನೋಡಿದ್ದಾರೆ. ಸ್ವಾತಿ ಕರಿಸುಬ್ಬು ಅವರ ಫೋನ್‌ಅನ್ನೂ ಸ್ವೀಕರಿಸಿಲ್ಲ, ಅವರೂ ಸಿಟ್ಟುಮಾಡಿಕೊಂಡು ಆಕೆಗೆ ಮೆಸೇಜ್ ಹಾಕಿದ್ದಾರೆ. ಅದನ್ನು ನೋಡಿದ ಸ್ವಾತಿ ಕೂಡಲೇ ಕರಿಸುಬ್ಬು ಅವರಿಗೆ ಫೋನ್ ಮಾಡಿ, "ನನ್ನ ಆರೋಗ್ಯ ಸರಿ ಇಲ್ಲ, ಹೀಗಾಗಿ ಡಬ್ಬಿಂಗ್‌ಗೆ ಬರಲು ಆಗುತ್ತಿಲ್ಲ" ಎಂದು ಕಣ್ಣೀರಿಟ್ಟಿದ್ದಾಳೆ. ಆನಂತರ ಬಾದರದಿನ್ನಿ ಅವರಿಗೂ ಫೋನ್ ಮಾಡಿ "ನಾನು ಗೋವಾದಲ್ಲಿ ಇದ್ದೇನೆ. ಡಬ್ಬಿಂಗ್‌ಗೆ ಬರಲು ಸಾಧ್ಯ ಇಲ್ಲ" ಎಂದು ಕಾಗೆ ಹಾರಿಸಿದ್ದಾಳೆ. ಇದರಿಂದ ಬೇಸತ್ತ ಬಾದರದಿನ್ನಿ ಡಬ್ಬಿಂಗ್ ಆರ್ಟಿಸ್ಟ್ ಒಬ್ಬರನ್ನು ಕರೆಸಿ, ಸ್ವಾತಿಯ ಪಾತ್ರಕ್ಕೆ ವಾಯ್ಸ್ ಕೊಡಿಸಿದ್ದಾರೆ!

ಅದೇನೇ ಇರಲಿ, ಸ್ವಾತಿ ಹೀಗೇ ಮಾಡುತ್ತಾ ಹೋದರೆ ಮುಂದೊಂದು ದಿನ ಆಕೆ ಸಣ್ಣಪುಟ್ಟ ಅವಕಾಶಗಳನ್ನೂ ಕಳೆದುಕೊಂಡು ಬರಿಗೈಲಿ ನಿಲ್ಲಬೇಕಾಗುತ್ತದೆ ಎಂದು ಆಕೆಗೆ ಯಾರಾದರೂ ಹೇಳಬೇಕಿದೆ...



Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 18-01-2012 RNI No. KARKAN2005/14

ತಾರಾಮಣಿಗಳ ಬಿಕಿನಿ ಸಮರ!

ಓಂದೆಡೆಯಿಂದ ಚಿತ್ರರಂಗದ ಆಜನ್ಮ ವೈರಿಗಳಂತಿದ್ದ ದರ್ಶನ್ ಮತ್ತು ಸುದೀಪ್ ಈಗ ತಮ್ಮ ವೈರತ್ವವನ್ನು ಮರೆತು ಒಂದಾಗಿರುವ ಸಿಹಿ ಸುದ್ದಿ ಬಂದಿರುವ ಸಂದರ್ಭದಲ್ಲೇ ಇನ್ನೊಂದೆಡೆಯಿಂದ ಚಿತ್ರರಂಗದ ನಾಯಕಿಯರು ಪರಸ್ಪರ ಕಚ್ಚಾಡುತ್ತಿರುವ ಕಹಿ ಸುದ್ದಿಯೂ ಬಂದಿದೆ.

ಈಗ ಕಚ್ಚಾಡಿಕೊಳ್ಳುತ್ತಿರುವ ನಟಿಯರು ನಿಧಿ ಸುಬ್ಬಯ್ಯ, ಐಂದ್ರಿತಾ ರೈ ಮತ್ತು ರಾಗಿಣಿ. ಹಾಗೆಯೇ ಇವರು ಕಚ್ಚಾಡುತ್ತಿರುವುದು ಬಿಕಿನಿ ಧರಿಸುವ ಬಗ್ಗೆ. ಆದ್ದರಿಂದ ಇದನ್ನು 'ಬಿಕಿನಿ ಸಮರ' ಎಂದು ಕರೆಯಬಹುದೋ ಏನೋ?

ಇದೆಲ್ಲ ಪ್ರಾರಂಭವಾಗಿದ್ದು ಹೀಗೆ:

ಸಿ.ಸಿ.ಎಲ್. ಕ್ರಿಕೆಟ್ ಪಂದ್ಯಾವಳಿಯ ಕ್ಯಾಲೆಂಡರ್‌ಗಾಗಿ ಕನ್ನಡದ ನಾಯಕಿಯರಾದ ಐಂದ್ರಿತಾ ರೈ ಮತ್ತು ನಿಧಿ ಸುಬ್ಬಯ್ಯ ಬಿಕಿನಿ ಧರಿಸಿ ಫೋಟೋಗ್ರಾಫರ್‌ಗೆ ಪೋಸ್ ಕೊಟ್ಟಿರುವುದು ಈಗಾಗಲೇ ನಿಮಗೆಲ್ಲ ಗೊತ್ತಿರುವ ವಿಚಾರ. ಇದನ್ನು ಕುರಿತು ಇತ್ತೀಚೆಗೆ ಕೆಲವು ಪತ್ರಕರ್ತರು ಕನ್ನಡ ಚಿತ್ರರಂಗದ ಮತ್ತೊಬ್ಬ ನಾಯಕಿ ರಾಗಿಣಿಯನ್ನು "ನಿಮ್ಮ ಸಹೋದ್ಯೋಗಿಗಳು ಈ ರೀತಿ ಬಿಕಿನಿ ಧರಿಸುವ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದ್ದೇ ತಡ, ಆಕೆ ನಿಧಿ ಮತ್ತು ಐಂದ್ರಿತಾ ವಿರುದ್ಧ ನಿರರ್ಗಳವಾಗಿ ತನ್ನ ಅಭಿಪ್ರಾಯ ಮಂಡಿಸಿದಳು.


ಐಂದ್ರಿತಾ
ಪ್ರಿಯಮಣಿ

ಅವತ್ತು ರಾಗಿಣಿ ಆಡಿದ ಕೆಲವು ನುಡಿ ಮುತ್ತುಗಳು ಹೀಗಿದ್ದವು: "ನಾನು ಅವರಿಬ್ಬರಿಗಿಂತ ಆರು ವರ್ಷ ಚಿಕ್ಕವಳು. ನಾನೇ ಬಿಕಿನಿ ಧರಿಸುತ್ತಿಲ್ಲ, ಇವರು ಈ ವಯಸ್ಸಿನಲ್ಲಿಯಾಕೆ ಹೀಗೆ ಮಾಡಿದರೋ ಗೊತ್ತಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ಅವರು ಚಿತ್ರಗಳಲ್ಲಿ ನಟಿಸುವಾಗ ಪಾತ್ರಕ್ಕೆ ಅಗತ್ಯವಿದ್ದರೆ ಬಿಕಿನಿ ಧರಿಸಿದರೆ ತಪ್ಪೇನಿಲ್ಲ. ಆದರೆ ಸಿನಿಮಾದ ಬದಲು ಕ್ಯಾಲೆಂಡರ್‌ಗೆ ಈ ರೀತಿ ಪೋಸ್ ಕೊಡುವ ಅಗತ್ಯವೇನಿತ್ತೋ ಗೊತ್ತಿಲ್ಲ. ಹಾಗೆ ನೋಡಿದರೆ ಆ ಕ್ಯಾಲೆಂಡರ್‌ನಲ್ಲಿ ಈ ಇಬ್ಬರು ಕನ್ನಡತಿಯರನ್ನು ಬಿಟ್ಟರೆ ಉಳಿದ ಯಾರೂ ಬಿಕಿನಿ ಧರಿಸಿಲ್ಲ. ಉದಾಹರಣೆಗೆ ತಮಿಳಿನ ಶ್ರೇಯಾ ಇವರಿಬ್ಬರಿಗಿಂತಲೂ ಒಳ್ಳೆಯ ಮೈಕಟ್ಟನ್ನು ಹೊಂದಿದ್ದಾಳೆ. ಆದರೂ ಸಹ ಆಕೆ ಬಿಕಿನಿ ಧರಿಸುವ ಮನಸ್ಸು ಮಾಡಿಲ್ಲ. ಹೀಗಾಗಿ ಇಬ್ಬರು ಕನ್ನಡದ ನಾಯಕಿಯರು ಮಾತ್ರ ಈ ರೀತಿ ಈಜುಡುಗೆಯಲ್ಲಿ ಕಾಣಿಸಿಕೊಂಡಿರುವುದು ಬಹುಶಃ ಬೇರೆ ಭಾಷೆಯವರ ದೃಷ್ಟಿಯಲ್ಲಿ ಕನ್ನಡ ಚಿತ್ರರಂಗದ ಗೌರವವನ್ನು ಗೌಣವಾಗಿಸಿದೆ ಎಂದೆನಿಸುತ್ತಿದೆ. ಇಷ್ಟಾಗಿಯೂ ಇದು ಅವರವರ ಖಾಸಗಿ ವಿಷಯ. ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ, ಆದರೆ ನೀವು ಪ್ರಶ್ನೆ ಕೇಳಿದ್ದರಿಂದ ಮಾತ್ರ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ."

ಸಹಜವಾಗಿಯೇ ಇದನ್ನು ಕೇಳಿ ನಿಧಿ ಮತ್ತು ಐಂದ್ರಿತಾ ಕೆಂಡಮಂಡಲವಾಗಿದ್ದಾರೆ. ಹಲವರ ಪ್ರಕಾರ ಅವರಿಬ್ಬರೂ ಸದ್ಯದಲ್ಲೇ ಜಂಟಿಯಾಗಿ ಪತ್ರಿಕಾಗೋಷ್ಠಿ ಕರೆದು ರಾಗಿಣಿಯ ವಿರುದ್ಧ ಕೆಂಡಕಾರಲು ತಯಾರಾಗಿದ್ದಾರೆ. ಹಾಗೆ ನೋಡಿದರೆ ಐಂದ್ರಿತಾ ಮತ್ತು ನಿಧಿ ಅಂತಹ ಆಪ್ತಗೆಳತಿಯರೇನೂ ಅಲ್ಲ, ಆದರೆ ರಾಗಿಣಿಯ ವಿರುದ್ಧ ಆರೋಪ ಮಾಡುವ ಏಕೈಕ ಕಾರಣಕ್ಕಾಗಿ ಈಗ ಇವರಿಬ್ಬರೂ ಅತ್ಯಂತ ಆತ್ಮೀಯ ಸ್ನೇಹಿತೆಯರಾಗಿ ಪತ್ರಿಕಾಗೋಷ್ಠಿ ಕರೆಯುವ ಬಗ್ಗೆ, ಕರೆದು ರಾಗಿಣಿಯ ಮೇಲೆ ಯಾವ ರೀತಿ ಮಾತಿನ ಸುರಿಮಳೆ ಮಾಡಬೇಕು ಎಂಬುದರ ಬಗ್ಗೆ ಚರ್ಚಿಸುತ್ತಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಇವರಿಬ್ಬರು 'ಕೋರಸ್'ನಲ್ಲಿ ರಾಗಿಣಿಯ ಮೇಲೆ ಹರಿಹಾಯುವ ಬಗ್ಗೆ ಯಾವುದೇ ಸಂಶಯವಿಲ್ಲ. ನಾವು ಬಿಕಿನಿ ಧರಿಸುವುದರಿಂದ ಅವಳಿಗೇನು ಸಮಸ್ಯೆಯಾಗಿದೆ ಎಂದು ಅವರು ಪ್ರಶ್ನಿಸುವುದು ಶತಸಿದ್ಧ ಅಥವಾ ಈ ಹಿಂದೆ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸುವಾಗ ರಾಗಿಣಿ ಬಿಕಿನಿ ಧರಿಸಿಲ್ಲವೇ ಎಂದು ಆಕೆಯ ಮೇಲೆ ಆರೋಪ ಮಾಡುವ ಸಾಧ್ಯತೆಯೂ ಇದೆ.

ಅಂತೂ-ಇಂತೂ ಕನ್ನಡದ ಹುಡುಗಿಯರು ಬೋಲ್ಡ್, ಬ್ಯೂಟಿಫುಲ್, ಬಿಕಿನಿ ಧರಿಸಿ ಸುದ್ದಿ ಮಾಡುತ್ತಿರುವುದು ನೋಡಿ ನಮ್ಮ ನಾಯಕನಟರು ಕಂಗಾಲಾಗಿಬಿಟ್ಟಿದ್ದಾರೆ ಎಂಬುದು ಕುಹಕದ ಮಾತಲ್ಲ.

• ಶೆಣೈ

'ಬೋಲ್ಡ್' ನುಡಿಗಳು

ನಿಧಿ ಸುಬ್ಬಯ್ಯ ಮತ್ತು ಐಂದ್ರಿತಾ ರೈ ಈಜುಡುಗೆ ತೊಟ್ಟು ಕ್ಯಾಲೆಂಡರ್‌ನಲ್ಲಿ ಕಾಣಿಸಿಕೊಂಡ ಸುದ್ದಿಯು ಬೆನ್ನಲ್ಲೇ 'ಕನ್ನಡದ ಮಳೆ ಹುಡುಗಿ' ಎಂದೇ ಖ್ಯಾತಿ ಪಡೆದಿರುವ ಪೂಜಾ ಗಾಂಧಿ ಅವರಿಬ್ಬರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಸಿನಿಮಾ ಒಂದಕ್ಕೆ ಅರೆನಗ್ನಳಾಗಿರುವ ಸುದ್ದಿಯನ್ನು ಕಳೆದ ವಾರ ಪ್ರಕಟಿಸಿದ್ದೆವು.


ಆದರೆ ಈಗ ಪೂಜಾಳ ಅರೆ ನಗ್ನತೆ ಬಗ್ಗೆ ಗಾಂಧಿನಗರದ ಜನ ಅಪಸ್ವರದ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. "ಈಗ ಪೂಜಾಗಾಂಧಿಯ ಮಾರುಕಟ್ಟೆ ಕುಸಿದುಹೋಗಿದೆ. ಆಕೆಯ ಬಗ್ಗೆ ಪ್ರೇಕ್ಷಕರಿಗೆ ಅಂತಹ ಉತ್ಸಾಹವೇನೂ ಉಳಿದಿಲ್ಲ, ಹೀಗಾಗಿ ಇಂತಹ ಕೆಳಮಟ್ಟದ ಗಿಮಿಕ್‌ಗಳಲ್ಲಿ ಆಕೆ ತೊಡಗಿದ್ದಾಳೆ" ಎಂಬುದು ಗಾಂಧಿನಗರದವರ ಮಾತು.

ಆದರೆ ಇಂತಹ ಮಾತನ್ನು ಸಾರಾಸಗಟಾಗಿ ತಳ್ಳಿಹಾಕುವ ಪೂಜಾ "ಈ ರೀತಿ ಮಾತನಾಡುವ ಮುನ್ನ ಒಮ್ಮೆ ನಾನು ನಟಿಸಿರುವ 'ದಂಡುಪಾಳ್ಯ' ಚಿತ್ರವನ್ನು ಅವರು ನೋಡಲಿ. ನಿಜವಾಗಿಯೂ ಆ ಚಿತ್ರದಲ್ಲಿ ಆ ಪಾತ್ರಕ್ಕೆ ಹಾಗೆ ನಟಿಸುವುದು ಅಗತ್ಯವಿತ್ತೋ ಇಲ್ಲವೋ ಎಂಬುದನ್ನು ಆನಂತರ ಅವರೇ ಹೇಳಲಿ" ಎಂದು ಸುಮ್ಮನಾಗಿದ್ದಾರೆ.

"ಅಂತಹ ಪಾತ್ರವನ್ನು ಒಪ್ಪುವಂತಹ ಮನೋಸ್ಥಿತಿಗೆ ಪೂಜಾ ತಲುಪಿದ್ದಾಳೆಂದರೆ ಅದು ಆಕೆಯ ವೃತ್ತಿಜೀವನದ ಕೊನೆಯ ಅಧ್ಯಾಯ ಎಂದೇ ತಿಳಿಯಬೇಕು" ಎಂಬುದು ಕೆಲವರ ಅಭಿಪ್ರಾಯ. ಅದೇನೇ ಇರಲಿ, ಕನ್ನಡದ ನಾಯಕಿಯರು ಹೀಗೆ ಈಜುಡುಗೆ, ನಗ್ನತೆ, ಅರೆನಗ್ನತೆ ಬಗ್ಗೆ ಸಾರ್ವಜನಿಕವಾಗಿ ಬೋಲ್ಡ್ ಆಗಿ ಮಾತನಾಡುತ್ತಿರುವುದೇ ಒಂದು ಆಶ್ಚರ್ಯ:



ಸಿ.ಸಿ.ಎಲ್ ಕ್ರಿಕೆಟ್ ಟೂರ್ನಮೆಂಟ್ ಮುಂದಿನ ವಾರ ದುಬೈನಲ್ಲಿ ಅದ್ದೂರಿಯಾಗಿ ಉದ್ಘಾಟನೆಗೊಳ್ಳಲಿದೆ. ಕಳೆದ ವರ್ಷ ಅದೇ ಟೂರ್ನಿಯ ಆರಂಭದಿಂದಲೂ ಎಲ್ಲಾ ಪಂದ್ಯಗಳನ್ನು ಗೆಲ್ಲುತ್ತಾ ಬಂದ ಸುದೀಪ್ ನಾಯಕತ್ವದ ಕರ್ನಾಟಕ ಬುಲ್ಡೋಜರ್ಸ್ ತಂಡ ಅಂತಿಮವಾಗಿ ಫೈನಲ್ಸ್ ಪಂದ್ಯದಲ್ಲಿ ಮುಗ್ಗರಿಸಿದ್ದು ನಿಮಗು ಗೊತ್ತಿದೆ. ಆದರೆ ಈ ಬಾರಿಯ ವಿಶೇಷವನ್ನು ಮೊನ್ನೆ ಸುದೀಪ್ ಅವರೇ ಬಹಿರಂಗಪಡಿಸಿದ್ದಾರೆ. ಪತ್ರಕರ್ತರೊಂದಿಗೆ ಔಪಚಾರಿಕ ವಾಗಿ ಮಾತನಾಡುತ್ತಾ ಸುದೀಪ್ "ನಾನು ಮತ್ತು ದರ್ಶನ್ ಒಂದು ಚಿತ್ರದಲ್ಲಿ ಒಟ್ಟಿಗೆ ಯಾವಾಗ ನಟಿಸುತ್ತೇವೋ ಗೊತ್ತಿಲ್ಲ. ಆದ ಈ ಬಾರಿ ನಾವಿಬ್ಬರೂ ಒಟ್ಟಿಗೆ ಸಿ.ಸಿ.ಎಲ್. ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಆಡಲಿದ್ದೇವೆ" ಎಂದರು. ಸುದೀಪ್ ಹೇಳಿದ ಮಾತು ಗಾಂಧಿನಗರದಲ್ಲಿ ಹಲವಾರು ಊಹಾ-ಪೋಹಗಳಿಗೆ ಎ ಮಾಡಿಕೊಟ್ಟಿದೆ. ಅದರಲ್ಲೂ ಮುಖ್ಯವಾಗಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಸಿ.ಸಿ.ಎಲ್. ತಂಡದಲ್ಲಿ ಯಾರ ಬದಲಿಗೆ ಆಡುತ್ತಾರೆ ಎಂಬುದೇ ಈಗ ಅತ್ಯಂತ ಚರ್ಚೆಯ ವಿಷಯವಾಗಿದೆ. ಕೆಲವರ ಪ್ರಕಾರ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಕ್ರಿಕೆಟ್ ಪಂದ್ಯ ನಡೆದಾಗ ಸುದೀಪ್ ಮತ್ತು ಶಿವರಾಜ್‌ಕುಮಾರ್ ತಂಡಗಳ ನಡುವೆ ಮಾತಿನ ಚಕಮಕಿ ನಡೆದಿದ್ದರಿಂದ ಈ ಬಾರಿ



ಶಿವಣ್ಣ ಆಡದೇ ಇರುವ ಸಾಧ್ಯತೆ ಇದೆಯಂತೆ. ಇನ್ನೂ ಕೆಲವರ ಪ್ರಕಾರ ಶಿವಣ್ಣನ ಬದಲಿಗೆ ದರ್ಶನ್‌ನನ್ನು ತಂಡಕ್ಕೆ ಸೇರಿಸಿಕೊಳ್ಳಲು ಸುದೀಪ್ ತೆರೆಮರೆಯಲ್ಲಿ ಹುನ್ನಾರ ನಡೆಸಿದ್ದಾರಂತೆ. ಇವೆರಡರಲ್ಲಿ ಯಾವುದು ಸ ಯಾವುದು ಅಸತ್ಯ ಎಂಬುದು ಗೊತ್ತಿಲ್ಲ.

ಬಾಲಿವುಡ್ ನಟಿಯರ ನಗ್ನಾವತಾರ!

ನಮ್ಮ ಸ್ಯಾಂಡಲ್‌ವುಡ್ ನಟಿಯರು ಕೇವಲ ಬಿಕಿನಿ ತೊಡುವ ಬಗ್ಗೆ ಕಿತ್ತಾಡುತ್ತಿದ್ದರೆ ಬಾಲಿವುಡ್‌ನ ನಟಿಯರು ಸಂಪೂರ್ಣ ನಗ್ನರಾಗಿ ಸುದ್ದಿ ಮಾಡುತ್ತಿದ್ದಾರೆ.

ಈ ವರ್ಷ ನಡೆದ ವರ್ಲ್ಡ್ ಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ ಗೆದ್ದರೆ ತಾನು ತಂಡದ ಯುವಕರ ಮುಂದೆ ನಗ್ನಳಾಗಿ ನಿಲ್ಲುವ ಮೂಲಕ ಅವರಿಗೆ ತನ್ನ ಅಭಿನಂದನೆಯನ್ನು ಸೂಚಿಸುತ್ತೇನೆ ಎಂದು ಫುಲ್‌ಟೈಮ್ ಮಾಡೆಲ್ ಕಂ ಪಾರ್ಟ್‌ಟೈಮ್ ನಟಿ ಪೂನಮ್ ಪಾಂಡೆ ಹೇಳಿದ್ದಳಲ್ಲ? ಆನಂತರ ಆಕೆ ಹಾಗೆ ಮಾಡಲಿಲ್ಲ, ಆದರೆ ಈಕೆಯ ಈ 'ದೇಶಪ್ರೇಮ'ದ ಪರಿಗೆ ಮಾರುಹೋದ ಹಲವು ಜನ ಆಕೆಯಿಂದ ಮೊನ್ನೆಯ ಹೊಸ ವರ್ಷಾಚರಣೆಯಲ್ಲಿ ಕುಣಿಸಿ ಆನಂದ ಪಟ್ಟಿದ್ದಾರೆ. ಅಂದಹಾಗೆ, ಆಕೆಯ ಕುಣಿತಕ್ಕೆ ಆ ಅಭಿಮಾನಿಗಳು ಕೊಟ್ಟ ಸಂಭಾವನೆಯ ಮೊತ್ತ ಎಷ್ಟು ಗೊತ್ತಾ? ಎರಡು ಕೋಟಿ ರೂಪಾಯಿಗಳು!



ಇನ್ನು ವೀನಾ ಮಲ್ಲಿಕ್ ಎಂಬ ಪಾಕಿಸ್ತಾನದ ನಟಿ ಕೂಡ ಮೊನ್ನೆ ಎಫ್‌ಎಂಎಚ್ ಎಂಬ ಭಾರತೀಯ ಇಂಗ್ಲಿಷ್ ಮ್ಯಾಗ್‌ಜೇನಿನ ಮುಖಪುಟಕ್ಕೆ ಪೋಸ್ ಕೊಡುವ ಮೂಲಕ ಸುದ್ದಿ ಮಾಡಿದ್ದಾಳೆ. ಹಾಗೆ ಪೋಸ್ ಕೊಟ್ಟಾಗ ಆಕೆಯ ಮೈಮೇಲೆ ಒಂದಿಂಚೂ ಬಟ್ಟೆ ಇರದಿದ್ದರೂ ಆಕೆಯ ತೋಳಿನ ಮೇಲೆ 'ಐಎಸ್‌ಐ' ಎಂದು ಬರೆಯಲಾಗಿತ್ತು.

ಈ ನಗ್ನ ಚಿತ್ರದ ಸುತ್ತ ವಿವಾದ ಎದ್ದಾಗ ವೀನಾ ಮಲ್ಲಿಕ್ ನಾಪತ್ತೆಯಾದಳು. ಆದೂ ಕೂಡ ದೊಡ್ಡ ವಿವಾದವಾದಾಗ ಪ್ರತ್ಯಕ್ಷಳಾದ ವೀನಾ ತಾನು ಯಾವುದೋ ಹೋಟೆಲ್ ಒಂದರಲ್ಲಿ ನಿದ್ದೆ ಮಾಡುತ್ತಿದ್ದೆ ಎಂದಳು. ಅದೇನೇ ಇರಲ್ಲಿ, ಈ ಬಿಚ್ಚಮ್ಮಗಳು ಹೀಗೂ ಸುದ್ದಿ ಮಾಡಬಹುದೆಂದು ತೋರಿಸಿದ್ದಾರೆ...



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com ... Industrial Estate, Rajajinagar, Bangalore-4